ಪಂಚವರ್ಣೆ


ಡಾ. ಮೀರಾ ಹೆಚ್.ಎನ್.

ಮಲ್ಲೇಶ್ವರಂ ಲೇಡೀಸ್ ಅಸೋಸಿಯೇಷನ್ ಪ್ರಾಯೋಜಿಸುತ್ತಿರುವ ಡಾ. ಮೀರಾ ಹೆಚ್.ಎನ್. ಅವರ 'ಪಂಚವರ್ಣೆ' ಏಕವ್ಯಕ್ತಿ ನಾಟಕ ಪ್ರದರ್ಶನವು ಇದೇ 30ರಂದು ಮಲ್ಲೇಶ್ವಂನ ಎಮ್.ಎಲ್.ಎ. ಕಾಲೇಜಿನ ಸಭಾಂಗಣದಲ್ಲಿ ಸಂಜೆ 5.30ಕ್ಕೆ ನಡೆಯಲಿದೆ.

ಈ ನಾಟಕವು ಈ ಶತಶತಮಾನಗಳ ಹಾಗೂ ಪ್ರಸ್ತುತ ಪ್ರಶ್ನೆಗಳಿಗೆ ಉತ್ತರ ಹುಡುಕುವ ಸಣ್ಣ ಪ್ರಯತ್ನವಾಗಿದೆ. 'ಪಂಚವರ್ಣೆ' ನಾಟಕವು ದ್ರೌಪದಿಯ ಬದುಕಿನ ಆಯ್ಕೆಗಳ ಅಂತರಂಗ - ಬಹಿರಂಗವಾದರೂ, ಎಲ್ಲ ಹೆಣ್ಣುಮಕ್ಕಳಿಗೂ ಅನ್ವಯಿಸಬಹುದಾದ ಸತ್ಯದ ಅನಾವರಣವಿದೆ.

ಕಾಜಾಣ ಪ್ರಸ್ತುತಿಯಾದ ಈ ಏಕವ್ಯಕ್ತಿ ದೃಶ್ಯರೂಪಕದ ಸಾಹಿತ್ಯ ರಚನೆ, ವಿನ್ಯಾಸ ಹಾಗೂ ನಿರ್ದೇಶನವನ್ನು ಖ್ಯಾತ ಸಾಹಿತಿ ಹಾಗೂ ರಂಗನಿರ್ದೇಶಕ ಡಾ. ಬೇಲೂರು ರಘುನಂದನ್ ಮಾಡಿದ್ದು, ಡಾ. ಮೀರಾ ಎಚ್. ಎನ್. ಅಭಿನಯಿಸಲಿದ್ದಾರೆ. ಈ ಪ್ರಯೋಗಕ್ಕೆ ಶ್ರೀನಿವಾಸ್ ಪಿ.ಎಚ್. ಅವರ ಹಿನ್ನೆಲೆ ಗಾಯನ ಹಾಗೂ ಸಂಗೀತವಿದ್ದು, ರವಿಶಂಕರ್ ಅವರ ಬೆಳಕಿನ ವಿನ್ಯಾಸ ಹಾಗೂ ಶ್ರೀನಿ ಸಂಪತ್ ಲಕ್ಷ್ಮಿಯವರ ಸಂಗೀತ ನಿರ್ವಹಣೆ ಇದೆ.

ಡಾ. ಮೀರಾ ಎಚ್. ಎನ್. ಮೂಲತಃ ತುಮಕೂರಿನವರಾಗಿದ್ದು, ವೃತ್ತಿಯಲ್ಲಿ ಅಧ್ಯಾಪಕಿ, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲೆಯಾಗಿ ಕೆಲಸ ನಿರ್ವಹಿಸಿದ ಇವರು, ಈಗ ಎಮ್.ಎಲ್.ಎ ಕಾಲೇಜಲ್ಲಿ ವಾಣಿಜ್ಯ ವಿಭಾಗದಲ್ಲಿ ಅಧ್ಯಾಪಕಿಯಾಗಿದ್ದಾರೆ.

ಇಂದು 'ಯಾಜಿ ಸುವರ್ಣ ಸಂಭ್ರಮ'

ದಿನಾಂಕ: 26 ಅಕ್ಟೋಬರ್ 2024, ಶನಿವಾರ
ಸಮಯ: ರಾತ್ರಿ 10 ಗಂಟೆಗೆ
ಸ್ಥಳ: ರವೀಂದ್ರ ಕಲಾಕ್ಷೇತ್ರ


ಬಳ್ಕೂರು ಕೃಷ್ಣ ಯಾಜಿ
ಚಿತ್ರ: ಪಿ.ಕೆ.ಜೈನ್

ಬಳ್ಕೂರು ಕೃಷ್ಣ ಯಾಜಿ ಬಡಗುತಿಟ್ಟು ಯಕ್ಷ ರಂಗದ ಮೇರು ಕಲಾವಿದ. ಅವರ ವೇಷಗಳು, ಪಾತ್ರಗಳು ಜನಪ್ರಿಯ, ಅಷ್ಟೇ ಪರಿಣಾಮಕಾರಿ. ಗತ್ತಿನ, ಲಯಬದ್ಧ ಕುಣಿತ, ಭಾವಾಭಿನಯ ಮತ್ತು ಪಾತ್ರೋಚಿತ ಮಾತುಗಾರಿಕೆ. ಅವರೊಬ್ಬ ಅಪೂರ್ವ ಕಲಾವಿದ.


ನಾಯಕ ಪಾತ್ರಗಳಷ್ಟೇ ಪರಿಣಾಮಕಾರಿಯಾಗಿ ಪ್ರತಿ ನಾಯಕ ಪಾತ್ರಗಳನ್ನೂ ರಂಗದಲ್ಲಿ ಬಿಂಬಿಸುವ ಸಾಮರ್ಥ್ಯವಿರುವ ಬಳ್ಕೂರು ಕೃಷ್ಣ ಯಾಜಿ, ಆರಂಭದಲ್ಲೇ ಕೃಷ್ಣನ ವೇಷಕ್ಕೆ ಹೆಚ್ಚು ಪ್ರಸಿದ್ಧಿ ಪಡೆದವರು. ಕೆರೆಮನೆ ಮಹಾಬಲ ಹೆಗಡೆಯವರ ಮೂಲಕ ಹೆಜ್ಜೆ ಕಲಿತು ರಂಗ ಪ್ರವೇಶಿಸಿದ ಕೃಷ್ಣ ಯಾಜಿ ಅವರು, 1973ರಲ್ಲಿ ಇಡಗುಂಜಿ ಮೇಳದ ಮೂಲಕ ರಂಗಕ್ಕೆ ಪದಾರ್ಪಣೆ ಮಾಡಿದ್ದರು. ನಂತರ ಕೋಟ ಅಮೃತೇಶ್ವರಿ, ಕಮಲಶಿಲೆ ಮೇಳಗಳ ಬಳಿಕ ಸಾಲಿಗ್ರಾಮ ಡೇರೆ ಮೇಳ ಸೇರಿ ಪರಿಪಕ್ವಗೊಂಡರು. ಸಾಲಿಗ್ರಾಮ ಮೇಳದಲ್ಲೇ 29 ವರ್ಷ ತಿರುಗಾಟ ಮಾಡಿ, ಯಕ್ಷರಂಗದ ಎಲ್ಲ ರೀತಿಯ ಪಾತ್ರಗಳಿಗೂ ಸೈ ಅನ್ನಿಸಿಕೊಂಡು, ತಮ್ಮ ಮಾತು ಮತ್ತು ಗತ್ತಿನ ಕುಣಿತದ ಶೈಲಿಯಿಂದಾಗಿ, ಅಪಾರ ಅಭಿಮಾನಿಗಳನ್ನು ಸಂಪಾದಿಸಿದರು. ಯಾಜಿ ಯಕ್ಷ ಮಿತ್ರ ಮಂಡಳಿ ಮೂಲಕ ಪರಂಪರೆಯ ಪೌರಾಣಿಕ ಕಥಾನಕಗಳನ್ನು ಅಲ್ಲಲ್ಲಿ ಪ್ರದರ್ಶಿಸುತ್ತಾ ಬಂದಿದ್ದಾರೆ.

2017ರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೃಷ್ಣ ಯಾಜಿ ಅವರು ಯಕ್ಷಗಾನ ರಂಗ ಪ್ರವೇಶಿಸಿ ಐದು ದಶಕಗಳು ಸಂದಿವೆ. ಇದರ ನೆನಪಿಗಾಗಿ ಮೊಗವೀರ ಸಂಘ, ಯಕ್ಷನಕ್ಷತ್ರ ಟ್ರಸ್ಟ್ ಕಿರಾಡಿ ಮತ್ತು ಅತಿಥಿ ಕಲಾವಿದರ ಸಹಯೋಗದಲ್ಲಿ ಶನಿವಾರ 'ಯಾಜಿ ಸುವರ್ಣ ಸಂಭ್ರಮ' ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ರಾತ್ರಿ 10 ಗಂಟೆಗೆ 'ಯಾಜಿ ಬಣ್ಣದ ಬದುಕಿನ ಯಕ್ಷಯಾನ' ಉಪಶೀರ್ಷಿಕೆಯಡಿ, ಅವರದೇ ಸಂಯೋಜನೆಯಲ್ಲಿ ನಡೆಯುತ್ತಿರುವ ಈ ಯಕ್ಷಗಾನ ಕಾರ್ಯಕ್ರಮದಲ್ಲಿ 'ದೇವವ್ರತ, ಯಾತ್ರಾವ್ರತ ಮತ್ತು ಹರಿವ್ರತ'- ಎಂಬ ಮೂರು ಪ್ರಸಂಗಗಳನ್ನು ಪ್ರಖ್ಯಾತ ಕಲಾವಿದರ ಮೂಲಕ ಪ್ರಸ್ತುತಪಡಿಸಲಾಗುತ್ತದೆ.

ಭಾಗವತಿಕೆಯಲ್ಲಿ ರಾಮಕೃಷ್ಣ ಹೆಗಡೆ ಹಿಲ್ಲೂರು, ನಾಗೇಶ್ ಕುಲಾಲ್ ನಾಗರಕೊಡಿಗೆ, ಮಧುಕರ ಹೆಗಡೆ ಮಡಾಮಕ್ಕಿ ಇರುತ್ತಾರೆ. ಮದ್ದಳೆಯಲ್ಲಿ ಪರಮೇಶ್ವರಿ ಭಂಡಾರಿ ಕರ್ಕಿ, ಶಶಾಂಕ್ ಆಚಾರ್ ಕಿರಿಮಂಜೇಶ್ವರ, ಚಂಡೆಯಲ್ಲಿ ರಾಕೇಶ್ ಮಲ್ಯ ಹಳ್ಳಾಡಿ, ಶ್ರೀಕಾಂತ್ ಶೆಟ್ಟಿ ಯಡಮೊಗೆ ಸಾಥ್ ನೀಡಲಿದ್ದಾರೆ. ಹಾಸ್ಯ ಪಾತ್ರದಲ್ಲಿ ಶ್ರೀಧರ್ ಭಟ್ ಕಾಸರಕೋಡು, ಕಾರ್ತಿಕ್ ರಾವ್ ಪಾಂಡೇಶ್ವರ ಪಾಲ್ಗೊಳ್ಳಲಿದ್ದಾರೆ. ಸ್ತ್ರೀವೇಷದಲ್ಲಿ ಸಂತೋಷ್ ಹಿಲಿಯಾಣ, ಗೋವಿಂದ ವಂಡಾರು, ಸಚಿನ್ ಶೆಟ್ಟಿ ನಾಗರಕೊಡಿಗೆ, ವಸಂತ ಚಿಕೊಳ್ಳಿ, ಅಕ್ಷಯ್ ಶಿರಿಯಾರ ಕಾಣಿಸಿಕೊಳ್ಳಲಿದ್ದಾರೆ.

ಅತಿಥಿ ಕಲಾವಿದರಾಗಿ ಹಾಸ್ಯರತ್ನ ಹಳ್ಳಾಡಿ ಜಯರಾಂ ಶೆಟ್ಟಿ, ಯಾಜಿಯವರ ಮೊಮ್ಮಗ ಅಭಿಷೇಕ್ ಅಡಿ ಗೋಕರ್ಣ ಭಾಗವಹಿಸುತ್ತಿದ್ದಾರೆ. ಮುಮ್ಮೇಳದಲ್ಲಿ ಕೃಷ್ಣ ಯಾಜಿ ಬಳ್ಕೂರು, ಮಂಕಿ ಈಶ್ವರ ನಾಯ್ಕ್, ಪ್ರಸನ್ನ ಶೆಟ್ಟಿಗಾರ್ ಮಂದರ್ತಿ, ಪ್ರಕಾಶ್ ಮೊಗವೀರ ಕಿರಾಡಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.


VISHWA VAJRAH DIAMOND EXHIBITION
11th EDITION
SULTHAN DIAMONDS & GOLD
"For the first time ever, South India's top diamond jewellery exhibition is being hosted simultaneously at our Jayanagar and Ulsoor showrooms."
VISHWA VAJRAH
DIAMOND EXHIBITION
18TH OCT - 3RD NOV
FLAT ₹8000 DISCOUNT PER DIAMOND CARAT
Use the Code PV2024 and get Additional Discount ₹ 1000 PER CARAT
Ulsoor Road: Via Dickenson Rd. Near Paaka Shaala. Ph: 080 25599916
Jayanagar: 3rd Block Near Pai Viceroy Hotel. Ph: 080 26535916
Now Open at Beary's Amity, Opp. BDA Complex, 1st Stage, 3rd Block HBR Layout, Ph: 080-40996916

29ರವರೆಗೆ ನಿಖಿಲ್ ಇನಾಯ ಕಲಾಕೃತಿ ಪ್ರದರ್ಶನ


ನಿಖಿಲ್ ಇನಾಯ

ಬೆಂಗಳೂರು ಮೂಲದ, ಸದ್ಯ ಲಂಡನ್ ವಾಸಿಯಾಗಿರುವ ನಿಖಿಲ್ ಇನಾಯ ಅವರ ವರ್ಣಚಿತ್ರಗಳು ನಗರದಲ್ಲಿ ಪ್ರದರ್ಶನಗೊಳ್ಳುತ್ತಿವೆ. ಇನಾಯ ಅವರ ಕುಂಚದಲ್ಲಿ ಸಂಸ್ಕೃತಿ, ಸಂಪ್ರದಾಯದ ಪ್ರತೀಕವಾದ ಚಿತ್ರಗಳು ಅರಳಿವೆ. ಭಾರತ ಮತ್ತು ವಿದೇಶಗಳಲ್ಲಿ ತಮ್ಮ ಅಜ್ಜಿ ಜೊತೆಯಲ್ಲಿ ವಾಸವಿದ್ದಾಗ ರಚಿಸಿದ ಚಿತ್ರಗಳೂ ಪ್ರದರ್ಶನಗೊಳ್ಳಲಿವೆ. ತನ್ನ ಅಜ್ಜಿ ಶಾಂತನಾಯಕಿ ಬಾಲಸುಬ್ರಮಣ್ಯಂ ಅವರ ನೆನಪಿಗಾಗಿ ಈ ಪ್ರದರ್ಶನ ಆಯೋಜನೆಗೊಂಡಿದೆ. ಈ ಹಿಂದೆ ಅವರು ತಮ್ಮ ವರ್ಣಚಿತ್ರಗಳನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು, ಆರ್ಟ್ ಹೌಸ್ ಇಂಡಿಯಾ ಮತ್ತು ಹಾಂಗ್ ಕಾಂಗ್ ವಿಷುಯಲ್ ಆರ್ಟ್ಸ್ ಸೆಂಟರ್‌ನಲ್ಲಿ ಪ್ರದರ್ಶಿಸಿದ್ದಾರೆ.

- **ದಿನಾಂಕ:** ಅಕ್ಟೋಬರ್ 25 ರಿಂದ 29ರವರೆಗೆ
- **ಸಮಯ:** ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ
- **ಸ್ಥಳ:** ಹೌಸ್ ಆರ್ಟ್ ಗ್ಯಾಲರಿ, ಅರಮನೆ ರಸ್ತೆ, ವಸಂತನಗರ (ಮೌಂಟ್ ಕಾರ್ಮೆಲ್ ಕಾಲೇಜು ಬಳಿ)



'ಅನ್ನಮಯ್ಯ ಸಂಕೀರ್ತನಾ ಸುಧಾ' ಇಂದು


ಡಾ. ರಕ್ಷಾ

ಸಂಕೀರ್ತನಾಚಾರ್ಯ ಅನ್ನಮಯ್ಯ ಅವರಿಗೆ ಆಚಾರ್ಯ ಡಾ. ರಕ್ಷಾ ಮತ್ತು ಅವರ ಶಿಷ್ಯರಿಂದ ಅಕ್ಟೋಬರ್ 26ರಂದು ಶನಿವಾರ ಸಂಜೆ 5ಗಂಟೆಗೆ ಭರತನಾಟ್ಯ ನಮನ ಕಾರ್ಯಕ್ರಮ ನಡೆಯಲಿದೆ.

ಅನ್ನಮಯ್ಯ, ತೆಲುಗು ಭಕ್ತಿ ಕಾವ್ಯದ ಪಿತಾಮಹನಾಗಿ ಪರಿಗಣಿಸಲ್ಪಟ್ಟಿದ್ದು, 15ನೇ ಶತಮಾನದ ಸಂತ-ಸಂಗೀತಗಾರ. ಸಂತ-ಸಂಯೋಜಕ, ಅವರ ಕೃತಿಗಳು ದಕ್ಷಿಣ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಸಾಹಿತ್ಯದಲ್ಲಿ ಅಳಿಸಲಾಗದ ಛಾಪು ಮೂಡಿಸಿವೆ. ಶ್ರೀ ವೆಂಕಟೇಶ್ವರ ಸ್ವಾಮಿಯ ಭಕ್ತರಾಗಿದ್ದ ಅನ್ನಮಯ್ಯ 32,000ಕ್ಕೂ ಹೆಚ್ಚು ಸಂಕೀರ್ತನೆಗಳನ್ನು ರಚಿಸಿದ್ದು, ಅವುಗಳಲ್ಲಿ ಅನೇಕವು ದೇವಸ್ಥಾನಗಳಲ್ಲಿ ಮತ್ತು ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳಲ್ಲಿ ಈಗಲೂ ಹಾಡಲ್ಪಡುತ್ತಿವೆ. ಭಕ್ತಿ ರಸದಿಂದ ತುಂಬಿದ ಅವರ ಕಾವ್ಯಗಳು ಆಧ್ಯಾತ್ಮಿಕ ದಾರ್ಶನಿಕತೆ ಮತ್ತು ಮಾನವೀಯ ಭಾವನೆಗಳ ಸಾರವನ್ನು ಪಸರಿಸುತ್ತಿವೆ.

ಸಾನ್ನಿಧ್ಯ: ಮೇಲುಕೋಟೆಯ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮಿ, ಪ್ರೊ. ಸದಾಗೋಪನ್, ಐಐಟಿ, ಮಾಜಿ ಸಂಸದ ಕೆ.ಸಿ.ರಾಮಮೂರ್ತಿ. ಪಕ್ಕ ವಾದ್ಯದಲ್ಲಿ: ನಟ್ಟುವಾಂಗಂ: ವಿದ್ವಾನ್ ದೇವರಾಜು ಬಿ.ವಿ, ಹಾಡುಗಾರಿಕೆ : ವಿದ್ವಾನ್ ಬಾಲಸುಬ್ರಮಣ್ಯ ಶರ್ಮ, ಮೃದಂಗಂ: ವಿದ್ವಾನ್ ಶ್ರೀಹರಿ ರಂಗಸ್ವಾಮಿ, ವೀಣೆ: ವಿದ್ವಾನ್ ಗೋಪಾಲ ವೆಂಕಟರಮಣ, ಬಾಂಸುರಿ / ಕೊಳಲು : ವಿದ್ವಾನ್ ಜಯರಾಮ ಕಿಕ್ಕೇರಿ, ರಿದಮ್ ಪ್ಯಾಡ್: ವಿದ್ವಾನ್ ಪ್ರಸನ್ನ ಕುಮಾರ್.

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಕಲಾಸಿಪಾಳ್ಯ, ಸಂಪಂಗಿರಾಮನಗರ. ಮಾಹಿತಿಗಾಗಿ 98861 07701 ಸಂಪರ್ಕಿಸಿ.

20ನೇ ಶತಮಾನದ ಕಲಾಕೃತಿ ಪ್ರದರ್ಶನ


ಪ್ರದರ್ಶನ ವೀಕ್ಷಿಸುತ್ತಿರುವ ಚಿತ್ರಕಲಾ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ಶಶಿಧರ್ ರಾವ್, ಖ್ಯಾತ ಕಲಾವಿದ ಡಾ. ಎಂ.ಎಸ್ ಮೂರ್ತಿ, ಚಿತ್ರಕಲಾ ಪರಿಷತ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಪ್ರೊ. ಕೆ.ಎಸ್. ಅಪ್ಪಾಜಯ್ಯ, ಪರಿಷತ್‌ನ ಖಜಾಂಜಿ ಡಾ. ಲಕ್ಷ್ಮಿಪತಿ ಬಾಬು, ಹಿರಿಯ ಇತಿಹಾಸಕಾರ ಕೆ.ವಿ ಸುಬ್ರಹ್ಮಣ್ಯ

20ನೇ ಶತಮಾನದ ಕರ್ನಾಟಕದ ಹಲವು ಕಲಾವಿದರ ಕಲಾಕೃತಿಗಳು ಚಿತ್ರಕಲಾ ಪರಿಷತ್‌ನಲ್ಲಿ ಪ್ರದರ್ಶನಗೊಳ್ಳುತ್ತಿವೆ. ಕೆ. ವೆಂಕಟಪ್ಪ, ಹನುಮಯ್ಯ, ರುಮಾಲೆ ಚನ್ನಬಸವಯ್ಯ, ಎಂ.ಎಸ್ ಚಂದ್ರಶೇಖರ, ಎಂ.ಜಿ ಶುದ್ಧೋದನ, ವಿ.ಆರ್ ಆಚಾರ್ಯ, ಕೆ.ಕೆ ಹೆಬ್ಬಾರ್, ಯೂಸುಫ್ ಅರೆಕ್ಕಳ, ತಿಪ್ಪೇಸ್ವಾಮಿ, ವೈ ಸುಬ್ರಹ್ಮಣ್ಯ ರಾಜು, ಎಂ.ಎ ಚೆಟ್ಟಿ ಸೇರಿ 60 ಅಧಿಕ ಕಲಾವಿದರ ಸುಮಾರು 180 ಕಲಾಕೃತಿಗಳ ಪ್ರದರ್ಶನ ನಡೆಯುತ್ತಿದೆ.

ಕನ್ನಡದ ಕಲಾವಿದರನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಈ ಪ್ರದರ್ಶನ ಆಯೋಜಿಸಲಾಗಿದೆ. ಈ ಪ್ರದರ್ಶನವನ್ನು ಸರಣಿ ರೂಪದಲ್ಲಿ ನಡೆಸುವ ಉದ್ದೇಶವಿದ್ದು, ಮೊದಲ ಭಾಗವಾಗಿ ಅಗಲಿದ ಕಲಾವಿದರ ರಚನೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಹಲವು ಕಲಾವಿದ ವಿವಿಧ ಶೈಲಿಯ ಕಲಾಕೃತಿಗಳು ಒಂದೇ ಸೂರಿನಡಿ ಪ್ರದರ್ಶನಕ್ಕಿಡಲಾಗಿದೆ. ಪ್ರಕೃತಿ, ಸ್ಮಾರಕ, ರೇಖಾಚಿತ್ರ, ವರ್ಣಚಿತ್ರ ಮುಂತಾದ ವಿವಿಧ ಪ್ರಕಾರಗಳ ಕಲಾಕೃತಿಗಳಿವೆ.

'20 ನೇ ಶತಮಾನದಲ್ಲಿ, ಕರ್ನಾಟಕದ ಅಸ್ಮಿತೆಯನ್ನು ದೃಶ್ಯಾತ್ಮಕವಾಗಿ ಕಟ್ಟಿಕೊಟ್ಟ ಹಿರಿಯ ಕಲಾವಿದರಿಗೆ ನೀಡುವ ಗೌರವ ಇದು. ಈ ಕಲಾವಿದರು ಇಂದು ನಮ್ಮೊಂದಿಗಿಲ್ಲವಾದರೂ, ಕರ್ನಾಟಕದ ಪರಂಪರೆಯ ಹೆಗ್ಗುರುತುಗಳಾಗಿರುವ ಅವರ ಕಲಾಕೃತಿಗಳು ಇಂದಿಗೂ ಕರ್ನಾಟಕದ ಕಲಾ ಪ್ರಪಂಚವನ್ನು ಒಂದಿಲ್ಲೊಂದು ರೀತಿಯಲ್ಲಿ ರೂಪಿಸುತ್ತಿವೆ. ಅವರ ಕಲಾಕೃತಿಗಳು ಸಂಪ್ರದಾಯವನ್ನೂ, ಆಧುನಿಕತೆಯನ್ನೂ ಹದವಾಗಿ ಬೆರೆಸುವ ಕಾಲಾತೀತ ಕೊಂಡಿಗಳಾಗಿರುವ ಕಾರಣ, ಅವು ಇಂದಿಗೂ ನಮ್ಮೆದೆಗಳಲ್ಲಿ ಮಾರ್ದನಿಸುತ್ತಿವೆ' ಎಂದು ಚಿತ್ರಕಲಾ ಪರಿಷತ್ ಪ್ರಕಟಣೆಯಲ್ಲಿ ಹೇಳಿದೆ.


ಕನ್ನಡದ ಕಲಾವಿದರಿಗೆ ಗ್ಯಾಲರಿ

ಚಿತ್ರಕಲಾ ಪರಿಷತ್‌ನ ವಸ್ತುಸಂಗ್ರಹಾಲಯದಲ್ಲಿ ಕನ್ನಡದ ಕಲಾವಿದರಿಗೆ ಮಾತ್ರ ಪ್ರತ್ಯೇಕ ಗ್ಯಾಲರಿ ಮಾಡುವ ಇರಾದೆ ಇದೆ. ಈ ಪ್ರದರ್ಶನ ಆ ಯೋಜನೆಯ ಒಂದು ಭಾಗ. ಈ ಪ್ರದರ್ಶನದಲ್ಲಿ ಇರುವ ಹಲವು ಕಲಾಕೃತಿಗಳು ಆ ಗ್ಯಾಲರಿಯಲ್ಲಿ ಜಾಗ ಪಡೆಯಲಿವೆ.

'ಗ್ರಾಮೀಣ ಬದುಕು, ಭೌಗೋಳಿಕ ಭೂದೃಶ್ಯ, ಪೌರಾಣಿಕತೆ, ಆಧುನಿಕತೆ, ಸಂಪ್ರದಾಯ, ಸಂಸ್ಕೃತಿ, ಸಮಾಜ, ಪರಿಸರವನ್ನು ಪ್ರತಿಬಿಂಬಿಸುವ ಕಲಾಕೃತಿಗಳ ಪ್ರದರ್ಶನ ನಡೆಯುತ್ತಿದೆ. ನೂರು ವರ್ಷದ ಹಳೆಯ ಕಲಾಕೃತಿಗಳು ಇವೆ. ವಿವಿಧ ಕಡೆಗಳಿಂದ ಈ ಕಲಾಕೃತಿಗಳನ್ನು ಸಂಗ್ರಹಿಸಿ ಇಲ್ಲಿಗೆ ತರಲಾಗಿದೆ. ಹೊಸ ತಲೆಮಾರಿಗೆ ಕನ್ನಡದ ಕಲಾವಿದರ ಪರಂಪರೆಯನ್ನು ದಾಟಿಸುವ ಉದ್ದೇಶ ಈ ಪ್ರದರ್ಶನದ್ದು' ಎಂದು ಚಿತ್ರಕಲಾ ಪರಿಷತ್ ವಸ್ತುಸಂಗ್ರಹಾಲಯದ ಕ್ಯುರೇಟರ್ ಡಾ. ಸಿ.ಎಸ್. ವಿಜಯಶ್ರೀ ಹೇಳಿದರು.

ಅಕ್ಟೋಬರ್ 23ರಿಂದ ಈ ಪ್ರದರ್ಶನ ಆರಂಭವಾಗಿದ್ದು, 30ರವರೆಗೆ ಇರಲಿದೆ. ಬೆಳಿಗ್ಗೆ 10.30ರಿಂದ ಸಂಜೆ 7ರವರೆಗೂ ಪ್ರವೇಶ ಇರಲಿದೆ. ಯಾವುದೇ ಪ್ರವೇಶ ಶುಲ್ಕ ಇಲ್ಲ.

ಅಕ್ಟೋಬರ್ 28ರಂದು ಸಂಜೆ 4 ಗಂಟೆಗೆ ಪ್ರೊ. ಡಾ. ಚೂಡಾಮಣಿ ನಂದಗೋಪಾಲ್ ಅವರ ನೇತೃತ್ವದಲ್ಲಿ ಗ್ಯಾಲರಿ ವಾಕ್ ಇರಲಿದ್ದು, ಆಸಕ್ತರು ಭಾಗವಹಿಸಬಹುದು. ಸಂಪರ್ಕಕ್ಕೆ: 9513011246




THE RESPONSIBLE JEWELLER
ಮಲಬಾರ್ ಗೋಲ್ಡ್ & ಡೈಮಂಡ್ಸ್
ಪ್ರತಿ ಹಬ್ಬದೊಂದಿಗೂ ಮಲಬಾರ್
Swarnakriti
THE LEGACY IS YOU
An exclusive collection handcrafted in gold
ಪ್ರತಿ ಖರೀದಿಯಲ್ಲಿ ಇನ್ನಷ್ಟು ಚಿನ್ನವನ್ನು ಪಡೆಯಿರಿ ₹50,000
ಪಡೆಯಿರಿ 200 mg ಚಿನ್ನದ ನಾಣ್ಯ ಚಿನ್ನಾಭರಣಗಳ ಮೇಲೆ
ಪಡೆಯಿರಿ 300 mg ಚಿನ್ನದ ನಾಣ್ಯ ಪ್ರಿಶಿಯಸ್, ಪೋಲ್ಕಿ ಮತ್ತು ಅನ್‌ಕಟ್ ಆಭರಣಗಳ ಮೇಲೆ
ಪಡೆಯಿರಿ 400 mg ಚಿನ್ನದ ನಾಣ್ಯ ವಜ್ರಾಭರಣಗಳ ಮೇಲೆ
ಈ ಕೊಡುಗೆಗಳು 3ನೇ ನವೆಂಬರ್, 2024 ರವರೆಗೆ ಮಾನ್ಯವಾಗಿರುತ್ತದೆ.
ಮುಂಗಡ ಬುಕ್ಕಿಂಗ್ ಯೋಜನೆ
ಈ ಧನ್‌ತೇರಸ್‌ಗೆ, ಮುಂಗಡವಾಗಿ 10% ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ. ಚಾಲ್ತಿಯಲ್ಲಿರುವ ಬೆಲೆ ಅಥವಾ ಕಾಯ್ದಿರಿಸಿದ ಬೆಲೆ ಇದರಲ್ಲಿ ಕಡಿಮೆ ಇರುವ ಬೆಲೆಯಲ್ಲಿ ಆಭರಣಗಳನ್ನು ಖರೀದಿಸಿ.
HDFC BANK
UP TO ₹5000 Instant Discount*
On HDFC Bank Credit Cards
Offer: 2% Discount, Min Txn : ₹75000
Campaign Dates: Oct 24 – Nov 03
Valid on Credit Cards only
FESTIVE TREATS
ಮಲಬಾರ್ ವಾಗ್ದಾನಗಳು
ಸಂಪೂರ್ಣ ಪಾರದರ್ಶಕತೆ
ಖಚಿತ ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್
100% ಮೌಲ್ಯ ಚಿನ್ನದ ವಿನಿಮಯದಲ್ಲಿ
100% ಮೌಲ್ಯ ಡೈಮಂಡ್‌ನ ವಿನಿಮಯದಲ್ಲಿ
ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು
ಬೈಬ್ಯಾಕ್ ಗ್ಯಾರಂಟಿ
ಆಭರಣವು ಪೂರಕ ವಿಮೆಗೆ ಒಳಪಡುತ್ತದೆ
100% HUID ಅನುಸರಣೆಯ ಚಿನ್ನ
ಜವಾಬ್ದಾರಿಯುತ ಮೂಲದ ಉತ್ಪನ್ನಗಳು
ಕಾರ್ಮಿಕರಿಗೆ ನ್ಯಾಯಯುತ ಅಭ್ಯಾಸಗಳು
ನ್ಯಾಯಯುತ ಬೆಲೆಯ ನೀತಿಗಳು
ಬೆಂಗಳೂರು: ಎಂ.ಜಿ ರೋಡ್ । ಡಿಕೆನ್‌ಸನ್ ರಸ್ತೆ । ಜಯನಗರ । ರಾಜಾಜಿನಗರ । ಕೋರಮಂಗಲ । ಫಿನಿಕ್ಸ್ ಮಾರ್ಕೆಟ್‌ಸಿಟಿ । ಮಾರತ್ತಹಳ್ಳಿ । ಬನ್ನೇರುಘಟ್ಟ ರಸ್ತೆ । ಕಮ್ಮನಹಳ್ಳಿ ಮಲ್ಲೇಶ್ವರಂ । ಹೆಚ್‌ಎಸ್‌ಆರ್ ಲೇಔಟ್ । ಬನಶಂಕರಿ । ಯಲಹಂಕ । ಫೋರಮ್ ಸೌತ್ ಬೆಂಗಳೂರು । ಆರ್‌ಆರ್ ನಗರ । ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಹೆಬ್ಬಾಳ । ವೈಟ್‌ಫೀಲ್ಡ್ ಸರ್ಜಾಪುರ ರಸ್ತೆ । ಮೈಸೂರು । ಮಂಡ್ಯ । ಹಾಸನ । ಚಿಕ್ಕಮಗಳೂರು । ಮಂಗಳೂರು । ಉಡುಪಿ । ಬೆಳಗಾವಿ । ಹುಬ್ಬಳ್ಳಿ । ಧಾರವಾಡ । ವಿಜಯಪುರ । ಕಲಬುರಗಿ । ಬೀದರ್ । ಬಳ್ಳಾರಿ ದಾವಣಗೆರೆ । ಶಿವಮೊಗ್ಗ । ತುಮಕೂರು । ರಾಯಚೂರು । ಕೋಲಾರ
1800 572 0916 । 29ನೇ ಅಕ್ಟೋಬರ್ 2024, ಧನ್‌ತೇರಸ್ ದಿನದಂದು, ನಮ್ಮ ಎಲ್ಲಾ ಶೋರೂಮ್‌ಗಳು ಬೆಳಿಗ್ಗೆ 8:30 ಕ್ಕೆ ತೆರೆದಿರುತ್ತದೆ.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

SVV MONTANA VISTA



CUDA & RERA APPROVED

Own Your Plot Near Nandi Hills!

- Ready-to-Build Plots
- 5-Star Clubhouse & Amenities
- Kids' Play Area & Walking Path
- Scenic Nandi Hills View
- Prime Location on State Highway

Limited Offer: 4000/- ₹3,500/sq. ft. – Call Now!

SVV 78350 09616
www.shrivasaventures.com

SALE



CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

Lotus Enclave

BMRDA & NPA APPROVED
Residential Sites
Near ನಿವೇಶನಗಳು ಮಾರಾಟಕ್ಕಿವೆ
Nelamangala
100% Released from BMRDA, Bank Loan Available,100% Developed Layout
Ready For Registration & Construction
Layout Video Scan Here
Call: 8956 412 000

Commercial Property FOR SALE & RENT

IMMIDIATE POSSESSION



VACANT PROPERTY

North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 84472 99780
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME

Don't miss to explore one of the LARGEST & Most Stunning AQUARIUMS in BENGALURU

New Version ಹೊಸ ವೈವಿಧ್ಯಮಯ
NCF
TUNNEL AQUA SHOW
ರಾಷ್ಟ್ರೀಯ ಗ್ರಾಹಕರ ಮೇಳ



Visit Today
Scan for Location
Daily: 4pm - 9pm | October & November 2024 | Call: 8904727123
ITI Ground, Next to Hanging Bridge, KR Puram, Bengaluru

REAL ESTATE SELLING

Sites

Anjanapura

WANTED BDA & BBMP SITES, Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

BDA E-AUCTION East-South Corner Site No 902 for Sale at Further Extension of Anjanapura 11th Block Bannerghatta Rd 2645sqft Rs.14500/- Call:9448138640 9731125533

Banashankari

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

"AVAILABLE"BDA SITE Banashankari 6th Stage, 2nd Block, 30x40, South Facing Fully Developed Location: 9900097239

"AVAILABLE"BDA SITE Banashankari 6th Stage, 10th Block,30x40, North Facing Owner Meeting Contact: 9663393533

Jayanagar

SITE FOR SALE 2800 sft. S/F at 1st Block East, Jayanagar, Rs.23,000/-sft. Negotiable. Contact: 9880299011.

Kengeri

AVAILABLE 30X60 CORNER SITE 60FT ROAD BLUEJAY ARDLEY PHASE-2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kempegowda Layout

"NADAPRABHU" KEMPEGOWDA Layout 1st Block K Sector30x40 W/F 84 Lakhs,7th Block F Sector 50x80 W/F behind 100ft-Road-on 50ft-road,Nayara Petrol-bunk backside.Contact: 9686469799

Sanjaynagar

RMV BHOOPASANDRA BDA Site 29'x57' E/F 40' Road, off Chawla Road @ 17,500 per Sft, Owner:9980555558

Nagarabhavi

***SALE: 30X50** SITE* RHCS Layout,near Annapoorneshwari Nagar,Nagarabhavi 40 feet-road,good location.Contact: 9844040154/ 9844533371

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

Mysore Road

EEGOLTON GOLF RESORT Before BIDADI GATED COMMUNITY, Mysore Road 50x55 Site For sale. Contact: 9945079777

Padmanabha Nagar

40X60 NORTH Facing Fully Developed, Clear Documents, Agent Excuse, Direct Buyers Contact owner. 9449611876, 9481028358

Vishweshwariah Layout

AVAILABLE 30X40 Vishweshwariah Layout 5th Block BDA Site 12500/- Slightly Negotiable Genuine Buyers Contact: 9481703468

AVAILABLE VISHWESHWARIAH Layout 30X40 BDA Site 1st Block East 8500/- Good Investment Genuine Buyers: 9844603127

AVAILABLE VISHWESHWARIAH Layout 4th Block 30X40 East Face Near Nammoora Thindi Good Location: 9901156708

DIRECT OWNER 20x30, 30x40, 20x40 Site/House. near BDA Complex, D'Group, Vishweswaraiah Layout, 8thBlock, 8971851966/ 9880781399

House

Bannerghatta Road

BANNERGHATTA ROAD, Hommadevanahalli Spurthi Layout 30x50 North, 4 Floors Building for Sale, Rental Income 1,00,000/- -9535205608

Jayanagar

JAYANAGAR 8TH Block 30x50 North, old house, Excellent location (Genuine buyersonly) Suraj Realtors- 9845232711

Flat

Anekal

ANEKAL TALUK Bidaragere village, Indya Estates. The Greens apartment 2 BHK 890 sqft 32 Lakhs. Contact:- 9916425362.

Uttarahalli

3/4 BHK New Luxurious Flat Sale, A khatha, Ready-move. 75L/ 1cr. Carparking. Cauvery, Vaasthu. 9844394444, 9019110623.

Agricultural Land

Multiple Locations

8LAKHS PER-ACRES Chitradurga Total 48acres 12acrs 9Lakhs, 3&4acres Kanakapura, 52&7acres Ramanagara, 3&9acres Nelamangala, 6&14acres Hunsur, 39&18acres teak Shivamoga, 12&6acres Channapatna, 2&16acres Farm house Near Banglore Richdaddy Properties 8951240669

Mysore Road

MYSORE ROAD Between Channapatna & Maddur 60 Acres Tar Road Connectivity Water & Electricity: 9945928994

Commerical

Seshadripuram

SALE OFFICE Premises Fully Furnished 640 Sqft. No.33, 2 Floor, Swiss Complex, Race Course Road: 9845081411

Farm House/ Land/ Resorts

Outskirts

LAND SALE SHIDLUGHATTA to CHINTAMANI Highway Road: 22 ACRES AGRICULTURE LAND Suitable for Farm Land, Road Facing 200ft. PODI has been done. Contact: 8310093665

Residential/ Commercial

J P Nagar

NORTH EAST corner semi commercial building for sale @ J P Nagar 1st phase sarakki Road Near Hanuma Temple 6362905595

Villas/Bunglows

Electronic City

CHANDAPURA ELECTRONIC City BMRDA Approved 3/4 Bedroom Villa & 2-3 Bedroom Flat Genuine Buyers: 9916763727

SENIOR HOUSING

Long Stay Studio Units
Furnished with all amenities.
Security, Housekeeping, Power Backup, Internet Connection in Electronic City, Bengaluru
Mail: surenkupanda_313@hotmail.com
Ph: 9341286903

Commercial Land

J P Nagar

3150SFT JP.NAGAGAR 3rd 60ft1Road13floor suitable1for Software Company 8.60cr Nego. jaynagar`9th 30x40 East`& South 3.35cr: -9945310899.

Mysore Road

FOR SALE



COMMERCIAL LAND
Warehouse Converted Land, Main Road attach @ 7 kms from Kengeri & 27 kms from Majestic, 22000 sqft. Available. Rs. 2500 /sqft (FIXED) **M: 9900040218/16**

AVAILABLE FOR LEASE 300 Sft.Lalbagh Main Road East`Facing Ideal for Stationary/ Showrooms, Next to CMS Jain College. 9972208719.

Industrial And Factory

AVAILABLE OF Industrial Shed of 95000sqft at Soukya Road, Whitefield. Available Built-to-Suit Warehouse 160000 sqft Vijipura Hoskote Contact: 9341234288/ 9663224353/ 9845417487.

RENTAL PROPERTIES

Accommodation Available

House

RENT: GIRINAGAR 2BHK DH FF Corporation Water semifurnished, Hanumanthnagar 1(FF) & 2BHK GF. 78925-30410/ 9448809902

Commercial

BRAND NEW BUILDING Ground Parking, 1st`Floor Commercial Space 2000`Sqft Rent 1 Lakh 2nd,3rd`Floor 3 BHK Rent.65,000. Mahalakshmipuram Near WOC Road Call: 9008728728

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds
More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS



www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD Classifieds
More value, more impact
ಪ್ರಜಾವಾಣಿ
EDUCATION



Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್



DH Classifieds | ಪ್ರಜಾವಾಣಿ

More value, more impact

BOOK YOUR CLASSIFIED ADVERTISEMENT @ ANY OF OUR ADVERTISING AGENCIES

CENTRAL

SESHADRIPURAM: Vizdom Outlooks: 9845021250 | **CHICKPET:** Nagaraj Ads: 9448533327 | **GANDHI NAGAR :** Meghana Advertising : 9845494426 | United Ads : 9341233030 | Mpee Gee : 9880768108 | **KUMARA PARK:** Bronze Communications: 23310081 | Avanti Communications: 22205998 | **FRAZER TOWN:** Walk-Advertising: 9844001541 | **COX TOWN:** D. R. Associates: 9845120432 | Creative Eye: 9845014592 | **DICKENSON ROAD:** Manipal Advertising: 9738388316 | **VASANTH NAGAR :** Batha Advertising : 22269106 | Ad Point: 9845176901 | **HENNUR :** Jeevitha Creative Communications: 9886280456 | **KALYAN NAGAR:** L K Advertising : 8217484780 | **KORAMANGALA:** 365 Ads: 9343703463 | Pulse Advertising: 8197870039 | **INDIRANAGAR :** Kshama Communications: 9845067714 | Trinity Advertising: 9945571777 | Centigrade : 9902251683 | **St. JOHN'S ROAD:** Graphic Arts : 9844073437 | **JAI BHARATH NAGAR :** L C Communications : 9740324334 | **K R PURAM :** Sri Maruthi : 70195 98720 **BELLANDUR:** Vivek Avenues: 98450 11892

SOUTH

JAYANAGAR : Redd Arrow: 26655705 | Spectrum Inc: 26761220 | Shastry Ventures : 9880660308 | Sneha Advertisers: 9844076925 | Surabhi Ads : 99455 87574 | **J. P. NAGAR :** Raksheenda Publicity : 9845064970 | **HANUMANTH NAGAR:** Avena Media: 9986934449 | OM Shree Ads: 94485 93438 | **BANASHANKARI :** Popular Enterprises : 9448672817 | Akpha Publicity : 26764536 | Popular Advertising: 9035775105 | Anand Communications : 9845511145 | Sampoorna Advertising: 9986190744 | Reality Advertisers: 9742013378 | D.G Publicities : 9243402739 | **K. R. ROAD:** Streamline: 9880490672 | **YEDIYUR :** Ankit Communications: 9448001951 | **GANDHI BAZAAR:** Allied Publicity: 9343772964 | Ad Venture : 9886195457 | **CHAMARAJPET :** Bharathi Ads: 41503131 | **V.V Puram :** Nandana Ads : 9448493382 | **BASAVANAGUDI:** Pragathi Advertisers: 7353762673 | First Choice: 9845044148 | Cauvery Ads : 9886824737 | Subha Advertising: 9845533466 | MASS Designs: 9886287849 | Vinyas Advertising : 9845048414 | **KANAKAPURA ROAD :** Sagar Advertisers 9964652358 | **SRINAGAR :** Raksha Advesting 9844574789 | **NAYANDANAHALLI :** Drishya 360 : 9886774482 | **UTTARAHALLI:** Golden Ads: 9844424877

NORTH

R T NAGAR : AD6 Advertising: 9008999919 | Smart Media: 9590518900 | Madhu Ads : 9945072007 **BENSON TOWN :** | Surekha Advertisers: 9342233097 | Rounqh Publicity: 9845172646 | **YELAHANKA:** Chandu Ads : 9880690007 | Suresh Ad Communications : 9902059333 | **MATHIKERE:** A.A.Associates: 23378382 | **VIDYARANYAPURA :** Balaram Advertisers: 9880598082 | **MALLESHWARAM:** Media Options: 8147024605 Sparkles Network : 9663984711 | Roopa Advertisers: 9845288832 | Prakurthi Ads: 9148917339 | Madhyama : 9886981719 | Pochi Advertisers: 9449059015 | Ads 360: 9739991752 | Nesara Advertisers : 9845030087 | A. A. Advertising: 9481428108 | **THANISANDRA (Jakkur) :** Blueeye Communications : 8431419754 | 08035006966

WEST

RAJAJINAGAR : Chiya's Advertising: | Patil Graphics: 9880359470 | Sri Sainath Enterprises: 9845642185 | S. R. Advertising : 9845269729 | Adz Corner: 9886245268 | Garden City: 9844423886 | Vijaya Publicities (V.R.Opticians): 9845359345 | S.D.Enterprises: 9845500301 | **MAHALAKSHMI LAYOUT :** Peepal Ads: 7975560055 | **NAGARABHAVI :** Damam Advertising 9900158293 | Roopa Communications : 9880877599 | Yashaswi Ads : 9980697155 | Bhargav Enterprises: 9880177773 | Shree Enterprises: 9901076272 | Vibini Media: 9880004702 | **VIJAYA NAGAR :** Pragati Advertisers: 9845542727 | Trupty Advertisers: 9845046667 | Topcopy: 9901255400 | **BASAVESHWAR NAGAR :** Omkar Advertising : 9972099398 | Ambar Communications : 9986879230 | Pravasthi Advertising: 9448325268 | **PEENYA:** Indira Advertising : 9980314247 | Shrusti Media trove : 98456 58993 | Praanjala Creation: 9844364829 **YESWANTHPUR :** CreActive : 9845133368

For more information Contact:
Ph: 45557160 | 161 | 162 | 163 | 164
Mobile: 9845114560 | 9731810277
9901641752 | 9886213331
E-mail: dhclassifieds@deccanherald.co.in

RENTAL PROPERTIES

Accommodation Wanted

Commercial

PRIME REAL ESTATE REQUIREMENTS/AVAILABILITIES
Urgently needed for Lease/Sale/Built to Suit for Luxury Car Showroom/Workshop
• Showroom : 5,000 to 10,000 Sq.Ft.
• Workshop / Combined Showroom & Workshop: 45,000 to 60,000 Sq.Ft.
PREFERRED LOCATIONS :
1) Peenya, Tumkur Main Road (From Taj Yeshwanthpur Up to Nelamangala).
2) From Varthur Main Road to Hoskote.
3) From Marathahalli Ring Road / Bellandur Up to Sarjapur Bus Stand.
4) And also Main Roads Across Bangalore.
AVAILABLE FOR SALE/JD/REVENUE SHARING
80 to 100 acres on Chikka Thirupathi Road (Between Whitefield and Sarjapur), Clear title, 6 Crores per Acre.
AVAILABLE FOR RENT: SUITABLE FOR HIGH END RESTAURANTS/RESTO BAR/MICROBREWERY
Near MG Road, with 18,000 Sq Ft. of Land Area, Built up 10,000 Sq. Ft. Ready for Occupancy.
Contact : Mr. SEVENRAJ
98450 20007 / 98457 17777
sevenraj@gmail.com

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Vishweshwariah Layout

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED BDA SITE 30x40,40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUSINESS

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

Machinery & Tools

FOR SALE thread winding machine (12 head) Cone Winding Machine (1 head, 4 cops) Hanks to cone winding (16 head) Contact 6282786733

OTHERS

Caterers / Office Lunch

EMI PAYMENTS accepted(T&C apply)for alltypes of vegetarian catering services anywhere Call 7026375404 PV Caterers, Bangalore

PERSONAL

Change of Name

CHANGE OF NAME
I, **Pallavi V Rao** R/ at No E617 , Pariwar Pragati Apartment Gottigere near Balaji Garden layout Bangalore 83 that my name in some documents is recorded as **Pallavi Vishwas Kamath** and some as **Pallavi V Rao** declare that all the above names pertain to me only and henceforth shall be known as **Pallavi V Rao** vide affidavit dated 11 July 2024 sworn before Notary BM chandrashekhar, Bangalore.

CHANGE OF NAME
I, **Vishwas Kasargod Kamath** R/ at No E617, Pariwar Pragati Apartment Gottigere near Balaji Garden layout Bangalore 83 that my name in some documents is recorded as **Vishwas Kamath K** and some as **Vishwas Kamath** declare that all the above names pertain to me only and henceforth shall be known as **Vishwas Kamath** vide affidavit dated 11 July 2024 sworn before Notary BM chandrashekhar, Bangalore.

I VENKATARAMU R/a, #64/A, 2nd cross, Ramakrishna Mutt Extn, K.G. Nagar, Bangalore-560019 Have Changed My Name To K.T. VENKATARAMU Vide Affidavit Dated 23/10/2024 before Notary L. SHANKARANARAYANA Bangalore.

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DECCAN HERALD
ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com **BOOK NOW**
For more details contact:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164

ನಾಗರಿಕರು ಸಾಲ ಪಡೆಯಲು 'ಐಟಿ ರಿಟರ್ನ್' ಸಲ್ಲಿಸಿರುವುದೇ ಪ್ರಮುಖ ಕಾರಣ

ಸಾವಿರಾರು ಬಿಪಿಎಲ್ ಪಡಿತರ ಚೀಟಿ ರದ್ದು

ಪ್ರಜಾವಾಣಿ ವಾರ್ತೆ



ಬಿಪಿಎಲ್ ಕಾರ್ಡ್ ರದ್ದಾಗಿರುವುದನ್ನು ವಿರೋಧಿಸಿ ನಾಗರಿಕರು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ನಗರದಲ್ಲಿ ಸಾವಿರಾರು ಕುಟುಂಬಗಳ ಬಿಪಿಎಲ್ ಪಡಿತರ ಚೀಟಿಗಳನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಪಡಿಸಲಾಗಿದೆ. ಅರ್ಹ ಫಲಾನುಭವಿಗಳ ಬಿಪಿಎಲ್ ಪಡಿತರ ಚೀಟಿಗಳನ್ನೂ ತೆಗೆದುಹಾಕಲಾಗಿದ್ದು, ದಿನಸಿ ಇಲ್ಲದೆ ನಾಗರಿಕರು ಪರಿತಪಿಸುತ್ತಿದ್ದಾರೆ.

ಬಿಪಿಎಲ್ ಪಡಿತರ ಚೀಟಿಗಳನ್ನು ಹೊಂದಿದ್ದ ನಾಗರಿಕರು, ದಿನಸಿ ಪಡೆಯಲು ಪಡಿತರ ಅಂಗಡಿಗಳಿಗೆ ತೆರಳಿದಾಗ 'ನಿಮ್ಮ ಬಿಪಿಎಲ್ ಕಾರ್ಡ್ ರದ್ದಾಗಿದೆ' ಅಥವಾ 'ನಿಮ್ಮ ಬಿಪಿಎಲ್ ಕಾರ್ಡ್ ಎಪಿಎಲ್ ಕಾರ್ಡ್ ಆಗಿದೆ' ಎಂಬ ಉತ್ತರ ಸಿಕ್ಕಿದೆ. 'ಈ ಕಾರಣದಿಂದ ದಿನಸಿ ನೀಡಲು ಸಾಧ್ಯವಿಲ್ಲ' ಎಂದು ಅಂಗಡಿ ಮಾಲೀಕರು ಅವರಿಗೆ ತಿಳಿಸುತ್ತಿದ್ದಾರೆ.

ಏಕಾಏಕಿ ಬಿಪಿಎಲ್ ಪಡಿತರ ಚೀಟಿ ರದ್ದಾಗಿರುವ ಬಗ್ಗೆ ಆತಂಕಗೊಂಡಿರುವ ನೂರಾರು ನಾಗರಿಕರು, ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.

'ನಾನು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಮಗಳು ಅಂಗವಿಕಲೆ. ನನಗೆ ಹೆಚ್ಚಿನ ಆದಾಯ ಇಲ್ಲ. ಬಿಪಿಎಲ್ ಕಾರ್ಡ್ ಅನ್ನು ರದ್ದು ಮಾಡಿದ್ದಾರೆ. ಇಲ್ಲಿನ ಕಚೇರಿಯಲ್ಲಿ ಕೇಳಿದರೆ 'ಐಟಿ ರಿಟರ್ನ್ ಮಾಡಿದ್ದೀರ, ಅದಕ್ಕೆ ರದ್ದಾಗಿದೆ' ಎನ್ನುತ್ತಾರೆ. ನಾವು ಯಾವುದೇ ರೀತಿಯಲ್ಲಿ ಐಟಿ ರಿಟರ್ನ್ಸ್ ಸಲ್ಲಿಸಿಲ್ಲ. ಆದಾಯ ತೆರಿಗೆ ಕಚೇರಿಯಿಂದ ಪತ್ರ ತೆಗೆದುಕೊಂಡು ಬನ್ನಿ ಎನ್ನುತ್ತಾರೆ. ತೆರಿಗೆ ಇಲಾಖೆಗೆ ಹೋದರೆ ಅವರು, 'ನೀವು ತೆರಿಗೆ ಕಟ್ಟಿಲ್ಲ. ಯಾವ ಪತ್ರವನ್ನೂ ಕೊಡಲು ಸಾಧ್ಯವಿಲ್ಲ' ಎನ್ನುತ್ತಾರೆ. ಅವರ ಕಾಲಿಗೆ ಬಿದ್ದು ಕೇಳಿಕೊಂಡೆ. ಆಹಾರ ಇಲಾಖೆಯಿಂದ ಪತ್ರ ತೆಗೆದುಕೊಂಡು ಬನ್ನಿ ಅನ್ನುತ್ತಾರೆ. ಆಹಾರ ಇಲಾಖೆಯ ಅಧಿಕಾರಿಗಳು ಭೇಟಿಗೆ ಸಿಗುತ್ತಿಲ್ಲ' ಎಂದು ಕೆಂಗೇರಿಯ ಪಲ್ಲವಿ ದೂರಿದರು.

'ನಾನು ಮನೆ ಮನೆಯಲ್ಲಿ ಕೆಲಸ ಮಾಡುತ್ತೇನೆ. ನಾನು ಹೇಗೆ ತೆರಿಗೆ ಕಟ್ಟಲಿ. ಬಿಪಿಎಲ್ ಕಾರ್ಡ್‌ನ ಅಕ್ಕಿ, ದಿನಸಿ ಸಿಗದಿದ್ದರೆ ನಾವು ಹಸಿವಿನಿಂದ ಸಾಯಬೇಕಾಗುತ್ತದೆ. ಕೆ.ಜಿ.ಗೆ ₹50, ₹60 ಕೊಟ್ಟು ಅಕ್ಕಿ ಖರೀದಿಸಲು ನಮಗೆ ಸಾಧ್ಯವಿಲ್ಲ' ಎಂದು ಯಲಹಂಕದ ಕಮಲಾ ಅಳಲು ತೋಡಿಕೊಂಡರು.

'ಬಿಪಿಎಲ್ ಕಾರ್ಡ್ ರದ್ದಾಗಿದೆ. ನಮಗೆ ಯಾವುದೇ ಹೆಚ್ಚಿನ ಆದಾಯ ಇಲ್ಲ. ಅದನ್ನು ಹೇಳಲು ಜಿಲ್ಲಾಧಿಕಾರಿ ಕಚೇರಿ ಹಾಗೂ ಆಹಾರ ಇಲಾಖೆಯ ನಗರ ವಿಭಾಗದ ಅಧಿಕಾರಿಗಳ ಕಚೇರಿಗಳಿಗೆ ಅಲೆಯುತ್ತಿದ್ದೇನೆ. ಆಧಾರ್, ಪ್ಯಾನ್, ಬಿಪಿಎಲ್ ಪಡಿತರ ಚೀಟಿಯ ಪ್ರತಿ ನೀಡಿ ಹೋಗಿ ಎನ್ನುತ್ತಿದ್ದಾರೆ. ಆದರೆ, ಈ ತಿಂಗಳು ಅಕ್ಕಿ, ದಿನಸಿ ಸಿಗದಿದ್ದರೆ ನಾವು ಏನು ತಿನ್ನುವುದು' ಎಂದು ರಾಧಾ, ಅಮ್ಮಯಮ್ಮ, ತಿಪ್ಪಣ್ಣ, ಸುರೇಶ್ ಎಂಬುವವರು ಪ್ರಶ್ನಿಸಿದರು.

'ಕುಟುಂಬ ತಂತ್ರಾಂಶ'ಕ್ಕೆ ಮಾಹಿತಿ

'ನಾಗರಿಕರು ದ್ವಿಚಕ್ರ ವಾಹನ ಖರೀದಿಗೆ ಸಾಲ ಹಾಗೂ ಇತರೆ ಅಗತ್ಯಗಳಿಗೆ ಏಜೆನ್ಸಿಗಳಿಂದ ಸಾಲ ಪಡೆದುಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ತೆರಿಗೆ ಇಲಾಖೆಗೆ ನೀಡಬೇಕಾದ ಮಾಹಿತಿಗಳಲ್ಲಿ 'ಟಿಕ್' ಮಾಡಿರುತ್ತಾರೆ. ಇದು ಅವರ ಗಮನಕ್ಕೆ ಬಂದಿರುವುದಿಲ್ಲ. ಕೆಲವರು ಸಾಲ ಪಡೆಯಲು ಆಡಿಟರ್‌ಗಳ ಮೂಲಕ 'ಐಟಿ ರಿಟರ್ನ್' ದಾಖಲೆ ಪಡೆದುಕೊಂಡಿರುತ್ತಾರೆ. ಇವೆಲ್ಲ ಮಾಹಿತಿಗಳು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ 'ಕುಟುಂಬ ತಂತ್ರಾಂಶ'ಕ್ಕೆ ಆನ್‌ಲೈನ್‌ನಲ್ಲೇ ಅಪ್‌ಡೇಟ್ ಆಗುತ್ತದೆ. ಸಂಬಂಧಿಸಿದ ಆಹಾರ ನಿರೀಕ್ಷಕರು ಅದನ್ನು ಪರಿಶೀಲಿಸಿ, ಬಿಪಿಎಲ್ ಪಡಿತರ ಚೀಟಿಗೆ ಕುಟುಂಬ ಅರ್ಹವಿಲ್ಲ ಎಂದು ತೀರ್ಮಾನಿಸಿರುತ್ತಾರೆ. ಅದರಂತೆ ರದ್ದುಪಡಿಸಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

'ನಾಗರಿಕರು ಸಾಲ ಪಡೆಯುವಾಗ ಏಜೆನ್ಸಿ, ಬ್ಯಾಂಕ್ ಅಥವಾ ಇತರೆ ಸಂಸ್ಥೆಗಳು ನೀಡುವ ಸಾಲದ ಅರ್ಜಿಯನ್ನು ಪೂರ್ಣವಾಗಿ ಪರಿಶೀಲಿಸಿರುವುದಿಲ್ಲ. ಆದಾಯ ತೆರಿಗೆಗೆ ಸಂಬಂಧಿಸಿದಂತೆ ಹಲವು 'ಟಿಕ್'ಗಳನ್ನು ಅವರ ಅರಿವಿಗೆ ಬಾರದಂತೆಯೇ ಮಾಡಲಾಗಿರುತ್ತದೆ. ಈಗೆಲ್ಲ ಆನ್‌ಲೈನ್ ಪ್ರಕ್ರಿಯೆಯಾಗಿರುವುದರಿಂದ, ಆಧಾರ್ ಹಾಗೂ ಪ್ಯಾನ್ ಲಿಂಕ್ ಆಗಿರುವುದರಿಂದ ಅವರ ಖಾತೆಗೆ ಎಲ್ಲವೂ ದಾಖಲಾಗುತ್ತದೆ. ಸಾಲಕ್ಕಾಗಿ ಹೆಚ್ಚು ಆದಾಯ ತೋರಿಸಿರುವುದರಿಂದ ಬಿಪಿಎಲ್ ಪಡಿತರ ಚೀಟಿಗೆ ಅವರು ಅನರ್ಹರಾಗುತ್ತಾರೆ. ಹೀಗಾಗಿ, ಸಾವಿರಾರು ಬಿಪಿಎಲ್ ಪಡಿತರ ಚೀಟಿಗಳು ರದ್ದಾಗಿವೆ. ಕೆಲವು ಅರ್ಹ ಫಲಾನುಭವಿಗಳ ಕಾರ್ಡ್‌ಗಳೂ ರದ್ದಾಗಿದ್ದು, ಇದೆಲ್ಲವನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಸರ್ಕಾರದ ಮಟ್ಟದಲ್ಲಿ ಈ ಸಮಸ್ಯೆಗೆ ಪರಿಹಾರ ಸಿಗಬೇಕಿದೆ' ಎಂದು ವಿವರಿಸಿದರು. ಈ ಬಗ್ಗೆ ಆಹಾರ ಇಲಾಖೆಯ ಬೆಂಗಳೂರು ನಗರದ ಉಪ ನಿರ್ದೇಶಕ ಶಾಂತಗೌಡ ಅವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಕರೆ ಸ್ವೀಕರಿಸಲಿಲ್ಲ.

ರಾಷ್ಟ್ರೀಯ ಟಿ.ಟಿ ತನಿಷ್ಕಾಗೆ ಚಿನ್ನ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಾಲಭೈರವ ಅವರು ಗೋವಾದಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ.



ತನಿಷ್ಕಾ

ತನಿಷ್ಕಾ ಫೈನಲ್ ಪಂದ್ಯದಲ್ಲಿ 11-6, 11-9, 11-1ರಿಂದ ಪಶ್ಚಿಮ ಬಂಗಾಳದ ಆಯುಷಿ ಹಜ್ರಾ ಅವರನ್ನು ಸೋಲಿಸಿದರು.

ಅದಕ್ಕೂ ಮೊದಲು ಸೆಮಿಫೈನಲ್‌ನಲ್ಲಿ ಅವರು 11-6, 17-15, 11-6ರಿಂದ ಗುಜರಾತ್‌ನ ದಾನಿಯಾ ಗೋಡಿಲ್ ಅವರನ್ನು ಮಣಿಸಿದ್ದರು.

ಸಮಾನತೆ ಮೂಡಿದರೆ ಜಾತೀಯತೆ ನಾಶ: ಸಿ.ಎಂ

ಪ್ರಜಾವಾಣಿ ವಾರ್ತೆ



ಎಐಟಿ ಒಳಾಂಗಣ ಕ್ರೀಡಾ ಸಂಕೀರ್ಣ ಹಾಗೂ ಮೊದಲ ವರ್ಷದ ಬಿ.ಇ ತರಗತಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕ ಎ.ಆರ್.ಕೃಷ್ಣಮೂರ್ತಿ, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಟ್ರಸ್ಟಿ ಡಾ.ಬಿ.ಎನ್.ಉಮೇಶ್, ಪ್ರಾಂಶುಪಾಲ ಡಾ.ತಿಪ್ಪೇಸ್ವಾಮಿ, ಮತ್ತಿತರರು ಪಾಲ್ಗೊಂಡಿದ್ದರು

ಕೆಂಗೇರಿ: ಸಮಾನತೆ ಮೂಡುವವರೆಗೆ ಜಾತೀಯತೆ ಪಿಡುಗು ನಿರ್ಮೂಲನೆ ಆಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಲ್ಲತ್ತಹಳ್ಳಿಯ ಡಾ.ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾ ಸಂಕೀರ್ಣ ಹಾಗೂ ಮೊದಲನೆ ವರ್ಷದ ಬಿ.ಇ ತರಗತಿ ಉದ್ಘಾಟಿಸಿ ಮಾತನಾಡಿದರು.

'ಜಾತೀಯತೆಗೆ ಅಸಮಾನತೆಯೇ ಮೂಲ. ಭಾರತೀಯ ಸಮಾಜದಲ್ಲಿ ಅಸಮಾನತೆ ಹಾಸುಹೊಕ್ಕಾಗಿದೆ. ಶಿಕ್ಷಣ ಉಳ್ಳವರ ಪಾಲಾಗಿದೆ. ನಿರ್ದಿಷ್ಟ ವರ್ಗಗಳು ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತಿವೆ. ಸಮಾನತೆ ಬಾರದೆ ಜಾತೀಯತೆಯನ್ನು ಸಮಾಜದಿಂದ ಕಿತ್ತೊಗೆಯುವುದು ಅಸಾಧ್ಯ' ಎಂದು ಅಭಿಪ್ರಾಯಪಟ್ಟರು.

'ಚುನಾಯಿತ ಸರ್ಕಾರಗಳು ಹಾಗೂ ಪ್ರಜೆಗಳು ಸಂವಿಧಾನ ಪೀಠಿಕೆಯ ಧ್ಯೇಯೋದ್ದೇಶಗಳಿಗೆ ಪೂರಕವಾಗಿ ನಡೆದುಕೊಳ್ಳಬೇಕು. ಅಲ್ಲಿಯವರೆಗೆ ಅಂಬೇಡ್ಕರರ ಸಮ ಸಮಾಜ ನಿರ್ಮಾಣದ ಕನಸು ಈಡೇರುವುದಿಲ್ಲ' ಎಂದರು.

ಪ್ರಸಕ್ತ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ಶಿಕ್ಷಣ ಹಾಗೂ ಕೌಶಲ್ಯವನ್ನು ಹೊಂದುವುದು ಇಂದಿನ ತುರ್ತಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವು, ಕೈಗಾರಿಕೆ ಹಾಗೂ ಶಿಕ್ಷಣ ಸಂಸ್ಥೆಗಳೊಡನೆ ಸಮನ್ವಯ ಸಾಧಿಸಿ ನುರಿತ ಮಾನವ ಸಂಪನ್ಮೂಲವನ್ನು ಸೃಷ್ಟಿಸಲು ಅಗತ್ಯ ಕ್ರಮ ಕೈಗೊಂಡಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, 'ಶಿಕ್ಷಣ ದಾಸೋಹದೊಂದಿಗೆ ಸಾಮಾಜಿಕ ಬದ್ಧತೆಯನ್ನು ಕಾಪಿಟ್ಟುಕೊಂಡಿರುವ ಎಐಟಿ ಸಂಸ್ಥೆಯು ಸಮಾಜದ ಎಲ್ಲಾ ವರ್ಗಗಳಿಗೂ ಗುಣಮಟ್ಟದ ಶಿಕ್ಷಣ ನೀಡುತ್ತಿದೆ' ಎಂದು ಪ್ರಶಂಸಿದರು.

'ಮನುಷ್ಯನ ಸರ್ವತೋಮುಖ ಬೆಳವಣಿಗೆಯಲ್ಲಿ ಕ್ರೀಡೆಗಳು ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ₹3.5 ಕೋಟಿ ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲಾಗಿದೆ' ಎಂದು ಪಿವಿಪಿ ಟ್ರಸ್ಟ್ ಕಾರ್ಯದರ್ಶಿ ಶಿವಮಲ್ಲು ಹೇಳಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ, ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಟ್ರಸ್ಟಿ ಡಾ.ಬಿ.ಎನ್. ಉಮೇಶ್, ಪ್ರಾಂಶುಪಾಲ ತಿಪ್ಪೇಸ್ವಾಮಿ, ಎಲ್.ಎನ್.ಪಟ್ನಾಯಕ್, ಡೀನ್ ಅನುರಾಧ, ಎನ್.ಸಿ.ಶಿವಪ್ರಕಾಶ್, ಸಿದ್ದರಾಜು, ಮಹಾಲಿಂಗ.ವಿ. ಮಂಡಿ ಮತ್ತಿತರರು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ನಾಳೆಯಿಂದ ಬಾಗಲಗುಂಟೆ ಮಾರಮ್ಮ ದೇವಿಯ ವೈಭವದ ಜಾತ್ರೆ

ಪೀಣ್ಯದಾಸರಹಳ್ಳಿ: ಇದೇ 27 ರಿಂದ 29 ರವರೆಗೆ ಬಾಗಲಗುಂಟೆಯ ಮಾರಮ್ಮ ದೇವಿ ಜಾತ್ರಾ ಮಹೋತ್ಸವ ನಡೆಯಲಿದೆ.

ಮಾರಮ್ಮ ದೇವಿ ದೇವಸ್ಥಾನ, ಶ್ರೀವೇಣುಗೋಪಾಲ ಸ್ವಾಮಿ ಹಾಗೂ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಸೇವಾ ಸಮಿತಿಗಳು ಜಂಟಿಯಾಗಿ ಈ ಜಾತ್ರಾ ಮಹೋ ತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಿದೆ. ಜಾತ್ರೆಯ ಅಂಗವಾಗಿ ಬಾಗಲಗುಂಟೆ, ತೋಟದಗುಡ್ಡಹಳ್ಳಿ, ಸಿಡೇದಹಳ್ಳಿ, ಎಂಇಐ ಲೇಔಟ್, ಕಿರ್ಲೋಸ್ಕರ್ ಲೇಔಟ್ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳನ್ನು ವಿದ್ಯುತ್ ದೀಪದಿಂದ ಅಲಂಕೃತಗೊಳಿಸಲಾಗಿದೆ. ಬಾಗಲಗುಂಟೆ, ಎಂ.ಇ.ಐ ಲೇಔಟ್‌ನಲ್ಲಿ ಅಂಗಡಿಗಳನ್ನು ತೆರೆಯಲು ಮಳಿಗೆ ಹಾಕುವ ಪ್ರಕ್ರಿಯೆ ಆರಂಭವಾಗಿದೆ. ಮೈದಾನದಲ್ಲಿ ಮಕ್ಕಳ ಆಟದ ಪರಿಕರಗಳನ್ನು ಜೋಡಿಸಲಾಗುತ್ತಿದೆ.

27 ರಂದು ಗಂಗಾಪೂಜೆ. ದೇವಿಗೆ ಪುಣ್ಯಾಹ, ಕುರ್ಜಿ ಮರ ಎತ್ತುವುದು, ಮಾರಮ್ಮ ದೇವಿಯ ಮೆರವಣಿಗೆ ನಡೆಯಲಿದೆ. ರಾತ್ರಿ ಅಗ್ನಿಕುಂಡ ಹಚ್ಚುವುದು, ದೇವಿಯ ಘಟ್ಟಘಡಿಗೆ ಸಿಡೇದಹಳ್ಳಿ ಮತ್ತು ತೋಟದ ಗುಡ್ಡದ ಹಳ್ಳಿಗೆ ಹೊರಡುತ್ತದೆ. 28 ರಂದು ಬೆಳಿಗ್ಗೆ 8ಗಂಟೆಗೆ ಶ್ರೀವಿನಾಯಕ ಹಾಗೂ ನವಗ್ರಹಗಳಿಗೆ ಬೆಲ್ಲದ ಆರತಿ, ವೇಣುಗೋಪಾಲ ಸ್ವಾಮಿ, ಆಂಜನೇಯ ಸ್ವಾಮಿ ಹಾಗೂ ರಾಮದೇವರಿಗೆ ಬೆಲ್ಲದಾರತಿ ನಡೆಯಲಿದೆ. ಸಂಜೆ 6.30ಕ್ಕೆ ಪಳೇಕಮ್ಮ ಮತ್ತು ಮುತ್ತರಾಯ ಸ್ವಾಮಿಗೆ ಬೆಲ್ಲದಾರತಿ ನಡೆಯಲಿದೆ. ರಾತ್ರಿ 8ಕ್ಕೆ 'ಕುರುಕ್ಷೇತ್ರ' ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಅ.29ರಂದು ಸಂಗೀತ ರಸ ಸಂಜೆ, ಬಾಗಲಗುಂಟೆಯ ಎಲ್ಲಾ ದೇವರುಗಳಿಗೂ ಮಹಾ ಮಂಗಳಾರತಿ ನಡೆಯಲಿದೆ ಎಂದು ಮಾರಮ್ಮ ದೇವಿ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

'ಎಪಿಎಸ್ ಬಳಿ ಕಸ ತೆರವು ಮಾಡಿ'



ಬೆಂಗಳೂರು: ನರಸಿಂಹರಾಜ ಕಾಲೊನಿಯಲ್ಲಿರುವ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ (ಎಪಿಎಸ್) ಪಕ್ಕದಲ್ಲಿಯೇ ಕಸ ತುಂಬಿರುವ ಲಾರಿಗಳು ಹಾಗೂ ಆಟೋಗಳು ನಿಲ್ಲುತ್ತಿದ್ದು, ಅವುಗಳ ತಂಗುದಾಣವಾಗಿದೆ. ಇವುಗಳನ್ನು ಸ್ಥಳಾಂತರಿಸಿ ವಿದ್ಯಾರ್ಥಿಗಳಿಗೆ ಸ್ವಚ್ಛ ಪರಿಸರ ಕಲ್ಪಿಸಬೇಕು ಎಂದು ಎಪಿಎಸ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎ. ಪ್ರಕಾಶ್ ಮನವಿ ಮಾಡಿದ್ದಾರೆ.


ಬಿಬಿಎಂಪಿಗೆ ಮನವಿ ಪತ್ರ ಬರೆದಿರುವ ಅವರು, ಲಾರಿ ಹಾಗೂ ಆಟೊಗಳನ್ನು ತೆರವುಗೊಳಿಸುವಂತೆ ಈ ಹಿಂದೆಯೂ ಮನವಿ ಸಲ್ಲಿಸಲಾಗಿತ್ತು. ಕಸದ ಸಮಸ್ಯೆ ತೀವ್ರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ವಿಪರೀತ ಮಳೆ ಕಾರಣ ರಸ್ತೆಯಲ್ಲಿ ಓಡಾಡುವುದಕ್ಕೂ ತೊಂದರೆಯಾಗುತ್ತಿದೆ. ಶಾಲಾ ಮಕ್ಕಳಿಗೆ ಇದರಿಂದ ಅಲರ್ಜಿ, ದುರ್ವಾಸನೆಯಲ್ಲಿ ಉಸಿರಾಟದ ಸಮಸ್ಯೆ ಹೆಚ್ಚಾಗುತ್ತಿದೆ ಎಂದಿದ್ದಾರೆ.

ಸ್ವಚ್ಛತೆಯ ದೃಷ್ಟಿಯಿಂದ ಶಾಲೆಯ ಸಮೀಪವಿರುವ ಕಸ ತುಂಬಿರುವ ಲಾರಿ ಮತ್ತು ಆಟೊಗಳನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ವಿನಂತಿಸಿದ್ದಾರೆ.

'ಗಾಂಧಿ ವಿರುದ್ಧ ಪೋಕ್ಸೊ ದಾಖಲಾಗುತ್ತಿತ್ತು'

ಪ್ರಜಾವಾಣಿ ವಾರ್ತೆ

ಮೈಸೂರು: 'ಗಾಂಧೀಜಿ ಸಣ್ಣ ಸಣ್ಣ ಹುಡುಗಿಯರನ್ನು ಬೆತ್ತಲಾಗಿಸಿ, ತಾನೂ ಬೆತ್ತಲಾಗಿ ಅವರೊಂದಿಗೆ ಮಲಗಿಕೊಳ್ಳುತ್ತಿದ್ದುದಾಗಿ ಬರೆದುಕೊಂಡಿದ್ದಾರೆ. ಈಗ ಅವರು ಬದುಕಿದ್ದು, ಆ ಮಾತನ್ನು ಹೇಳಿದ್ದರೆ ಪೋಕ್ಸೊ ಪ್ರಕರಣ ದಾಖಲಾಗುತ್ತಿತ್ತು' ಎಂದು ರಂಗಕರ್ಮಿ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.



ಅಡ್ಡಂಡ ಸಿ.ಕಾರ್ಯಪ್ಪ

ನಗರದಲ್ಲಿ ಶುಕ್ರವಾರ ತಮ್ಮ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಕೃತಿ ಬಿಡುಗಡೆ ಕಾರ್ಯಕ್ರಮದ ಕೊನೆಗೆ ಮಾತನಾಡಿದರು.

'ಗಾಂಧಿ ಒಬ್ಬ ಸಂತ. ಆತ ಸಂತನಾಗಿದ್ದೇನೆ ಎಂಬ ಕಾರಣಕ್ಕೆ ಹೆಣ್ಣು ಮಕ್ಕಳನ್ನು ಬೆತ್ತಲಾಗಿಸಿ, ತಾನೂ ಬೆತ್ತಲಾಗಬಹುದಿತ್ತೆ' ಎಂದು ಪ್ರಶ್ನಿಸಿದರು.

'60 ವರ್ಷಗಳಿಂದ ಮರೆಮಾಚಲಾಗಿದ್ದ ಇಂಥ ಸತ್ಯಗಳನ್ನು ಕೃತಿಯ ಮೂಲಕ ಹೊರತಂದಿದ್ದೇನೆ. ಯುವ ಪೀಳಿಗೆಗೆ ಸತ್ಯ ಏನು ಎಂಬುದನ್ನು ತೋರಿಸಿದ್ದೇನೆ. ಇದರಿಂದ ನನಗೆ ಯಾವುದೇ ಭಯ ಇಲ್ಲ. ಪ್ರಕರಣಗಳ ಬಗ್ಗೆ ತಲೆಕೆಡಿಸಿಕೊಳ್ಳಲ್ಲ. ಇದೆಲ್ಲಾ ಒಂದು ರೀತಿಯ ಆಟವಿದ್ದಂತೆ' ಎಂದು ಕಾರ್ಯಪ್ಪ ಹೇಳಿದರು.

ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್, ರಂಗಕರ್ಮಿ ಪ್ರಕಾಶ್ ಬೆಳವಾಡಿ, ಆದಿತ್ಯ ಆಸ್ಪತ್ರೆಯ ಅಧಿಕಾರಿ ಚಂದ್ರಶೇಖರ್ ಇದ್ದರು.

ಚೆನ್ನೈನಲ್ಲಿ ನಾಳೆ ಟಿವಿಕೆಯ ಮೊದಲ ಸಮಾವೇಶ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ 2026ರ ವಿಧಾನಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ತಮಿಳಿನ ಖ್ಯಾತ ನಟ, ರಾಜಕಾರಣಿ ದಳಪತಿ ವಿಜಯ್ (50) ತನ್ನ 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ಮೊದಲ ರಾಜ್ಯಮಟ್ಟದ ಸಮ್ಮೇಳನವನ್ನು ಇದೇ 27ರಂದು (ಭಾನುವಾರ) ವಿಕ್ರವಾಂಡಿಯಲ್ಲಿ ಆಯೋಜಿಸಿದ್ದಾರೆ.

ರಾಜಕೀಯ ಗುರಿ ಸಾಧಿಸುವಲ್ಲಿ ವಿಜಯ್ ಅವರ ಮೊದಲ ಹೆಜ್ಜೆ ಎಂದು ಈ ಸಮ್ಮೇಳನವನ್ನು ಬಣ್ಣಿಸಲಾಗುತ್ತಿದೆ.

ಸಮ್ಮೇಳನ ಪ್ರಯುಕ್ತ ತಮ್ಮ ಬೆಂಬಲಿಗರಿಗೆ ಪತ್ರ ಬರೆದಿರುವ ವಿಜಯ್, ತಮಿಳುನಾಡಿನ ಉತ್ತರ ಭಾಗದಲ್ಲಿ ನಡೆಯುತ್ತಿರುವ ರ್‍ಯಾಲಿಯಲ್ಲಿ ರಾಜಕೀಯ ಶಿಸ್ತು ಕಾಯ್ದುಕೊಳ್ಳುವಂತೆ ತಿಳಿಸಿದ್ದಾರೆ. ಈ ಭಾಗವು ಡಿಎಂಕೆ ಮತ್ತು ಅದರ ಮಿತ್ರ ಪಕ್ಷ ವಿಸಿಕೆಯ ಭದ್ರಕೋಟೆಯಾಗಿದ್ದು, ರಾಜಕೀಯವಾಗಿ ನಿರ್ಣಾಯಕ ಪ್ರದೇಶವಾಗಿದೆ.

ಈ ವರ್ಷದ ಫೆಬ್ರುವರಿ 2ರಂದು ತಮ್ಮ ಪಕ್ಷದ ಹೆಸರನ್ನು ಪ್ರಕಟಿಸಿದ್ದ ವಿಜಯ್, ಈ ಮೂಲಕ ರಾಜಕೀಯ ಪ್ರವೇಶವನ್ನು ಘೋಷಿಸಿದ್ದರು. ಇದೇ ಮೊದಲ ಬಾರಿಗೆ ನಟ ವಿಜಯ್ ರಾಜಕೀಯ ಭಾಷಣ ಮಾಡಲಿದ್ದು, ಅದರಲ್ಲಿ ಪಕ್ಷದ ಸಿದ್ಧಾಂತ ಮತ್ತು ನೀತಿಗಳನ್ನು ಸ್ಪಷ್ಟಪಡಿಸುವ ನಿರೀಕ್ಷೆಯಿದೆ. ಈ ಮೂಲಕ ತಮಿಳುನಾಡನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಮಹತ್ವಾಕಾಂಕ್ಷೆಯನ್ನು ವ್ಯಕ್ತಪಡಿಸುವ ಸಾಧ್ಯತೆ ಇದೆ.



ವಿಜಯ್

ಚೆನ್ನೈನಿಂದ 150 ಕಿ.ಮೀ ದೂರದಲ್ಲಿರುವ ವಿಕ್ರವಾಂಡಿಯಲ್ಲಿ ಭಾನುವಾರ ನಡೆಯಲಿರುವ ಸಮಾವೇಶಕ್ಕೆ ತಮಿಳುನಾಡು ಮತ್ತು ನೆರೆ ರಾಜ್ಯಗಳಿಂದ ಸುಮಾರು 5 ಲಕ್ಷಕ್ಕೂ ಹೆಚ್ಚು ಬೆಂಬಲಿಗರು ಮತ್ತು ಅಭಿಮಾನಿಗಳು ಬರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಯಶಸ್ವಿ ನೀತಿಗಳ ಮೂಲಕ ತಮಿಳುನಾಡಿನ ಜನರಿಗಾಗಿ ದುಡಿಯುವ ಪ್ರತಿಜ್ಞೆ ಮಾಡೋಣ. 2026ರ (ವಿಧಾನಸಭಾ ಚುನಾವಣೆ) ಗುರಿಯತ್ತ ನಮ್ಮ ಮೊದಲ ಹೆಜ್ಜೆ ಇಡೋಣ' ಎಂದು ವಿಜಯ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದೆಹಲಿ ವಿಶ್ವವಿದ್ಯಾಲಯ

ಜಾಹೀರಾತು ಸಂ. ಆರ್&ಪಿ/306/2024 ದಿನಾಂಕ: 27.09.2024

ದೆಹಲಿ ವಿಶ್ವವಿದ್ಯಾಲಯದ ಫಾಕಲ್ಟಿ ಆಫ್ ಟೆಕ್ನಾಲಜಿಯ ವಿವಿಧ ವಿಭಾಗಗಳಲ್ಲಿ ಫಾಕಲ್ಟಿ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿರ್ದಿಷ್ಟ ನಮೂನೆಯಲ್ಲಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್‌ನಲ್ಲಿ ಪ್ರಕಟಗೊಂಡ ದಿನಾಂಕದಿಂದ ಎರಡು ವಾರಗಳ ಅವಧಿ, ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ವಿಶ್ವವಿದ್ಯಾಲಯದ www.du.ac.in ವೆಬ್‌ಸೈಟ್‌ಗೆ ಭೇಟಿಕೊಡಿ ಮತ್ತು "ವರ್ಕ್ ವಿದ್ ಡಿಯು" ಶೀರ್ಷಿಕೆ ಅಡಿಯಲ್ಲಿ "ಜಾಬ್ಸ್ ಅಂಡ್ ಅಪರ್ಚುನಿಟೀಸ್" ಕ್ಲಿಕ್ ಮಾಡಿರಿ.

ಯಾವುದೇ ಮಾರ್ಪಾಡು / ತಿದ್ದುಪಡಿ ಉಂಟಾದಲ್ಲಿ, ಅದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ರಿಜಿಸ್ಟ್ರಾರ್

CBC 21231/12/0009/2425

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ. Y/E.29/2024-25/60

ದಿನಾಂಕ: 16.10.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1) ಹನುಮನಹಳ್ಳಿ ಹಾಲ್ಟ್:	ರೂ. 6,29,405/-
ಹನುಮನಹಳ್ಳಿ ಹಾಲ್ಟ್ ನಿಲ್ದಾಣದ ಪಿಎಫ್ ಸಂ. 1ರಲ್ಲಿ 405 ಮೀಟರ್‌ನ ಹೈ ಲೆವೆಲ್ ಪ್ಲಾಟ್‌ಫಾರ್ಮ್‌ನ ವ್ಯವಸ್ಥೆ. 2) ಹನುಮನಹಳ್ಳಿ ಹಾಲ್ಟ್: 10 ಚ.ಮೀ. ಅಳತೆಯ ಬುಕಿಂಗ್ ಕಚೇರಿ ಕಮ್ ನಿರೀಕ್ಷಣಾ ಕೊಠಡಿಯ ನಿರ್ಮಾಣ ಹಾಗೂ ವಿದ್ಯುತ್ ವ್ಯವಸ್ಥೆಗಳು.	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.11.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಸಾಮಾನ್ಯ, ಮೈಸೂರು

PUB/511/AAF/PRB/SWR/2024-25

South Western Railway - SWR | SWRRLY | SWRRLY



ಭಾರತ್ ಎಲೆಕ್ಟ್ರಾನಿಕ್ಸ್
भारत इलेक्ट्रॉनिक्स
BHARAT ELECTRONICS

QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)

CIN: L32309KA1954GOI000787

ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ-ಮೇಲ್: secretary@bel.co.in

ವೆಬ್‌ಸೈಟ್: www.bel-india.in ಫೋನ್: 080-25039300, ಫ್ಯಾಕ್ಸ್: 080-25039266

30ನೇ ಸೆಪ್ಟೆಂಬರ್ 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಹಾಗೂ ಅರ್ಧ ವಾರ್ಷಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕ ಪರಿಶೋಧಿತವಲ್ಲದ ಹಣಕಾಸು ಫಲಿತಾಂಶಗಳ ಸಾರಾಂಶ

(₹ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್‌ಅಲೋನ್						ಕ್ರೋಢೀಕೃತ					
		ತ್ರೈಮಾಸಿಕ ಅಂತ್ಯಗೊಂಡ			ಅರ್ಧ ವರ್ಷಾಂತ್ಯಕ್ಕೆ		ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ಅರ್ಧ ವರ್ಷಾಂತ್ಯಕ್ಕೆ		ವರ್ಷಾಂತ್ಯಕ್ಕೆ
		30.09.2024	30.06.2024	30.09.2023	30.09.2024	30.09.2023	31.03.2024	30.09.2024	30.06.2024	30.09.2023	30.09.2024	30.09.2023	31.03.2024
		(ಲೆಕ್ಕ ಪರಿಶೋಧಿತ ವಲ್ಲದ)			(ಲೆಕ್ಕ ಪರಿಶೋಧಿತ ವಲ್ಲದ)		(ಲೆಕ್ಕ ಪರಿಶೋಧಿತ)	(ಲೆಕ್ಕ ಪರಿಶೋಧಿತ ವಲ್ಲದ)			(ಲೆಕ್ಕ ಪರಿಶೋಧಿತ ವಲ್ಲದ)		(ಲೆಕ್ಕ ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,58,341	4,19,877	3,99,332	8,78,218	7,50,416	20,16,939	4,60,490	4,24,357	4,00,906	8,84,847	7,54,200	20,26,824
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	1,45,088	1,03,734	1,07,294	2,48,822	1,77,669	5,33,456	1,44,520	1,04,292	1,04,146	2,48,812	1,74,419	5,26,621
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,45,088	1,03,734	1,07,294	2,48,822	1,77,669	5,33,456	1,44,520	1,04,292	1,04,146	2,48,812	1,74,419	5,26,621
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,09,127	77,614	81,234	1,86,741	1,34,318	4,02,000	1,09,278	79,128	78,971	1,88,406	1,32,831	3,98,524
5.	ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	1,07,422	82,839	81,803	1,90,261	1,40,850	3,96,236	1,07,573	84,354	79,541	1,91,927	1,39,364	3,92,752
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	73,098	73,098	73,098	73,098	73,098	73,098	73,098	73,098	73,098	73,098	73,098
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	–	–	–	–	–	15,35,141	–	–	–	–	–	15,59,549
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ(₹ನಲ್ಲಿ)	1.49	1.06	1.11	2.55	1.84	5.50	1.50	1.08	1.08	2.58	1.82	5.45

ಟಿಪ್ಪಣಿಗಳು:

1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ನಿಬಂಧನೆ 33 (ಬಾಧ್ಯತೆಗಳ ಪಟ್ಟಿ ಮಾಡುವಿಕೆ ಮತ್ತು ಅಗತ್ಯತೆಗಳ ಪ್ರಕಟಗೊಳಿಸುವಿಕೆ), 2015 ರ ಅಡಿಯಲ್ಲಿ, ತಿದ್ದುಪಡಿಯಾದಂತೆ, ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (www.bseindia.com ಮತ್ತು www.nseindia.com) ಮತ್ತು ಕಂಪೆನಿಯ ವೆಬ್‌ಸೈಟ್ (www.bel-india.in) ನಲ್ಲಿಯೂ ಲಭ್ಯವಿದೆ.
2. ದಿನಾಂಕ 24 ಅಕ್ಟೋಬರ್, 2024 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನ ಮಾಡಲಾಯಿತು ಮತ್ತು ಅದನ್ನು 25 ಅಕ್ಟೋಬರ್, 2024 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಮನೋಜ್ ಜೈನ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಸ್ಥಳ: ತಿರುವನಂತಪುರಂ
ದಿನಾಂಕ: 25 ಅಕ್ಟೋಬರ್, 2024

ಕಾರಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಕಾರಹಳ್ಳಿ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾ. ಜಿಲ್ಲೆ – 562164, ಇ-ಮೇಲ್: pdodev.karahalli@gmail.com

ಸಂಖ್ಯೆ : ಕಾ.ಗ್ರಾ.ಪಂ./ಸಾ.ಟೆ./03/2024-25 ದಿನಾಂಕ : 24-10-2024

ಟೆಂಡರ್ ಪ್ರಕಟಣೆ (ಭಾಗ-1)

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ಕಾರಹಳ್ಳಿ ಗ್ರಾಮ ಪಂಚಾಯಿತಿಗೆ 2024-25 ನೇ ಸಾಲಿಗೆ ಅಗತ್ಯವಿರುವ ಬೀದಿ ದೀಪ ಮತ್ತು ಕುಡಿಯುವ ನೀರಿನ ಸರಕು / ಸಾಮಾಗ್ರಿಗಳನ್ನು ಪಡೆಯಲು ಪ್ರತ್ಯೇಕವಾಗಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ.

Calendar of Events

1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ : ಸಂಖ್ಯೆ : ಕಾಗ್ರಾಪಂ/ಸಾ.ಟೆ/03/2024-25, ದಿನಾಂಕ : 24-10-2024, 2) ಇಂ.ಎಂ.ಡಿ. ನಿಗಧಿಪಡಿಸಿರುವ ಮೊತ್ತ : 78,000/-, 3) ಇ-ಪೋರ್ಟಲ್ ಟೆಂಡರ್ ದಸ್ತಾವೇಜುಗಳನ್ನು ಪಡೆಯಬಹುದಾದ ದಿನಾಂಕ : 24-10-2024 ರಿಂದ, 4) ಇ-ಪೋರ್ಟಲ್ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ ದಿನಾಂಕ : 06-11-2024 ರ ಸಂಜೆ 4.30 ಗಂಟೆಯೊಳಗೆ, 5) ಈ ಟೆಂಡರ್‌ನ ಸಲಹೆಗಳಿಗೆ ನಿಗಧಿಪಡಿಸಿದ ಅಂತಿಮ ದಿನಾಂಕ : 04-11-2024 ರಂದು, 6) ಇ-ಪೋರ್ಟಲ್‌ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ತೆರೆದು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ಕಾರಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಾರಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 164, ದಿನಾಂಕ : 07-11-2024 ರ ಅಪರಾಹ್ನ 3.00 ಗಂಟೆ, (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ), 7) ಇ-ಪೋರ್ಟಲ್‌ನ ಟೆಂಡರ್ ಆರ್ಥಿಕ ಲಕೋಟೆಗಳನ್ನು ತೆರೆದು ಪರಿಶೀಲಿಸುವ ದಿನಾಂಕ ಮತ್ತು ವೇಳೆ : ಕಾರಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಾರಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 164, ದಿನಾಂಕ : 08-11-2024 ರ ಅಪರಾಹ್ನ 3.00 ಗಂಟೆ (ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ), 8) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : https://kppp.karnataka.gov.in ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕಾರಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಾರಹಳ್ಳಿ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 164, ಮೊಬೈಲ್ : 99640 10162, ಇ-ಮೇಲ್ : pdodev.karahalli@gmail.com

ಸಹಿ/- ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಕಾರಹಳ್ಳಿ ಗ್ರಾಮ ಪಂಚಾಯಿತಿ,
ದೇವನಹಳ್ಳಿ ತಾಲ್ಲೂಕು.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/2757/2024-25

ಶನಿವಾರ, ಅಕ್ಟೋಬರ್ 26, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೋಟ

ಅಹಮದಾಬಾದ್‌ನ ಕಂಕಾರಿಯ ಮೃಗಾಲಯದಲ್ಲಿ ಕ್ವಾರಂಟೈನ್‌ನಿಂದ ಬಿಡುಗಡೆಗೊಂಡ ಚಿರತೆಯೊಂದು ಕಾಣಿಸಿಕೊಂಡಿದ್ದು ಹೀಗೆ....



11 ಸ್ಥಾನಗಳಿಗೆ ಮುಂದುವರಿದ ಜಗ್ಗಾಟ 6
ಗಾಜಾ, ಲೆಬನಾನ್‌ನಲ್ಲಿ 38 ಸಾವು 7
‘ದ್ವೇಷಿಗಳ ದೂರವಿಡಿ, ದೇಶವ ಪ್ರೀತಿಸಿ’ 4
ಸೇನಾ ವಾಹನದ ಮೇಲೆ ಉಗ್ರರ ದಾಳಿ: 4 ಸಾವು 8

ಎಚ್‌ಎಂಟಿ: ಜಮೀನಿನ ಮೌಲ್ಯ ₹160 ಕೋಟಿ • ಅರಣ್ಯ ಇಲಾಖೆಯಿಂದ ಕಾರ್ಯಾಚರಣೆ

ಐದು ಎಕರೆ ಭೂಮಿ ಮರು ವಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಪೀಣ್ಯ- ಜಾಲಹಳ್ಳಿ ಸರ್ವೆ ನಂ.1ರಲ್ಲಿನ ಪೀಣ್ಯ ಪ್ಲಾಂಟೇಷನ್ ಜಾಗ
- ವೃಕ್ಷೋದ್ಯಾನ ನಿರ್ಮಿಸುವ ಯೋಜನೆ
- ಬೆಂಗಳೂರಿನಲ್ಲಿ ಅರಣ್ಯ ಇಲಾಖೆಯಿಂದ ಈ ವರ್ಷ 108 ಎಕರೆ ಮರು ವಶ

ಬೆಂಗಳೂರು: ನಗರದ ಎಚ್‌ಎಂಟಿ ಕ್ಯಾಂಪಸ್‌ನಲ್ಲಿರುವ ಅರಣ್ಯ ಪ್ರದೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮತ್ತು ರಾಜ್ಯ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ನಡುವೆ ಜಟಾಜಟಿ ನಡೆಯುತ್ತಿರುವ ಹೊತ್ತಿನಲ್ಲೇ, ಕಂಪನಿ ವಶದಲ್ಲಿದ್ದ ಐದು ಎಕರೆಯನ್ನು ಅರಣ್ಯ ಇಲಾಖೆಯು ಶುಕ್ರವಾರ ತನ್ನ ವಶಕ್ಕೆ ಪಡೆದುಕೊಂಡಿದೆ.

ಎಚ್‌ಎಂಟಿ ವಶದಲ್ಲಿದ್ದ ಪೀಣ್ಯ-ಜಾಲಹಳ್ಳಿ ಸರ್ವೆ ನಂ.1ರ ಪೀಣ್ಯ ಪ್ಲಾಂಟೇಷನ್‌ನ ₹160 ಕೋಟಿ ಮೌಲ್ಯದ ಐದು ಎಕರೆ ಜಮೀನನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದರು. ಜಮೀನಿನಲ್ಲಾಗಿದ್ದ ಕೆಲ ಒತ್ತುವರಿಗಳನ್ನು ತೆರವು ಮಾಡಿ, ಅರಣ್ಯ ಇಲಾಖೆಯ ಸ್ವತ್ತು ಎಂದು ಫಲಕ ಹಾಕಿದ್ದಾರೆ.



ಎಚ್‌ಎಂಟಿ ಆವರಣದಲ್ಲಿದ್ದ ಐದು ಎಕರೆ ಜಮೀನನ್ನು ಮರುವಶಕ್ಕೆ ಪಡೆದು, ಅರಣ್ಯ ಇಲಾಖೆ ಫಲಕ ಹಾಕಿದೆ

‘1896, 1901 ಅಧಿಸೂಚನೆಗಳ ಪ್ರಕಾರ ಸದರಿ ಪ್ರದೇಶವನ್ನು ಅರಣ್ಯ ಎಂದು ಘೋಷಿಸಲಾಗಿದ್ದು, ಭೂಪರಿವರ್ತನೆ ಮಾಡಿಕೊಳ್ಳದೆ ಅರಣ್ಯೇತರ ಉದ್ದೇಶಕ್ಕೆ ಈ ಜಮೀನನ್ನು ಬಳಸಿಕೊಳ್ಳುವಂತಿಲ್ಲ. ಈ ಜಮೀನು ಅರಣ್ಯ ಸ್ವರೂಪ ಕಳೆದುಕೊಂಡಿದೆ ಎಂದು ಡಿನೋಟಿಫೈ ಮಾಡಲು ಅನುಮತಿ ಕೋರಿ ಈ ಹಿಂದೆ ಅರಣ್ಯಾಧಿಕಾರಿಗಳು ನಿಯಮ ಬಾಹಿರವಾಗಿ ಇಂಟರ್‌ಲೋಕೇಟರಿ ಅಪ್ಲಿಕೇಷನ್ (ಐ.ಎ) ಸಲ್ಲಿಸಿದ್ದರು. ಈ ಅರ್ಜಿಯನ್ನು ಹಿಂಪಡೆಯುವಂತೆ ಸಚಿವರು ಸೂಚಿಸಿದ್ದರು’ ಎಂದು ಅರಣ್ಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಚ್‌ಎಂಟಿ ಕ್ಯಾಂಪಸ್‌ನಲ್ಲಿ ಬಳಕೆ ಮಾಡದ ಅರಣ್ಯ ಪ್ರದೇಶವನ್ನು ವಾಪಸ್ ಪಡೆದು, ಅಲ್ಲಿ ಕಬ್ಬನ್ ಉದ್ಯಾನ ಮತ್ತು ಲಾಲ್‌ಬಾಗ್‌ನಂತಹ ವೃಕ್ಷೋದ್ಯಾನ ನಿರ್ಮಿಸುವುದಾಗಿ ಈಶ್ವರ ಬಿ.ಖಂಡ್ರೆ ಹೇಳಿದ್ದರು.

ಎಚ್‌ಎಂಟಿ ವಶದಲ್ಲಿರುವ ಯಾವ ಪ್ರದೇಶವನ್ನೂ ಬಿಟ್ಟುಕೊಡುವುದಿಲ್ಲ ಎಂದು ಕುಮಾರಸ್ವಾಮಿ ಹೇಳಿದ್ದರು. ಆನಂತರ ಎಚ್‌ಎಂಟಿ ಕಾರ್ಖಾನೆಯ ವಿವಿಧ ವಿಭಾಗಗಳಿಗೆ ಹಲವು ಬಾರಿ ಭೇಟಿ ನೀಡಿ, ಕಾರ್ಖಾನೆ ಪುನಶ್ಚೇತನದ ಬಗ್ಗೆ ಅಧಿಕಾರಿಗಳು ಮತ್ತು ನೌಕರರ ಜತೆಗೆ ಮಾತುಕತೆ ನಡೆಸಿದ್ದರು. ಇದರ ಬೆನ್ನಲ್ಲೇ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ.

108 ಎಕರೆ ಅರಣ್ಯ ಮರುವಶ: ಅರಣ್ಯ ಇಲಾಖೆಯು ಒಂದು ವರ್ಷದಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 108 ಎಕರೆ ಅರಣ್ಯ ಜಮೀನಿನ ಒತ್ತುವರಿ ತೆರವು ಮಾಡಿ, ಮರುವಶಕ್ಕೆ ಪಡೆದಿದೆ. ಈ ಪ್ರದೇಶದಲ್ಲಿ ಸಸಿಗಳನ್ನು ನೆಡಲಾಗಿದೆ.



ಆಕಾಶಬುಟ್ಟಿ... ದೀಪಾವಳಿ ಹಬ್ಬ ಅಂಗವಾಗಿ ಹನುಮಂತನಗರದ ಎಂಟನೇ ಮುಖ್ಯರಸ್ತೆಯ ಮಳಿಗೆಯಲ್ಲಿ ಮಹಿಳೆಯೊಬ್ಬರು ಶುಕ್ರವಾರ ಆಕಾಶಬುಟ್ಟಿಯನ್ನು ಖರೀದಿಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ.

ಟಿಕೆಟ್ ದರ ಏರಿಸಿದರೆ ಪರ್ಮಿಟ್ ರದ್ದು

ದೀಪಾವಳಿ: ಖಾಸಗಿ ಬಸ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಿದ ಸಾರಿಗೆ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ ಟಿಕೆಟ್ ದರಗಳನ್ನು ಎರಡು-ಮೂರು ಪಟ್ಟು ಹೆಚ್ಚಳ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಅಂಥ ಬಸ್‌ಗಳ ಪರವಾನಗಿ (ಪರ್ಮಿಟ್) ಮತ್ತು ನೋಂದಣಿ ಪತ್ರವನ್ನು (ಆರ್‌ಸಿ) ಅಮಾನತು ಮಾಡಲಾಗುವುದು. ಟಿಕೆಟ್ ವಿತರಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ಎಚ್ಚರಿಸಿದೆ.

ಈ ಬಗ್ಗೆ ಶುಕ್ರವಾರ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ಅಧ್ಯಕ್ಷತೆಯಲ್ಲಿ ನಡೆದ ಸಾರಿಗೆ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಚರ್ಚಿಸಲಾಗಿದೆ. ಸಾಮಾನ್ಯ ದರಕ್ಕಿಂತ ಅಧಿಕ ವಸೂಲಿ ಮಾಡಿದರೆ ಕ್ರಮ ಕೈಗೊಳ್ಳಲು ನಿರ್ಧರಿಸ ಲಾಗಿದೆ ಎಂದು ಸಾರಿಗೆ ಇಲಾಖೆ (ಪ್ರವರ್ತನ) ಹೆಚ್ಚುವರಿ ಆಯುಕ್ತ ಸಿ. ಮಲ್ಲಿಕಾರ್ಜುನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಖಾಸಗಿ ಬಸ್‌ಗಳ ಟಿಕೆಟ್ ದರ ಪರಿಶೀಲಿಸುತ್ತಿರುವ ಸಾರಿಗೆ ಇಲಾಖೆಯ ಅಧಿಕಾರಿಗಳು

ಟಿಕೆಟ್ ದರ ಹೆಚ್ಚಳ ಮಾಡದಂತೆ ಖಾಸಗಿ ಬಸ್‌ಗಳಿಗೆ ನಿರ್ದೇಶನ ನೀಡಲಾಗಿದೆ. ಪ್ರಯಾಣಿಕರು ಆನ್‌ಲೈನ್ ಮೂಲಕ ಟಿಕೆಟ್ ಬುಕ್ಕಿಂಗ್ ಮಾಡುವಾಗ ಅನಧಿಕೃತ ಆ್ಯಪ್‌ಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಖಾಸಗಿ ಬಸ್‌ನವರು ಹೆಚ್ಚಿನ ದರ ಸಂಗ್ರಹಿಸುವುದು ಕಂಡು ಬಂದರೆ ಸಾರಿಗೆ ಇಲಾಖೆಯ ನಿಯಂತ್ರಣ ಕೊಠಡಿಗೆ (9449863429, 9449863426) ಅಥವಾ ಸ್ಥಳೀಯ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ದೂರು ನೀಡಬಹುದು ಎಂದು ಹೇಳಿದ್ದಾರೆ. ಪ್ರಯಾಣಿಕ ಸೇವಾ ವಾಹನಗಳಲ್ಲಿ ಅನಧಿಕೃತವಾಗಿ ಸ್ಫೋಟಕ ಸಾಮಗ್ರಿ, ಇತರ ಸರಕುಗಳನ್ನು ಸಾಗಣೆ ಮಾಡುವು ದನ್ನು ನಿಷೇಧಿಸಲಾಗಿದೆ. ಇಂಥ ಪ್ರಕರಣಗಳು ಕಂಡು ಬಂದರೆ ವಾಹನ ಮಾಲೀಕರ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

‘ಬರೀ ನಾಟಕ’

‘ರಾಜ್ಯದ ಕಾಂಟ್ರ್ಯಾಕ್ಟ್ ಕ್ಯಾರೇಜ್ ಬಸ್‌ಗಳಲ್ಲಿ ಹೆಚ್ಚಿನ ದರ ವಸೂಲಿ ಮಾಡಿದರೆ ಮಾತ್ರ ಕ್ರಮ ಕೈಗೊಳ್ಳುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಆದರೆ, ಹೆಚ್ಚಿನ ಬಸ್‌ಗಳು ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್ ವಾಹನಗಳಾಗಿವೆ. ಅವೆಲ್ಲ ಕೇಂದ್ರ ಸರ್ಕಾರದ ಅಡಿಯಲ್ಲಿ ಬರುತ್ತವೆ. ಆ ವಾಹನಗಳು ದರ ಏರಿಸಿದರೆ ಯಾವುದೇ ಕ್ರಮ ಕೈಗೊಳ್ಳುವ ಅಧಿಕಾರ ರಾಜ್ಯಕ್ಕೆ ಇಲ್ಲ. ಹಬ್ಬಗಳು ಬಂದಾಗ ತಪಾಸಣೆಯ ನಾಟಕ ಮಾಡಲಾಗುತ್ತದೆ. ಬಸ್ ದರ ಹೆಚ್ಚಳ ಹಾಗೇ ಮುಂದುವರಿದಿರುತ್ತದೆ’ ಎಂದು ಸಾರಿಗೆ ಇಲಾಖೆಯ ಕೆಲವು ಅಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ಹಬ್ಬ ಮುಗಿಯುವವರೆಗೆ ಪ್ರತಿ ಆರ್‌ಟಿಒ ವ್ಯಾಪ್ತಿಯಲ್ಲಿ ತಪಾಸಣೆಗಳು ನಡೆಯುತ್ತವೆ. ಅಧಿಕ ದರ ವಿಧಿಸಿದ ಬಸ್‌ಗಳನ್ನು ಪತ್ತೆಹಚ್ಚಲಾಗುತ್ತದೆ. ಆದರೆ, ಪರ್ಮಿಟ್ ಅಥವಾ ಆರ್‌ಸಿ ಅಮಾನತು ಆಗುವುದಿಲ್ಲ’ ಎಂದಿದ್ದಾರೆ.

ನೀಟ್: ಕೀ ಉತ್ತರ ಬಹಿರಂಗಕ್ಕೆ ಮನವಿ ವಿಚಾರಣೆಗೆ ಸಮ್ಮತಿ



ನವದೆಹಲಿ(ಪಿಟಿಐ): ಇದೇ ವರ್ಷದ ಆಗಸ್ಟ್ 11ರಂದು ನಡೆದಿದ್ದ ನೀಟ್–ಪಿಜಿ ಪರೀಕ್ಷೆಯ ಆಯ್ಕೆ ಪ್ರಕ್ರಿಯೆಯಲ್ಲಿನ ಪಾರದರ್ಶಕತೆ ಖಾತ್ರಿ ಪಡಿಸಿಕೊಳ್ಳಲು ಪ್ರಶ್ನೆ ಪತ್ರಿಕೆಗಳು ಮತ್ತು ಕೀ ಉತ್ತರಗಳಗಳನ್ನು ಬಹಿರಂಗಪಡಿಸು ವಂತೆ ಕೋರಿರುವ ಅರ್ಜಿಗಳ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿರುವ ಪೀಠದ ಮುಂದೆ ವಿದ್ಯಾರ್ಥಿಗಳ ಪರ ವಕೀಲೆ ತನ್ವಿ ದುಬೆ, ಪರೀಕ್ಷೆಯನ್ನು ಯಾವ ರೀತಿ ನಡೆಸಲಾಯಿತು ಎಂಬುದರ ಪ್ರಮಾಣಿತ ಕಾರ್ಯಾಚರಣೆಯ ವಿಧಾನವೂ ಇಲ್ಲ ಮತ್ತು ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಕಟಿಸಿಲ್ಲ. ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ರಾಜ್ಯಗಳು ಕೂಡ ಗೊಂದಲಕ್ಕೊಳಗಾಗಿವೆ ಎಂದು ಹೇಳಿದರು.

ರಾಜ್ಯ ಸರ್ಕಾರದ ಆದೇಶ ಎತ್ತಿ ಹಿಡಿದ ನ್ಯಾಯಾಲಯ

ಕೋಚಿಮುಲ್ ವಿಭಜನೆ

ಪ್ರಜಾವಾಣಿ ವಾರ್ತೆ

ಕೋಲಾರ: ‘ಕೋಲಾರ ಹಾಗೂ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ವಿಭಜಿಸಬೇಕೆಂಬುದು ಬಹಳ ದಿನಗಳ ಬೇಡಿಕೆ ಆಗಿತ್ತು. ರಾಜ್ಯ ಸರ್ಕಾರದ ಆದೇಶವನ್ನು ಈಗ ನ್ಯಾಯಾಲಯ ಎತ್ತಿ ಹಿಡಿದಿದೆ. ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವನ್ನು (ಕೋಚಿಮುಲ್) ವಿಭಜಿಸಲಾಗಿದೆ’ ಎಂದು ಒಕ್ಕೂಟದ ಅಧ್ಯಕ್ಷ, ಶಾಸಕ ಕೆ.ವೈ.ನಂಜೇಗೌಡ ತಿಳಿಸಿದರು.

ನಗರ ಹೊರವಲಯದ ಕೋಚಿಮುಲ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಹಿಂದಿನ ಸರ್ಕಾರ ಒಕ್ಕೂಟ ವಿಭಜನೆಗೆ ಮುಂದಾದಾಗ ಎರಡೂ ಜಿಲ್ಲೆಯವರ ತಕರಾರು ಇರಲಿಲ್ಲ. ಆದರೆ, ಆಗ ಆತುರದ ನಿರ್ಧಾರ ತೆಗೆದುಕೊಂಡು ವಿಭಜನೆಗೆ ಆದೇಶ ಮಾಡಿದ್ದರು. ಇದರಿಂದ ಒಕ್ಕೂಟಕ್ಕೆ ತೊಂದರೆ ಆಗಿತ್ತು, ಅಭಿವೃದ್ಧಿಯಿಂದ ವಂಚಿತರಾಗಿದ್ದೆವು’ ಎಂದರು.

'ಸರ್ಕಾರ ಬದಲಾದ ಮೇಲೆ ನಮ್ಮ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೋಲಾರ ಉಸ್ತುವಾರಿ ಸಚಿವ ಬೈರತಿ ಸುರೇಶ್, ಚಿಕ್ಕಬಳ್ಳಾಪುರ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಸಹಕಾರ ಸಚಿವ ರಾಜಣ್ಣ, ಎರಡೂ ಜಿಲ್ಲೆಯ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಸಹಕಾರದಿಂದ ಕಾನೂನು ರೀತಿಯಲ್ಲಿ ವಿಭಜನೆ ಮಾಡಬೇಕೆಂದು ಆದೇಶ ವಾಪಸ್ ಪಡೆಯಲಾಗಿತ್ತು. ಆ ನಂತರ ನ್ಯಾಯಾಲಯದ ಆದೇಶದಂತೆ ವಿಭಜನೆ ಮಾಡಲಾಗಿದೆ. ಇದರ ಪ್ರಕಾರ ಕೋಲಾರ ಹಾಗೂ ಚಿಕ್ಕಬಳ್ಳಾಪುರಕ್ಕೆ ಪ್ರತ್ಯೇಕ ಹಾಲು ಒಕ್ಕೂಟ ಲಭಿಸಿದಂತಾಗಿದೆ’ ಎಂದು ಹೇಳಿದರು.

‘ಶೇ57ರಷ್ಟು ಪಾಲು ಕೋಲಾರಕ್ಕೆ ಹಾಗೂ ಶೇ 43ರಷ್ಟು ಚಿಕ್ಕಬಳ್ಳಾಪುರಕ್ಕೆ ಸಿಗಲಿದೆ’ ಎಂದರು.

ಸದ್ಯದಲ್ಲೇ ಆಡಳಿತಾಧಿಕಾರಿ ನೇಮಕ

ವಿಭಜನೆಯಾಗಿರುವ ಕೋಚಿಮುಲ್‌ಗೆ ಸದ್ಯದಲ್ಲೇ ಆಡಳಿತಾಧಿಕಾರಿಯನ್ನು ಸರ್ಕಾರ ನೇಮಿಸಲಿದೆ. ಆರು ತಿಂಗಳೊಳಗೆ ಚುನಾವಣೆ ನಡೆಯಲಿದೆ ಎಂದು ನಂಜೇಗೌಡ ತಿಳಿಸಿದರು.

ಎರಡೂ ಒಕ್ಕೂಟಗಳಿಗೂ ಪ್ರತ್ಯೇಕವಾಗಿ ತಲಾ 13 ನಿರ್ದೇಶಕರ ಆಡಳಿತ ಮಂಡಳಿ ರಚನೆಯಾಗಲಿದೆ ಎಂದರು. ‘ಪ್ರಸಕ್ತ ಆಡಳಿತ ಮಂಡಳಿ ಶುಕ್ರವಾರ ಕೊನೆಯಾಗಿದೆ. ಮುಂದೆ ನೇಮಕವಾಗಲಿರುವ ಆಡಳಿತಾಧಿಕಾರಿ ಚುನಾವಣೆ ಪ್ರಕ್ರಿಯೆ ನಡೆಸಲಿದ್ದಾರೆ’ ಎಂದು ಹೇಳಿದರು.

ಗ್ರಾಮ ಆಡಳಿತಾಧಿಕಾರಿ ಹುದ್ದೆ: ನಾಳೆ ಪರೀಕ್ಷೆ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆ ಅ.27ರಂದು ರಾಜ್ಯದ 1,173 ಕೇಂದ್ರಗಳಲ್ಲಿ ನಡೆಯಲಿದೆ.

ಕನ್ನಡ ಕಡ್ಡಾಯ ಪರೀಕ್ಷೆಯಲ್ಲಿ ಉತ್ತೀರ್ಣರಾದ 4.8 ಲಕ್ಷ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹರಾಗಿದ್ದಾರೆ.

ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಎಲ್ಲ ಕೇಂದ್ರಗಳಲ್ಲೂ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದೆ.

ಒಎಂಆರ್ ನೋಂದಣಿ ಎಚ್ಚರ: ಸೆ.26ರಂದು ನಡೆದ ಕಡ್ಡಾಯ ಕನ್ನಡ ಪರೀಕ್ಷೆಯ ಒಎಂಆರ್ ಶೀಟ್‌ನಲ್ಲಿ ನೋಂದಣಿ ಸಂಖ್ಯೆ ಮತ್ತು ವರ್ಷನ್‌ಕೋಡ್ ನಮೂದಿಸುವಾಗ ಸುಮಾರು ಒಂಬತ್ತು ಸಾವಿರ ಅಭ್ಯರ್ಥಿಗಳು ತಪ್ಪು ಮಾಡಿದ್ದರು. ಅಂತಹ ಪ್ರಮಾದಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಬೇಕು. ಮಾದರಿ ಒಎಂಆರ್ ಶೀಟ್‌ಗಳನ್ನು ಬಳಸಿಕೊಂಡು ಅಭ್ಯಾಸ ಮಾಡಬೇಕು. ತಪ್ಪುಗಳಿಗೆ ಪ್ರಾಧಿಕಾರ ಜವಾಬ್ದಾರಿಯಾಗದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ವಯೋಮಿತಿ ಸಡಿಲಿಕೆ ನಂತರ ಅರ್ಜಿ ಸಲ್ಲಿಸಿದ್ದ 63 ಸಾವಿರ ಅಭ್ಯರ್ಥಿಗಳಿಗೆ ಅ.26ರಂದು ಕನ್ನಡ ಕಡ್ಡಾಯ ಪರೀಕ್ಷೆ ನಡೆಸಲಾಗುತ್ತಿದೆ. ಅವರಲ್ಲಿ ಜಿಟಿಟಿಸಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ್ದ 2,300 ಅಭ್ಯರ್ಥಿಗಳೂ ಸೇರಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.



ಪ್ರತ್ಯೇಕ ನಾಡಧ್ವಜ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕವು ಪ್ರತ್ಯೇಕ ನಾಡಧ್ವಜ ಹೊಂದಲು ಸಂಬಂಧಿತ ಪ್ರಾಧಿಕಾರಗಳಿಗೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಜಾ ಮಾಡಿದೆ.

ಈ ಸಂಬಂಧ, ‘ಉತ್ತರ ಕರ್ನಾಟಕ ಹೋರಾಟ ಸಮಿತಿ’ ರಾಜ್ಯ ಘಟಕದ ಅಧ್ಯಕ್ಷರಾದ ಬೆಳಗಾವಿಯ ಭೀಮಪ್ಪ ಗುಂಡಪ್ಪ ಗಡಾದ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಸ್‌.ಉಮಾಪತಿ, ‘ನಮ್ಮದು ಒಕ್ಕೂಟ ದೇಶ. ಪ್ರತಿ ರಾಜ್ಯವೂ ತನ್ನದೇ ಆದ ಧ್ವಜ ಹೊಂದುವ ಹಕ್ಕು ಹೊಂದಿದೆ. 2014ರಿಂದ ನಾವು ಈ ವಿಚಾರಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ಮುಖ್ಯಮಂತ್ರಿ ಸಿದ್ದರಾಮಯ್ಯ 2018ರ ಮಾರ್ಚ್ 8ರಂದು ಪ್ರತ್ಯೇಕ ಧ್ವಜವನ್ನು ಸಾರ್ವಜನಿಕವಾಗಿ ಅನಾವರಣಗೊಳಿಸಿದ್ದಾರೆ. ಆದರೆ, ಆನಂತರ ಯಾವುದೇ ಬೆಳವಣಿಗೆಯಾಗಿಲ್ಲ’ ಎಂದರು.

‘ಪ್ರತ್ಯೇಕ ಧ್ವಜ ಹೊಂದಲು ರಾಜ್ಯ ಸರ್ಕಾರವೇ ಬೆಂಬಲ ಸೂಚಿಸಿದೆ. ಇದಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿ ನೀಡಿದ್ದ ವರದಿಯನ್ನು ಅಂದಿನ ಸಂಪುಟ ಒಪ್ಪಿಕೊಂಡಿತ್ತು. ಈಗ ಸಮಿತಿಯ ವರದಿಯನ್ನು ನ್ಯಾಯಾಲಯದ ಮುಂದೆ ಇರಿಸಬೇಕು. ತದನಂತರ ಅದನ್ನು ಪೀಠವು ಪರಿಗಣಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಪ್ರತ್ಯೇಕ ನಾಡ ಧ್ವಜ ಹೊಂದುವ ವಿಚಾರವು ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ, ಈ ಅರ್ಜಿಯನ್ನು ವಜಾ ಮಾಡಲಾಗುತ್ತಿದೆ’ ಎಂದು ಅರ್ಜಿ ವಜಾಗೊಳಿಸಿತು.

Lino light silks
ಪರಿಚಯಿಸುತ್ತಿದ್ದೇವೆ ನಮ್ಮ ಹ್ಯಾಂಡ್ ವೋವನ್ ಲಿನೋ ರೇಷ್ಮೆ ಸೀರೆಗಳು, ಸೌಂದರ್ಯ ಮತ್ತು ಸೊಬಗಿನ ಸಮ್ಮಿಳನ.
100 years of Handcrafted Silk Heritage
RmKV Unique Silks


ಆರ್‌ಎಂಕೆವಿ ಡಿಸೈನ್ ಸ್ಟುಡಿಯೋದ ಲಿನೋ ಚೆಕ್ಸ್ ಕೊರ್ವೈ ರೇಷ್ಮೆ ಸೀರೆಗಳ ಸೌಂದರ್ಯವನ್ನು ಸಂಭ್ರಮಿಸಿ. ಇದನ್ನು ಆರ್‌ಎಂಕೆವಿ ಪೇಟೆಂಟ್ ಪಡೆದಿರುವ ಲೆನೋ ತಂತ್ರವನ್ನು ಬಳಸಿ ತಯಾರಿಸಲಾಗಿದೆ. ಹೀಗಾಗಿ ಸಾಂಪ್ರದಾಯಿಕ ರೇಷ್ಮೆ ಸೀರೆಗಳಿಗಿಂತ 40% ಹಗುರವಾಗಿರುತ್ತದೆ. ಈ ಸೀರೆಗಳು ಪಾಯಡಿ ಶೈಲಿಯ ಎರಡು ಶೇಡ್ ಇರುವ ದೇಹದ ಭಾಗವನ್ನು ಹೊಂದಿದ್ದು, ಟ್ರಾನ್ಸ್‌ಲುಸೆಂಟ್ ಚೆಕ್‌ಗಳು ಮತ್ತು ವೈಭವದ ಜರಿ ಪವುನ್ ಬುಟ್ಟಾಗಳನ್ನು ಹೊಂದಿರುತ್ತದೆ. ಸುಂದರವಾದ ಬಾರ್ಡರ್ ಮತ್ತು ಪಲ್ಲು ಅನ್ನು ಮುಘಲ್ ಪ್ರೇರಿತ ಮೋಟಿಫ್‌ಗಳಿಂದ ಅಲಂಕರಿಸಲಾಗಿದೆ.
Scan Here For An AR Experience
ಬೆಂಗಳೂರು : ಒರಾಯನ್ ಮಾಲ್, ಡಾ|| ರಾಜ್‌ಕುಮಾರ್ ರೋಡ್, ರಾಜಾಜಿ ನಗರ, ಫೋನ್ : 080 22682005
WhatsApp : 93429 54326 | Shop Online : www.rmkv.com | rmkvsilks rmkv_silks

ಸಂಭ್ರಮಾಚರಣೆಯ ಆನಂದದ ಚಾಲನೆ.
ಈ ದೀಪಾವಳಿ ಹಬ್ಬವನ್ನು Hero Motocorpನ VIDA V1 ಎಲೆಕ್ಟ್ರಿಕ್ ಸ್ಕೂಟರ್ ಜೊತೆಗೆ ₹40,000* ಮೌಲ್ಯದ ಕೊಡುಗೆಗಳನ್ನು ಸಂಭ್ರಮಿಸಿ.
2 ಕಳಚಬಹುದಾದ ಬ್ಯಾಟರಿಗಳು
165 ಕಿಮೀ** ಪ್ರಮಾಣಿತ ರೇಂಜ್
2500+ ಫಾಸ್ಟ್ ಚಾರ್ಜರ್‌ಗಳು
ವಿಸ್ತೃತ ಸರ್ವಿಸ್ ನೆಟ್‌ವರ್ಕ್
Avail exciting festive offers* on amazon | Flipkart



#MAKEWAY
*T&C Apply.
VIDA Powered by Hero
*Limited period offer. Call your nearest Hero dealership now.
Visit us in **BANGALORE:** Vittal Mallya Road — VIDA EXPERIENCE CENTRE, 7428411021 | Bommanahalli — VIDA HUB RT KRISHNA AUTO, 7428411021 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 7428411368 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 7428411021 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | BTM Layout — V3S MOTORS, 08048247240 | VAAYURATHA MOTORS, 08048247239 | **TUMKUR:** Sira Gate — SAI WHEELZ, 7428481172| BH Road — SAI WHEELZ, 7676016623 | Kunigal — SAI WHEELZ, 9164972652 | Tiptur — SAI WHEELZ, 9164840456.
**Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.



ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
LG
India ka Celebration
Win Dream Home Package* EVERY DAY
To participate, send an SMS <"First Name" "Last Name" GTM Code> to 7835073507
Grab Assured Gifts* Up to ₹51 CRORES
LG OLED evo AI | C4 Series 77
210cm (83) / 195cm (77) / 164cm (65) / 139cm (55) / 121cm (48) / 106cm (42)
LOWEST EMI ₹4,999/-
LG QNED AI 88/82" Series 55
189cm (75) / 164cm (65) / 139cm (55)
Quantum Dot NanoCell | Dolby Vision Atmos | 120Hz Refresh Rate
LOWEST EMI ₹2,999/-
LG
WIDEST RANGE OF LG AI TVs
LG OLED evo AI | B4 Series 55
210cm (83) / 195cm (77) / 164cm (65) / 139cm (55) / 121cm (48) / 106cm (42)
ALLM / VRR | 120Hz G-SYNC
LOWEST EMI ₹2,999/-
LG UHD/4K AI 65
189cm (75) / 164cm (65) / 139cm (55)
WebOS 24 | HDR 10Pro | Alpha5 Ai Processor 4k Gen 7 | Ai ThinQ
LOWEST EMI ₹3,999/-
LG OLED DAYS
Enjoy exclusive limited period offers* on LG OLED TVs.
Life's Good Offers*
webOS Re:New Program 5-YEAR GUARANTEED New Smart Platform Experience*
3 YEAR* WARRANTY (with select LG TVs)
Up to 26% CASHBACK Max ₹26000* ON SELECT CREDIT / DEBIT CARDS
1 EMI FREE* (On Select Paper Finance)
FIXED EMI Starting from ₹1999*
UP TO 30% OFF ON LG SOUNDBAR* (With Select 4K TVs)
OLED CIRCLE Get benefits up to ₹50000*
INTRODUCING THE ALL-NEW RANGE OF LG REFRIGERATORS STUNNINGLY STYLISH
Wi-Fi Convertible Side by Side Refrigerator GL-X257AMC3 • AI ThinQ • Door Cooling • Stylish Design • Hygiene Fresh • Multi-Air Flow • Water Dispenser • Ice Dispenser • Colour : Matt Black Capacity : 630 Ltrs. EMI STARTS ₹4,999/-
Wi-Fi Convertible Side by Side Refrigerator GL-B257DBM3 • Door Cooling • Premium Glass Door • Compressor Hygiene Fresh • Multi-Air Flow • Smart Diagnosis • Colour : Black Mirror Finish Capacity : 650 Ltrs. EMI STARTS ₹3,999/-
Wi-Fi Convertible Side by Side Refrigerator GL-B257EPZ3 • Door Cooling • Compressor Hygiene Fresh • Multi-Air Flow • Smart Diagnosis • Colour : Shiny Steel Capacity : 650 Ltrs. EMI STARTS ₹3,999/-
CBU Refrigerator GL-T412VPZX • AI ThinQ • Door Cooling • Stylish Design • Hygiene Fresh • Multi-Air Flow • Inverter Linear Compressor • Smart Diagnosis • Fresh O zone • Colour : Shiny Steel Capacity : 380 Ltrs. EMI STARTS ₹2,999/-
Frost Free Refrigerator GL-N292DPBY • Stylish Design • Auto Smart Connect • Smart Inverter Compressor • Toughened Glass Shelves • Colour : Purple Bloom Capacity : 240 Ltrs. EMI STARTS ₹1,999/-
Go Easy Intelligent! with AI DD™ MORE CONVENIENCE & MORE FABRIC CARE
11/7 Kg FHD1107STB Front Load Washer Dryer • Turbo Wash • AI Direct Drive • 6 Motion Direct Drive • Steam+ • LG ThinQ (Wi-Fi) • Smart Diagnosis • 10-year Warranty* • Colour : Middle Black EMI STARTS ₹3,999/-
10 Kg FHP1410Z5M Front Load Washig Machine • Inverter Direct Drive • AI Direct Drive • 6 Motion Direct Drive • Steam+ • LG ThinQ (Wi-Fi) • Smart Diagnosis • 10-year Warranty* • Colour : Middle Black EMI STARTS ₹2,999/-
9 Kg FHP1409Z4M Front Load Washig Machine • AI DD • 6 Motion DD • TurboWash 360 • Steam+ • LG ThinQ (Wi-Fi) • Smart Diagnosis • 10-year Warranty* • RPM : Max. 1400 • Colour : Middle Black EMI STARTS ₹1,999/-
14 Place Settings Dish Washer DFB512FP • Quad Wash • Inverter Direct Drive • Easy Rack Plus • LG ThinQ • 14 Place Setting • Colour : Platinum EMI STARTS ₹2,999/-
9 Kg THD09SWM Top Load Washig Machine • AI Intelligent Care • 6 Motion Drive • In-built Heater with steam • Allergy Removal • LG ThinQ • Turbo Drum • Turbo Wash • Colour : Middle Black EMI STARTS ₹1,999/-
ಬೆಂಗಳೂರು
ಸಂಜಯನಗರ Ph : 9606977121 / 9731306764
ಬಾಗಲೂರು Ph : 080-35712968 /35712969 9731306702
ನೆಲಮಂಗಲ Ph 9731306692 / 9686680755
ಬಿಡದಿ 7702203254
ಕೋಣನಕುಂಟೆ Ph :9731306531
ಬೇಗೂರು 080-41499467/9731306604
ಆರ್.ಟಿ. ನಗರ 9731307264 080-23559977
ಹೊಸಕೋಟೆ 9731306767
ಹೆಣ್ಣೂರು ಮುಖ್ಯ ರಸ್ತೆ 080-48651500/48505043 9731306571
ಮಹದೇವಪುರ 080-48148975, 9148151731
ಉತ್ತರಹಳ್ಳಿ 9731306547 49587474, 49537575
ವೈಟ್ ಫೀಲ್ಡ್ 080-40984677 9513499851
ಯಲಹಂಕ 9731306702
ಹೆಬ್ಬಗೋಡಿ 9731307257 080-27849941
ರಾಜಾಜಿನಗರ ಪ್ರೀಮಿಯಂ ಸ್ಟೋರ್ 41610910, 9731306537
ತನಿಸಂದ್ರ 9731306763/32521747
ವಿಜಯನಗರ 9731306631
ಪೀಣ್ಯ ಬಿ-ದಾಸರಹಳ್ಳಿ 9731306572 28393199/4199
ಮತ್ತಿಕೆರೆ 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ Ph :9731306550
ಬನಶಂಕರಿ Ph :9731306606 080-26691262/63
ಜಯನಗರ 26541050/51 9731306617
ಚಂದ್ರ ಲೇಔಟ್ 9731306558, 080 41503359
ನಾಗರಭಾವಿ 9731306616
ಮಾರತಹಳ್ಳಿ 080-42200050 9731306703
ಕೆಂಗೇರಿ 9731306634
ಚನ್ನಸಂದ್ರ 28613065/9731306766
ಸುಂಕದಕಟ್ಟೆ 9686680764 23288940/942
ರಾಜಾಜಿನಗರ Ph :9731306570 080-23134692
ವಿದ್ಯಾರಣ್ಯಪುರ 41721897/1861 9731306614
ಹೆಗ್ಗನಹಳ್ಳಿ 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ 41687449, 9731306596 25450871
ರಾಮಮೂರ್ತಿನಗರ 41638612/13 8861007307
ಪುಟ್ಟೇನಹಳ್ಳಿ 9591997265 080-40954615/16
ಹುಳಿಮಾವು 080-26483425 9731306625
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


Reliance
Growth is Life
ಹಬ್ಬದ ತಯಾರಿ ಮಾಡಲು,
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
SMART BAZAAR
ದೀಪಾವಳಿ ರೆಡಿ ಸೇಲ್
ದೀಪಾವಳಿ ಎಲ್‌ಇಡಿ ಲೈಟ್ಸ್ / ದಿಯಾ ಮತ್ತು ಡೆಕೊರೇಶನ್ ರೇಂಜ್
ಸ್ಮಾರ್ಟ್ ಬೆಲೆ ₹49
ಬ್ರಾಂಡೆಡ್ ಕಾಟನ್ ಬೆಡ್‌ಶೀಟ್
BUY 1 GET 2 FREE
ನಿಮ್ಮ ಪ್ರೀತಿಪಾತ್ರರಿಗೆ ವಿಶೇಷ ಉಡುಗೊರೆಗಳು
₹50 ರಿಂದ ₹6999 ರ ವರೆಗಿನ ಶ್ರೇಣಿಯಲ್ಲಿ ದೀಪಾವಳಿ ಗಿಫ್ಟ್ ಅನ್ನು ಆರಿಸಿಕೊಳ್ಳಿ
ಡ್ರೈ ಫ್ರೂಟ್ ಗಿಫ್ಟ್ ಪ್ಯಾಕ್ ಅಸೋರ್ಟೆಡ್ 225 g ರಿಂದ (ಆಯ್ದ ಪ್ರಕಾರಗಳು)
BUY 1 GET 1 FREE
ಲಾಲ್ / ಜೀಆರ್ ಬಿ ಬಗೆಬಗೆಯ ಸಿಹಿತಿಂಡಿಗಳು (4 ಸಾಲು) / ಕಾಜು ಕಟ್ಲಿ 200 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಬಿಕಾಜಿ / ಜೀಆರ್ ಬಿ / ಲಾಲ್ / ಸ್ನಾಕ್ಸ್ (ಪೇಡಾ / ಗುಲಾಬ್ ಜಾಮೂನ್ / ರಸಗುಲ್ಲಾ / ಲಾಡೂ / ಸೋನ್ ಪಾಪ್ಡಿ) 200 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಲಾಲ್ ಫೆಸ್ಟಿವ್ / ಸ್ನಾಕ್ಸ್ ಸೆಲೆಬ್ರೇಷನ್ಸ್ / ಬಿಕಾಜಿ ಅನೋಖಿ ರಿಶ್ತೆ ನಮ್ಕೀನ್ ಗಿಫ್ಟ್ ಪ್ಯಾಕ್ಸ್ 400 g ರಿಂದ (ಆಯ್ದ ಪ್ರಕಾರಗಳು)
BUY ANY 1 GET ANY 1 FREE
ಕ್ಯಾಡ್ಬರಿ ಸೆಲೆಬ್ರೇಷನ್ಸ್ ಶ್ರೇಣಿ 144.1 g ರಿಂದ (ಆಯ್ದ ಪ್ರಕಾರಗಳು)
BUY 2 GET 1 FREE
ಹಬ್ಬದ ತಿಂಡಿತಿನಿಸುಗಳನ್ನು ತಯಾರಿಸಿ
ಲೂಸ್ ಡೈಲಿ ಸೋನಾ ಮಸೂರಿ ರೈಸ್ / ಕಚ್ಚಾ ಕಡಲೆಕಾಯಿ 1 kg
ಸ್ಮಾರ್ಟ್ ಬೆಲೆ ₹51/₹125
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ಸ್ಮಾರ್ಟ್ ಬೆಲೆ ₹219
₹43.80 /kg
ಗುಡ್ ಲೈಫ್ ರೀಫೈನ್ಡ್ ಸೂರ್ಯಕಾಂತಿ / ರೈಸ್ ಬ್ರಾನ್ ಆಯಿಲ್ ರೈಸ್ ಬ್ರಾನ್ ಆಯಿಲ್ 1 L
ಸ್ಮಾರ್ಟ್ ಬೆಲೆ ₹122
ಚಕ್ಕಿ 5 kg / ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 10 kg
ಸ್ಮಾರ್ಟ್ ಬೆಲೆ ₹199
₹40 ಕಡಿತ
ನಿಮ್ಮ ಶೈಲಿಯಲ್ಲಿ ಆಚರಿಸಿ
ಸ್ಮಾರ್ಟ್ ಬೆಲೆ ₹329 / ₹445
ಗುಡ್ ಲೈಫ್ ಆಲ್ಮಂಡ್ ವ್ಯಾಲ್ಯೂ ಪ್ಯಾಕ್ / PL ಕ್ಯಾಶು 500 g
BUY ANY 2 GET ANY 1 FREE
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 275 g ರಿಂದ / ಲೊಟ್ಟೆ ಚೋಕೋ ಪೈ 336 g (12 Pcs) (ಆಯ್ದ ಪ್ರಕಾರಗಳು)
cello LARAH 18 / 22 Pcs ಓಪಲ್‌ವೇರ್ ಡಿನ್ನರ್ ಸೆಟ್
ಸ್ಮಾರ್ಟ್ ಬೆಲೆ ₹999
ಸ್ಮಾರ್ಟ್ ಬೆಲೆ ₹585
ನಂದಿನಿ ಶುದ್ಧ ತುಪ್ಪ 1 L
ಸ್ಪ್ರೈಟ್ / ಥಮ್ಸ್ ಅಪ್ / ಕೋಕ ಕೋಲಾ / ಮಾಜಾ 600 ml ರಿಂದ (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಸ್ಮಾರ್ಟ್ ಬೆಲೆ ₹1699
ಕ್ಯಾಬಿನ್ ಟ್ರಾಲಿ ಜೊತೆಗೆ ಗಿಫ್ಟ್ ಬಾಕ್ಸ್
ಫ್ಯಾಷನ್ ₹199* ಕ್ಕೆ
ಶುಭಕಾರ್ಟ್‌ದರ್ಶನ್ ಕರ್ಪೂರ್ ಪೂಜಾ ಆಯಿಲ್ 900 ml
ಸ್ಮಾರ್ಟ್ ಬೆಲೆ ₹109
ಆಂಡ್ರಾಯ್ಡ್ ಸ್ಮಾರ್ಟ್ ಎಲ್ ಇಡಿ ಟಿವಿ (80 cm / 109 cm / 140 cm)
ಸ್ಮಾರ್ಟ್ ಬೆಲೆ ₹6999
₹799
₹5000 ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಫ್ಯಾಷನ್ ಶಾಪಿಂಗ್ ಮೇಲೆ
₹499
₹3000-₹4999 ಮೌಲ್ಯದ ಫ್ಯಾಷನ್ ಶಾಪಿಂಗ್ ಮೇಲೆ
₹149
₹2000-₹2999 ಮೌಲ್ಯದ ಫ್ಯಾಷನ್ ಶಾಪಿಂಗ್ ಮೇಲೆ
10% INSTANT DISCOUNT* SBI card
#Min. Trxn.: ₹3,000; Max. Discount: ₹500 Per Trxn; Valid only on one Trxn. per Credit Card; Validity: 23 Oct - 27 Oct 2024. T&C Apply.
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
JioMart
fresh Signature
ಈಗ ತೆರೆದಿದೆ ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು.
SMART BAZAAR

ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆ ಸಮಾರೋಪ ಸಮಾರಂಭದಲ್ಲಿ ಸಿ.ಎಂ ಸಿದ್ದರಾಮಯ್ಯ ಕರೆ

‘ದ್ವೇಷಿಗಳ ದೂರವಿಡಿ, ದೇಶವ ಪ್ರೀತಿಸಿ’

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ‘ಕಿತ್ತೂರು ರಾಣಿ ಚನ್ನಮ್ಮ ಮತ್ತು ಅವರ ಜೊತೆಗಿದ್ದ ಯೋಧರು ಸ್ವಾರ್ಥಕ್ಕಾಗಿ ಹೋರಾಡಲಿಲ್ಲ. ಈ ನಾಡನ್ನು ಅವರು ಉತ್ಕಟವಾಗಿ ಪ್ರೀತಿಸಿದ್ದರು. ನಾವು ಕೂಡ ಸ್ವಾರ್ಥದಿಂದ ಹೊರಗೆ ನಿಂತು ದೇಶವನ್ನು ಮತ್ತು ದೇಶದ ಜನರನ್ನು ಪ್ರೀತಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ರಾಣಿ ಚನ್ನಮ್ಮ ವೇದಿಕೆಯಲ್ಲಿ ಶುಕ್ರವಾರ ರಾತ್ರಿ ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಈ ದೇಶದ ಪ್ರಜೆಗಳನ್ನು ಇದೇ ದೇಶದ ದೊರೆಗಳು ಆಳಬೇಕು ಎಂಬ ಕಾರಣಕ್ಕೆ ಚನ್ನಮ್ಮ ಯುದ್ಧ ಮಾಡಿದರು. ಅವರ ನಿಸ್ವಾರ್ಥ ದೇಶಪ್ರೇಮ ‘ಇಂದಿನವರು’ ಕಲಿಯಬೇಕು’ ಎಂದರು.

‘ಮೊದಲ ಬಾರಿಗೆ ನಾನೇ ಚನ್ನಮ್ಮ ಜಯಂತಿಯನ್ನು ಸರ್ಕಾರದಿಂದ ಆಚರಿಸಲು ಶುರು ಮಾಡಿದೆ. ಯಾವುದೇ ಸಮಾಜವನ್ನು ವೈಭವೀಕರಿಸಲು ಈ ನಿರ್ಧಾರ ಮಾಡಲಿಲ್ಲ. ಈ ನೆಲದ ಇತಿಹಾಸ ಪೀಳಿಗೆಯಿಂದ ಪೀಳಿಗೆಗೆ ದಾಟಬೇಕೆಂಬ ಕಾರಣಕ್ಕೆ ಮಾಡಿದ್ದೇನೆ’ ಎಂದರು.

‘ಬಸವಾದಿ ಶರಣರು 12ನೇ ಶತಮಾನದಲ್ಲೇ ಸಮಾನತೆ ಸಾರಿದರು. ಇಂದಿಗೂ ಅದು ಸಾಧ್ಯವಾಗಿಲ್ಲ. ಆದರೆ, ಕಿತ್ತೂರು ಚರಿತ್ರೆ ತೆರೆದು ನೋಡಿ; ಎಲ್ಲ ಸಮಾಜದವರೂ ಚನ್ನಮ್ಮನ ಜತೆ ನಿಂತ ಉದಾಹರಣೆ ಸಿಗುತ್ತವೆ. ನಮಗೆ ಇಂಥವರು ಮಾದರಿಯಾಗಬೇಕು. ಸಮಾಜಗಳ ಮಧ್ಯೆ ದ್ವೇಷ ಬೆಳೆಸುವವರನ್ನು ವಿರೋಧಿಸಲೇಬೇಕು. ನಮಗೆ ಸಿಕ್ಕ ಅಧಿಕಾರ ಬಳಸಿಕೊಂಡೇ ಸಮಾನತೆ ತರಬೇಕು’ ಎಂದೂ ಅವರು ಕರೆ ನೀಡಿದರು.

ಸಮಾರೋಪ ಭಾಷಣ ಮಾಡಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ‘ಸ್ವಾತಂತ್ರ್ಯ ಯೋಧರಿಗೆ ಅನ್ನ- ನೀರು ನೀಡಿದವರೂ ಸ್ವಾತಂತ್ರ್ಯ ಹೋರಾಟಗಾರರೇ. ಆದರೆ, ಗಂಡಸರಿಗೆ ಹಿನ್ನೆಲೆಯಾಗಿ ನಿಂತ ಮಹಿಳೆಯರನ್ನು ನಾವು ಸ್ವಾತಂತ್ರ್ಯ ಹೋರಾಟಗಾರರು ಎಂದು ದಾಖಲಿಸಲು ಆಗಿಲ್ಲ. ಈ ವಿಷಯದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದ ವ್ಯಾಖ್ಯಾನ ಬದಲಾಗಬೇಕು’ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಅಧ್ಯಕ್ಷತೆ ವಹಿಸಿದ್ದ ಶಾಸಕ ಬಾಬಾಸಾಹೇಬ ಪಾಟೀಲ ಮಾತನಾಡಿದರು. ಕಿತ್ತೂರು ರಾಜಗುರು ಸಂಸ್ಥಾನ ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ನಿಚ್ಚಣಕಿಯ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಇದ್ದರು.

> **3,000 ವರ್ಷಗಳ ಹಿಂದಿನ ರಾಮನ ಚರಿತ್ರೆ ಎಲ್ಲರಿಗೂ ಗೊತ್ತಿದೆ. 200 ವರ್ಷಗಳ ಹಿಂದಿನ ಕಿತ್ತೂರು ಇತಿಹಾಸ ಅರಿವಿಲ್ಲ. ಇತಿಹಾಸದ ಬಗೆಗಿನ ನಮ್ಮ ಆಲೋಚನೆ ಸರಿಯಾಗಬೇಕಿದೆ**
> **ಪುರುಷೋತ್ತಮ ಬಿಳಿಮಲೆ**
> ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ



ಚನ್ನಮ್ಮನ ಕಿತ್ತೂರಿನಲ್ಲಿ ಶುಕ್ರವಾರ ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆಯ ಸಮಾರೋಪ ಸಮಾರಂಭದ ಪ್ರಯುಕ್ತ ರಾಣಿ ಚನ್ನಮ್ಮನ ಬೃಹತ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಳಿಕ ಜನರತ್ತ ಕೈ ಬೀಸಿದರು ಪ್ರಜಾವಾಣಿ ಚಿತ್ರ

ಕಸಾಪ ಸಭೆ ಮುಂದೂಡಿಕೆ

ಬೆಂಗಳೂರು: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರ ಆಯ್ಕೆ ಕರಿತು ಚರ್ಚಿಸಲು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಇದೇ 28ರಂದು ಹಮ್ಮಿಕೊಂಡಿದ್ದ ಕಾರ್ಯಕಾರಿ ಸಮಿತಿ ಸಭೆಯನ್ನು ಮುಂದೂಡಲಾಗಿದೆ.

ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಚರ್ಚೆಯು ವಿವಾದದ ಸ್ವರೂಪ ತಾಳಿದ್ದರಿಂದ ಸಾಹಿತಿಗಳನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಲು ನಿರ್ಧರಿಸಿರುವ ಪರಿಷತ್ತು, ಈ ಬಗ್ಗೆ ಚರ್ಚೆಗೆ ತುರ್ತಾಗಿ ಅ.28ರಂದು ಕಾರ್ಯಕಾರಿ ಸಮಿತಿ ಸಭೆಯನ್ನು ಕರೆದಿತ್ತು. ಇಲ್ಲಿ ಒಮ್ಮತದ ಅಭಿಪ್ರಾಯ ವ್ಯಕ್ತವಾಗದಿದ್ದಲ್ಲಿ ಇನ್ನೊಂದು ಸಭೆ ನಡೆಸಿ, ಸಮ್ಮೇಳನಾಧ್ಯಕ್ಷರ ಹೆಸರನ್ನು ಘೋಷಿಸಲು ನಿರ್ಧರಿಸಿತ್ತು. ಆದರೆ, ಚುನಾವಣೆ ನೀತಿ ಸಂಹಿತೆಯ ಕಾರಣ ನೀಡಿ, ಸಭೆಯನ್ನು ಮುಂದೂಡಲಾಗಿದೆ ಎಂದು ಕಸಾಪ ಮೂಲಗಳು ತಿಳಿಸಿವೆ.

ಈ ಮೊದಲು ನ.12ರಂದು ಕಾರ್ಯಕಾರಿ ಸಮಿತಿ ಸಭೆ ನಿಗದಿಯಾಗಿತ್ತು. ಈ ಸಭೆಯಲ್ಲಿ ಸಮ್ಮೇಳನಾಧ್ಯಕ್ಷರ ಹೆಸರನ್ನು ಘೋಷಿಸುವುದಾಗಿ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದರು.

‘ದನದ ಕೊಬ್ಬಿನಾಂಶ ಪತ್ತೆಯಾಗಿಲ್ಲ’

ವಿವಿಧ ಬ್ರ್ಯಾಂಡ್‌ಗಳ ತುಪ್ಪದ 230 ಮಾದರಿ ಪರೀಕ್ಷೆ ನಡೆಸಿದ ಇಲಾಖೆ: ಸಚಿವ

ಪ್ರಜಾವಾಣಿ ವಾರ್ತೆ



ಮುಖ್ಯಾಂಶಗಳು
- ಸೆಪ್ಟೆಂಬರ್‌ನಲ್ಲಿ 142 ಆಹಾರ ಮಳಿಗೆಗಳಲ್ಲಿ ತಪಾಸಣೆ
- ಐದು ಮಾದರಿಗಳು ಅಸುರಕ್ಷಿತ, ಒಂದು ಕಳಪೆ

ಬೆಂಗಳೂರು: ‘ರಾಜ್ಯದಲ್ಲಿ ಪತಂಜಲಿ ಸೇರಿದಂತೆ ತುಪ್ಪದ 230 ಮಾದರಿಗಳನ್ನು ಪರೀಕ್ಷಿಸಲಾಗಿದ್ದು, ಯಾವುದೇ ತುಪ್ಪದಲ್ಲಿ ದನದ ಮಾಂಸದ ಕೊಬ್ಬಿನ ಅಂಶ ಪತ್ತೆಯಾಗಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿರ್ಮಿಸಿರುವ ‘ಮ್ಯಾಜಿಕ್ ಬಾಕ್ಸ್’ ಆಹಾರ ಪರೀಕ್ಷಾ ಕೇಂದ್ರಕ್ಕೆ ಇಲ್ಲಿ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ‘ತಿರುಪತಿ ಲಾಡು ಪ್ರಕರಣ ದಿಂದಾಗಿ ತುಪ್ಪದ ಬಗ್ಗೆ ಸಾರ್ವಜನಿಕರಲ್ಲಿ ಹಲವು ಅನುಮಾನಗಳು ತಲೆದೋರಿದ್ದವು. ಮಾರುಕಟ್ಟೆಯಲ್ಲಿ ಸಿಗುವ ತುಪ್ಪಕ್ಕೆ ದನದ ಮಾಂಸದ ಕೊಬ್ಬಿನ ಅಂಶ ಬಳಸಲಾಗುತ್ತಿದೆ ಎಂಬ ಆತಂಕ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿತ್ತು. ಆದ್ದರಿಂದ ರಾಜ್ಯದಲ್ಲಿ ಪತಂಜಲಿ ಸೇರಿದಂತೆ ವಿವಿಧ ಬ್ರ್ಯಾಂಡ್‌ಗಳ 230 ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅವುಗಳಲ್ಲಿ 224 ಮಾದರಿಗಳು ಸೇವನೆಗೆ ಸುರಕ್ಷಿತ ಎನ್ನುವುದು ದೃಢಪಟ್ಟಿದೆ. ಐದು ಮಾದರಿಗಳು ಅಸುರಕ್ಷಿತವಾಗಿದ್ದು, ಒಂದು ಮಾದರಿ ಮಾತ್ರ ಕಳಪೆ ಗುಣಮಟ್ಟದ್ದಾಗಿದೆ’ ಎಂದರು.

‘ರಾಜ್ಯದಾದ್ಯಂತ ರೈಲು ನಿಲ್ದಾಣಗಳಲ್ಲಿರುವ ಆಹಾರ ಮಳಿಗೆಗಳಲ್ಲಿನ ಆಹಾರ ಗುಣಮಟ್ಟ ಪರಿಶೀಲನೆಗಾಗಿ ಸೆಪ್ಟೆಂಬರ್‌ನಲ್ಲಿ ವಿಶೇಷ ಅಭಿಯಾನ ನಡೆಸಲಾಗಿತ್ತು. 142 ಆಹಾರ ಮಳಿಗೆಗಳಲ್ಲಿ ತಪಾಸಣೆ ಮಾಡಲಾಗಿದ್ದು, ಲೋಪಗಳನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಲಾಗಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಸ್ಥಾಪಿಸಿರುವ 35 ಹೋಟೆಲ್ ಘಟಕಗಳಿಗೆ ಸರಬರಾಜಾಗುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸುವಂತೆ ಸೂಚಿಸಲಾಗಿದೆ’ ಎಂದು ತಿಳಿಸಿದರು.

‘ಕುರಿ, ಮೇಕೆ ಮಾಂಸದ 184 ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಅವುಗಳಲ್ಲಿ 179 ಮಾದರಿಗಳು ಸುರಕ್ಷಿತ, ಐದು ಮಾದರಿಗಳು ಕಳಪೆ ಎನ್ನುವುದು ದೃಢಪಟ್ಟಿದೆ. ಮೊಟ್ಟೆಯ 81 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಅವುಗಳಲ್ಲಿ 80 ಮಾದರಿಗಳು ಸುರಕ್ಷಿತ, ಒಂದು ಮಾದರಿ ಕಳಪೆ ಎನ್ನುವುದು ಖಚಿತಪಟ್ಟಿದೆ. ಕೋಳಿ ಮಾಂಸದ 246 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಅವುಗಳಲ್ಲಿ 236 ಮಾದರಿಗಳು ಸುರಕ್ಷಿತವೆಂದು, 10 ಮಾದರಿಗಳು ಕಳಪೆ ಗುಣಮಟ್ಟದ್ದೆಂದು ವರದಿಯಾಗಿದೆ’ ಎಂದರು.

ಮುಡಾ ಅಧಿಕಾರಿಗಳಿಗೆ ಇ.ಡಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಮನ್ಸ್ ಜಾರಿ ಮಾಡಿ ವಿಚಾರಣೆಗೆ ಕರೆದಿದ್ದ ತನಿಖಾಧಿಕಾರಿಗಳು
- ದಾಖಲೆಗಳ ಕಾಲಾನುಕ್ರಮ ಮತ್ತು ವಿವಿಧ ಪ್ರಕ್ರಿಯೆಗಳ ಬಗ್ಗೆ ಪ್ರಶ್ನೆ
- ವಿಚಾರಣೆಗೆ ಹಾಜರಾಗಿ ವಿವರಣೆ ನೀಡಿದ ಮುಡಾದ ಆರು ಸಿಬ್ಬಂದಿ

ಬೆಂಗಳೂರು/ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡಿದ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆರು ಅಧಿಕಾರಿಗಳನ್ನು ವಿಚಾರಣೆ ನಡೆಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಮುಡಾದ ವಿವಿಧ ವಿಭಾಗಗಳ ಆರು ಸಿಬ್ಬಂದಿಗೆ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ 11(1ಎ) ಮತ್ತು 11(1ಬಿ) ಅಡಿಯಲ್ಲಿ ಸಮನ್ಸ್ ನೀಡಲಾಗಿತ್ತು. ಮುಡಾ ಕಚೇರಿಯಲ್ಲಿ ನಡೆಸಿದ ಶೋಧ ಕಾರ್ಯದ ವೇಳೆ ಸಂಗ್ರಹಿಸಲಾದ ದಾಖಲೆಗಳನ್ನು ಕಾಲಾನುಕ್ರಮದಲ್ಲಿ ಪರಿಷ್ಕರಿಸಲು ಮತ್ತು ಕೆಲವು ದಾಖಲೆಗಳನ್ನು ವಿವರಿಸಲು ಸೂಚಿಸಲಾಗಿತ್ತು’ ಎಂದು ಇ.ಡಿ ಮೂಲಗಳು ಹೇಳಿವೆ.

‘ವಿಶೇಷ ತಹಶೀಲ್ದಾರ್ ರಾಜಶೇಖರ್, ಈ ಹಿಂದಿನ ಮುಡಾ ಆಯುಕ್ತರ ಆಪ್ತ ಸಹಾಯಕಿ ಹುದ್ದೆಯಲ್ಲಿದ್ದ ಶೃತಿ, ಎಫ್‌ಡಿಎಗಳಾದ ಪ್ರಶಾಂತ್, ರವಿ ಕುಮಾರ್ ಮತ್ತು ಇನ್ನೂ ಇಬ್ಬರು ಸಿಬ್ಬಂದಿಗೆ ಸಮನ್ಸ್ ನೀಡಲಾಗಿತ್ತು. ಅಗತ್ಯಬಿದ್ದರೆ ಮತ್ತೆ ವಿಚಾರಣೆಗೆ ಕರೆಯಲಾಗುತ್ತದೆ. ಆಗ ಹಾಜರಾಗಬೇಕು ಎಂದೂ ಸೂಚಿಸಲಾಗಿದೆ’ ಎಂದು ಮಾಹಿತಿ ನೀಡಿವೆ.

‘ಈ ವಾರದಲ್ಲೇ ಕಚೇರಿಗೆ ಹಾಜರಾಗುವಂತೆ ಇ.ಡಿ ಸೂಚಿಸಿತ್ತು. ಹೀಗಾಗಿ ಅಷ್ಟೂ ಸಿಬ್ಬಂದಿ ಶುಕ್ರವಾರವೇ ಇ.ಡಿ ಅಧಿಕಾರಿಗಳ ಎದುರು ಹಾಜರಾಗಿ, ಅವರು ಕೇಳಿದ ವಿವರಣೆ ನೀಡಿದ್ದಾರೆ. ಭೂಸ್ವಾಧೀನ ಮತ್ತು ನಿವೇಶನ ಹಂಚಿಕೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ವಿವರಿಸಿದ್ದಾರೆ’ ಎಂದು ಮುಡಾ ಮೂಲಗಳು ಹೇಳಿವೆ.

‘ಮುಡಾ ಕಚೇರಿಯಲ್ಲಿ ಪ್ರತಿ ಮಾಡಿಕೊಳ್ಳಲಾದ ಹಲವು ದಾಖಲೆ ಪತ್ರಗಳ ಸಂಬಂಧ ಗೊಂದಲಗಳ ಬಗ್ಗೆ ಇ.ಡಿ ಅಧಿಕಾರಿಗಳು ಪ್ರಶ್ನಿಸಿದರು. ಅವುಗಳನ್ನು ವಿವರಿಸಲಾಯಿತು. ಮುಡಾ ನಿವೇಶನ ಹಂಚಿಕೆ ಸಂಬಂಧದ ಶಿಫಾರಸು ಪತ್ರಗಳ ನಿರ್ವಹಣೆ ಪ್ರಕ್ರಿಯೆ, 50:50ರ ಅನುಪಾತದಲ್ಲಿ ಹಂಚಿಕೆಯಾದ ನಿವೇಶನಗಳ ಬಗ್ಗೆ ವಿವರಣೆ ಪಡೆದುಕೊಂಡರು’ ಎಂದು ತಿಳಿಸಿವೆ.

ಮುಡಾ ನಿವೇಶನ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಮತಿ ನೀಡಿದ್ದರು. ಹೈಕೋರ್ಟ್ ಏಕಸದಸ್ಯ ಪೀಠವು ರಾಜ್ಯಪಾಲರ ಆದೇಶವನ್ನು ಎತ್ತಿಹಿಡಿದಿತ್ತು. ಪರಿಣಾಮವಾಗಿ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಸಿದ್ದರಾಮಯ್ಯ ವಿರುದ್ಧ ಸ್ನೇಹಮಯಿ ಕೃಷ್ಣ ಅವರು ಇ.ಡಿಗೆ ದೂರು ನೀಡಿದ್ದರು. ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ ತನಿಖೆ ನಡೆಸುತ್ತಿದೆ. ಅ.18 ಮತ್ತು 19ರಂದು ಮುಡಾ ಕಚೇರಿ ಮತ್ತು ಮೈಸೂರು ತಾಲ್ಲೂಕು ಕಚೇರಿಯಲ್ಲಿ ಇ.ಡಿ ಅಧಿಕಾರಿಗಳು ಶೋಧಕಾರ್ಯ ನಡೆಸಿದ್ದರು. ಸಾವಿರಾರು ಪುಟಗಳಷ್ಟು ದಾಖಲೆ ಪ್ರತಿಗಳನ್ನು ಕೊಂಡೊಯ್ದಿದ್ದರು.

ರೇವಣ್ಣ ಆಯ್ಕೆ ಅಸಿಂಧು ಕೋರಿದ ಅರ್ಜಿ: ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಚುನಾವಣೆಯಲ್ಲಿ ಅಕ್ರಮ ನಡೆಸಿ ಜಯಗಳಿಸಿರುವ ಹೊಳೆನರಸೀಪುರದ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು’ ಎಂದು ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಡಿ.ದೇವರಾಜೇಗೌಡ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ನವೆಂಬರ್ 25ಕ್ಕೆ ಮುಂದೂಡಿದೆ.

ಈ ಸಂಬಂಧ ಡಿ.ದೇವರಾಜೇಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರ ಹಾಗೂ ದೂರುದಾರರ ಪರ ವಕೀಲರು ವಾದ ಮಂಡಿಸಲು ಸಮಯಾವಕಾಶ ಕೋರಿದ್ದರಿಂದಾಗಿ, ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ ರವರ ಕಛೇರಿ ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂ: 080–23343770
ಸಂಖ್ಯೆ: KFD/HOFF/A3(CASH)/80/2023-PnR-KFD ದಿನಾಂಕ: 24.10.2024
ಪ್ರಕಟಣೆ
ಸರ್ಕಾರದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಅಪಜೀ 18 ಹುಸೃಮು 2019, ದಿನಾಂಕ: 13.08.2019ರಲ್ಲಿ ಕೆನಡಾ ದೇಶದಲ್ಲಿ ದಿನಾಂಕ: 16.08.2019ರಿಂದ ದಿನಾಂಕ:01.09.2021ರವರೆಗಿನ ಅವಧಿಯಲ್ಲಿ ಉನ್ನತ ವ್ಯಾಸಂಗಕ್ಕೆ ಸರ್ಕಾರವು ನೀಡಿರುವ ಷರತ್ತುಬದ್ಧವಾಗಿ ಅನುಮತಿಯ ಅವಧಿ ಮುಗಿದ ನಂತರ ತಡವಾಗಿ ದಿನಾಂಕ:09.06.2022 ರಂದು ಈ ಕಛೇರಿಗೆ ಸಲ್ಲಿಸಿರುವ ಕಾರ್ಯವರದಿ–ಕಂ–ರಾಜೀನಾಮೆ ಮನವಿಯನ್ನು ಸಕ್ಷಮ ಪ್ರಾಧಿಕಾರವು ಗಣನೆಗೆ ತೆಗೆದು ಮುಂದಿನ ಕ್ರಮ ಕೈಗೊಳ್ಳುವ ಮುಂಚೆಯೇ ಸತತವಾಗಿ ಕರ್ತವ್ಯದಿಂದ ಗೈರು ಹಾಜರಾದ **ಶ್ರೀ ಶರಣ್. ಎಂ.ಆರ್., ಪ್ರಥಮ ದರ್ಜೆ ಸಹಾಯಕ, ಪ್ರಮುಅಸಂ (ಅಪಮು)ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು** ಇವರು **ಈ ಸೂಚನೆ ಪ್ರಕಟಣೆ** ದಿನಾಂಕದಿಂದ ಏಳು **(7) ದಿನಗಳೊಳಗಾಗಿ** ಲಿಖಿತ ಹೇಳಿಕೆ/ ಸಮಜಾಯಿಷಿಯೊಂದಿಗೆ ಈ ಕೆಳಸಹಿದಾರರ ಸಮಕ್ಷಮ ಕರ್ತವ್ಯಕ್ಕೆ **ಖುದ್ದು ಹಾಜರಾಗುವುದು**. ಇಲ್ಲವಾದಲ್ಲಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
ಸಹಿ/– ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಕರ್ನಾಟಕ
DIPR/CP/YC/2773/2024-25

ಆರ್ಥಿಕ ಇಲಾಖೆ,
ವಿಧಾನಸೌಧ, ಬೆಂಗಳೂರು
ಸಂಖ್ಯೆ: ಆಇ 03 ಬಿಎಂಬಿ 2024 ದಿನಾಂಕ: 25.10.2024
ಪ್ರಕಟಣೆ
ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ. ಎಫ್.ಡಿ. 01 ಬಿಎಂಬಿ 2014, **ದಿನಾಂಕ: 21ನೇ ನವೆಂಬರ್ 2014** ನಿಬಂಧನೆಯ ಮೇರೆಗೆ ಹೊರಡಿಸಲಾದ **8.45% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (Karnataka SDL 2024)** ದಿನಾಂಕ: 25ನೇ ನವೆಂಬರ್ 2024 ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: **26ನೇ ನವೆಂಬರ್ 2024ರಂದು** ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **26ನೇ ನವೆಂಬರ್ 2024ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**
2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಎಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.
3. ಅದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **8.45% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (Karnataka SDL 2024)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು, ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.
‘‘ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ.’’
4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೇ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.
5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ, ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.
ಸಹಿ/–
(ಡಾ. ಪಿ.ಸಿ.ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ
ವಾಸಾಸಂಇ/ಉನಿ-ಸಿ.ಪಿ/2748/ಕೆಎಸ್‌ಎಂಸಿಎ/2024-25

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ಫೋನ್: 080–29776766 / 29776467
ಇ–ಮೇಲ್: bannerghattazoo@gmail.com
ಸಂಖ್ಯೆ: ಎ3/ಬಬಪಾ/ಇ–ಟೆಂಡರ್/ಲ್ಯಾಬ್ ಉಪಕರಣ/2024–25 ದಿನಾಂಕ: 22–10–2024
ಮರು ಇ–ಟೆಂಡರ್ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ಇಲ್ಲಿಗೆ **ಪಶುವೈದ್ಯಕೀಯ ಪ್ರಯೋಗಾಲಯ ಉಪಕರಣಗಳನ್ನು ಸರಬರಾಜು ಮಾಡಲು** ಹೆಸರಾಂತ ತಯಾರಕರು ಅಥವಾ ವಿತರಕರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಪ್ರಮಾಣ	ಸಲ್ಲಿಸಬೇಕಾದ ಇ.ಎಂ.ಡಿ ಹಣ (ರೂ.ಗಳಲ್ಲಿ)
1	ರಿಯಲ್–ಟೈಮ್ ಪಾಲಿಮರೇಸ್ ಚೈನ್ ರಿಯಾಕ್ಷನ್ (ಆರ್‌ಟಿ–ಪಿಸಿಆರ್)	1 ಘಟಕ	30,000.00
2	ಫ್ಲೋರೋಮೀಟರ್ / ಸ್ಪೆಕ್ಟ್ರೋಫೋಟೋಮೀಟರ್	1 ಘಟಕ	5,000.00

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಹಾಗೂ ಟೆಂಡರ್ ಫೀಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **06–11–2024 ರಂದು ಸಂಜೆ 4.00 ಗಂಟೆಯವರೆಗೆ.** ಟೆಂಡರ್‌ನ್ನು ದಿನಾಂಕ: **08–11–2024 ರಂದು ಬೆಳಿಗ್ಗೆ 11.30 ಗಂಟೆಗೆ ತೆರೆಯಲಾಗುವುದು.** ಸಹಿ/–
ವಾಸಾಸಂಇ/ವಾ.ಪ್ರ/2766/ಅಡ್ವಟೈರ್/2024–25 ಕಾರ್ಯನಿರ್ವಾಹಕ ನಿರ್ದೇಶಕರು

ನಗರಸಭಾ ಕಾರ್ಯಾಲಯ, ಹಿರಿಯೂರು–577598
ಫೋನ್ ನಂ. 08193–296220, ಸಹಾಯವಾಣಿ: 08193–260020,
E-mail:hiriyur.cmc@gmail.com Webist: hiriyurcity.gov.in
ನಂ. ನ.ಸ.ಹಿ.ಆ.ಶಾ/ಸಿಆರ್/36/2024–25 ದಿನಾಂಕ: 24.10.2024
ಟೆಂಡರ್ ಪ್ರಕಟಣೆ
ಹಿರಿಯೂರು ನಗರಸಭೆ ವ್ಯಾಪ್ತಿಯ ಬೀಡಾಡಿ ಬೀದಿ ನಾಯಿಗಳಿಗೆ ಎ.ಬಿ.ಸಿ ನಿಯಮಗಳನ್ವಯ ಸಂತಾನ ನಿಯಂತ್ರಣ ಶಸ್ತ್ರಚಿಕಿತ್ಸೆಯನ್ನು ನಡೆಸಲು ಟೆಂಡರನ್ನು ಕರ್ನಾಟಕ ಸ್ಟ್ಯಾಂಡರ್ ಡಾಕ್ಯುಮೆಂಟ್ ರನ್ವಯ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತ ನೊಂದಾಯಿತ ಏಜೆನ್ಸಿ/ಸಂಸ್ಥೆಯವರು ಟೆಂಡರ್ ಸಲ್ಲಿಸಬಹುದಾಗಿದ್ದು, ವಿವರಗಳಿಗೆ ವೆಬ್‌ಸೈಟ್ ವಿಳಾಸ www.hiriyurtown.gov.in ಸಂಪರ್ಕಿಸತಕ್ಕದ್ದು. ಟೆಂಡರ್ ವಿವರ ಈ ಕೆಳಗಿನಂತಿರುತ್ತದೆ.
ಟೆಂಡರ್ ವೇಳಾಪಟ್ಟಿ ಅಥವಾ ಇನ್ನಿತರೆ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು.
(1) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11/11/2024 ರ ಸಂಜೆ 5:30 ಗಂಟೆರೊಳಗಾಗಿ, (2) ಇ–ಟೆಂಡರ್‌ನ್ನು ದಿನಾಂಕ: 12/11/2024 ರ ಸಂಜೆ 5:30 ಗಂಟೆಗೆ ತೆರೆಯಲಾಗುವುದು.
ಕಾಮಗಾರಿ ಹೆಸರು ಮತ್ತು ಇಂಡೆಂಟ್ ನಂಬರ್:– Implementation of Animal Birth Control (ABC)/Anti Rabies Vaccination (ARV) Program for Stray Dogs (ಇಂಡೆಂಟ್ ಸಂಖ್ಯೆ: DMA/2023-24/SE1525-Call-5).
DIPR/CTA/KSMCA/ 332/2024-25 ಸಹಿ/– ಪೌರಾಯುಕ್ತರು, ನಗರಸಭೆ, ಹಿರಿಯೂರು.

ಕರ್ನಾಟಕ ಸರ್ಕಾರ Govt of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ–587103
OFFICE OF THE DEPUTY COMMISSIONER, BAGALKOTE-587103
Ph: 08354-235091 E-mail: dudc_bgk@yahoo.co.in, Itstaff dudc_bagalkotc@yahoo.co.in
ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4: 2024–25 ದಿನಾಂಕ: 25.10.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
E-Proceurement portal ಮುಖಾಂತರ
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ರಲ್ಲಿಯ ಹಾಗೂ ಇತರೆ ಕಾಮಗಾರಿಗಳಿಗೆ e-protal: https://kppp.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಇದ್ದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವದು, ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ.
ಇಂಡೆಂಟ ನಂ :
(1) DMA/2024-25/OW/WORK_INDENT598/CALL-2, (2) DMA/2024-25/EL/WORK_INDENT25282 **(3)** DMA/2024 25/OW/WORK_INDENT16213/CALL-2 **(4)** DMA/2024-25/OW/WORK_INDENT607/CALL-2 **(5)** DMA/2024-25/BD/ WORK_INDENT3008 **(6)** DMA/2024-25/BD/WORK_INDENT31217 **(7)** DMA/2024-25/BD/WORK_INDENT31222 **(8)** DMA/2024 25/OW/WORK_INDENT31520 **(9)** DMA/2024-25/SE3824 **(10)** DMA/2024-25/SE3818
ಸೂಚನೆಗಳು
(1) Pre-bid Meeting Date: 04.11.2024 at 1.30pm
(2) Last Date & Time for receipt of tenders 12.11.2024 at 04.30 pm.
(3) Opening of Technical bid is on Dtd: 14.11.2024 at 05.30 am
(4) Date & Time for Opening of Financial Bid Dtd: 21.11.2024 at 11.00 am.
(1) DMA/2024-25/OW/WORK_INDENT25243 (2) DMA/2024-25/OW/WORK_INDENT31344
ಸೂಚನೆಗಳು:
(1) Pre-bid Meeting Date: 11.11.2024 at 1.30pm
(2) Last Date & Time for receipt of tenders 28.11.2024 at 04.30 pm.
(3) Opening of Technical bid is on Dtd: 29.11.2024 at 05.30 am
(4) Date & Time for Opening of Financial Bid Dtd: 09.12.2024 at 11.00 am.
ವಾ.ಸಾ.ಇ/ಬಾಗಲಕೋಟೆ/ 307/ದೇಶಪಾಂಡೆಪಬ್ಲಿಸಿಟಿ/2024–25
ಸಹಿ/– ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ, ಬಾಗಲಕೋಟೆ.

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾನಗರಾಭಿವೃದ್ಧಿ ಕೋಶ)
ಕೊಠಡಿ ಸಂಖ್ಯೆ.123, ಜಿಲ್ಲಾಡಳಿತ ಭವನ, ಗದಗ–582101
ದೂ.ಸಂಖ್ಯೆ: 08372–231877 (ಪ್ಯಾ) ಇ–ಮೇಲ್: ka.gadag.dudc@gmail.com
ಸಂಖ್ಯೆ:ಜಿನಕೋ/ಅಭಿವೃದ್ಧಿ/ಅಮೃತ್ ನಗರೋತ್ಥಾನ ಹಂತ–4/ವಹಿ–25/2021–22 ದಿನಾಂಕ:25–10–2024
ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ಧತಿಯಲ್ಲಿ ಕೆ.ಡಬ್ಲ್ಯು–4 ಟೆಂಡರ್ ದಸ್ತಾವೇಜಿನಲ್ಲಿ ಗದಗ ಜಿಲ್ಲೆಯ ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ ಮುನ್ಸಿಪಾಲಿಟಿ ಹಂತ–4ರ ಯೋಜನೆಯಡಿ ಪ್ಯಾಕೇಜ್ ಪದ್ಧತಿಯಲ್ಲಿ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಟಿಪಿಪಿ ಅಧಿನಿಯಮ 1999 ನಿಯಮ 2000ರನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಬಿಡ್‌ದಾರರು / ತಯಾರಕರು ಟೆಂಡರ್ ವಿವರಗಳನ್ನು e-Procurement portal ರಲ್ಲಿ ಪಡೆದು, ಸಂಬಂದಿಸಿದ ಇ ಎಂ ಡಿ ಟೆಂಡರ್ ಫೀ ಗಳನ್ನು electronic ಪದ್ಧತಿಯಲ್ಲಿ ತುಂಬಿ ನಿಗಧಿ ಪಡಿಸಿದ ದಿನಾಂಕಗಳನ್ನು, ಟೆಂಡರ್ www.kppp.karnataka.gov.in. ಸಲ್ಲಿಸಬಹುದಾಗಿದೆ. ಮುಂಡರಗಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ಬಗೆಯ ಕಟ್ಟಡಗಳ ನಿರ್ಮಾಣ ಕಾಮಗಾರಿ DMA/2024-25/OW/WORK_INDENT17797 (ಟೆಂಡರ್‌ಗಿಟ್ಟ ಮೊತ್ತ ರೂ. 108.01 ಲಕ್ಷ) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: **11–11–2024 upto 17.30 hrs** ಟೆಂಡರ್ ತೆರೆಯುವ ದಿನಾಂಕ: (Technical Bids) **13–11–2024 at 11.00 hrs.**
ಸದರಿ ಟೆಂಡರ್‌ಗೆ ಸಂಬದಿಸಿದಂತೆ ದಿನಾಂಕ ಹಾಗೂ ಇತರೆ ಬದಾಲಾವಣೆಗಳಾದಲ್ಲಿ e-Procurement portal ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಗದಗ.
ವಾ.ಸಾ.ಇ/ಗದಗ/333/ದೇಶಪಾಂಡೆಪಬ್ಲಿಸಿಟಿ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಎಂಇಐ ಬಡಾವಣೆ, ಹೆಸರಘಟ್ಟ ಮುಖ್ಯರಸ್ತೆ, ಬಾಗಲಗುಂಟೆ, ಬೆಂಗಳೂರು – 560 073.
ಸಂ: ಬಿಬಿಎಂಪಿ/ಕಾಪಾಅ/ದಾವಿ/ಟೆಂಡ್/18/2024–25 ದಿನಾಂಕ:25.10.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ) (ಕೆಡಬ್ಲ್ಯೂ–1,2 &3)
ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
2024–25ನೇ ಸಾಲಿಗೆ ದಾಸರಹಳ್ಳಿ ವಿಭಾಗದ ವಿವಿಧ ಉಪ ವಿಭಾಗಗಳಲ್ಲಿ ಚರಂಡಿಗಳ ಹೂಳು ತೆಗೆಯುವುದು ಮತ್ತು ನಿರ್ವಹಣೆ, ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮತ್ತು ಇತರ ಸಿವಿಲ್ ಕಾಮಗಾರಿಗಳು.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಸಾಮಾನ್ಯ ಪ್ರವರ್ಗಕ್ಕೆ :				
1	ವಾರ್ಡ್ ಸಂಖ್ಯೆ 15 ಶೆಟ್ಟಿಹಳ್ಳಿ	19.48ರಿಂದ32.41	38,960ರಿಂದ64,820	04
2	ವಾರ್ಡ್ ಸಂಖ್ಯೆ 16, ಮಲ್ಲಸಂದ್ರ	16.94ರಿಂದ41.52	42,350ರಿಂದ83,040	03
3	ವಾರ್ಡ್ ಸಂಖ್ಯೆ 17, ಚಿಕ್ಕಸಂದ್ರ	16.93ರಿಂದ76.24	42,325ರಿಂದ1,52,480	02
4	ವಾರ್ಡ್ ಸಂಖ್ಯೆ 18, ಬಾಗಲಗುಂಟೆ	11.85ರಿಂದ33.25	29,625ರಿಂದ66,500	05
5	ವಾರ್ಡ್ ಸಂಖ್ಯೆ 19, ಟಿ–ದಾಸರಹಳ್ಳಿ	25.75ರಿಂದ2.49	51.500ರಿಂದ64,980	03
6	ವಾರ್ಡ್ ಸಂಖ್ಯೆ 22, ಪೀಣ್ಯ ಕೈ. ಪ್ರದೇಶ	8.42	21,050	01
7	ವಾರ್ಡ್ ಸಂಖ್ಯೆ 23, ರಾಜಗೋಪಾಲನಗರ	21.13ರಿಂದ54.20	50,000ರಿಂದ1,08,400	03
8	ವಾರ್ಡ್ ಸಂಖ್ಯೆ 24, ಹೆಗ್ಗನಹಳ್ಳಿ	8.36ರಿಂದ41.52	20,900ರಿಂದ83,040	04
9	ವಾರ್ಡ್ ಸಂಖ್ಯೆ 25, ಸುಂಕದಕಟ್ಟೆ	21.14	50,000	01
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ :				
10	ವಾರ್ಡ್ ಸಂಖ್ಯೆ 17, ಚಿಕ್ಕಸಂದ್ರ	8.45 & 29.65	10,562 & 29,650	02
11	ವಾರ್ಡ್ ಸಂಖ್ಯೆ 18, ಬಾಗಲಗುಂಟೆ	8.45	10,562	01
12	ವಾರ್ಡ್ ಸಂಖ್ಯೆ 19, ಟಿ–ದಾಸರಹಳ್ಳಿ	8.45ರಿಂದ38.58	10,562ರಿಂದ77,160	03
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ :				
13	ವಾರ್ಡ್ ಸಂಖ್ಯೆ 15 ಶೆಟ್ಟಿಹಳ್ಳಿ	4.22 & 16.94	5,275 & 25,000	02
14	ವಾರ್ಡ್ ಸಂಖ್ಯೆ 16, ಮಲ್ಲಸಂದ್ರ	4.22	5,275	01
15	ವಾರ್ಡ್ ಸಂಖ್ಯೆ 25, ಸುಂಕದಕಟ್ಟೆ	25.39	25,390	01
			ಒಟ್ಟು ಕಾಮಗಾರಿಗಳ ಸಂಖ್ಯೆ	36

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ದಿನಾಂಕ: **07.11.2024ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **20.11.2024 ರ ಸಂಜೆ 4.00 ಗಂಟೆಯವರೆಗೆ** 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.11.2024ರ ಸಂಜೆ 4.30 ಗಂಟೆಗೆ.** 3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **25.11.2024ರ ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ).** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **www.kppp.karnataka.gov.in**ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624
ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/08/2024–25 ದಿನಾಂಕ:18.10.2024
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ.2.15 ರಿಂದ 25.00 ಲಕ್ಷಗಳ ಅಂದಾಜು ಮೊತ್ತದ ಒಟ್ಟು 11 ಸಂಖ್ಯೆ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 11 ರವರೆಗಿನ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿ: 23.10.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿ: 04.11.2024 ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಬಿಡ್‌ನ್ನು ಕ್ರಮವಾಗಿ ದಿ: 05.11.2024 ರ ಸಂಜೆ 17.30 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821–2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.
ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.
ಸಹಿ/– ಅಧೀಕ್ಷಕ ಅಭಿಯಂತರರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/DDMYS-710/KSMCA-487/2024-25

ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001.
E-mail: us2.rr.rev.dept@gmail.com Ph: 080-22032034
ಸಂಖ್ಯೆ: ಕಂಇ/06/ಸಿಆರ್‌ಆರ್/2024 ದಿನಾಂಕ: 21.10.2024
ಇ–ಟೆಂಡರ್ ಪ್ರಕಟಣೆ
ರಾಜ್ಯ ಆಯುಕ್ತರು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಈ ಕಛೇರಿಗೆ ಹಾಗೂ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಮೇಲೆ ದಲಾಯತ್–04, ವಾಹನ ಚಾಲಕರು–01, ಡಾಟಾ ಎಂಟ್ರಿ ಆಪರೇಟರ್–02 ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಸಂಸ್ಥೆಯ ಮುಖಾಂತರ ಪಡೆಯಲು ಇ–ಟೆಂಡರನ್ನು e-Procurement Portal ಮುಖಾಂತರ ಸ್ಪರ್ಧಾತ್ಮಕ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಟೆಂಡರ್‌ನ್ನು ಆಸಕ್ತ ನೊಂದಾಯಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಆಹ್ವಾನಿಸಲಾಗಿರುತ್ತದೆ.
1. ಹೊರಗುತ್ತಿಗೆ ಸೇವಾ ಅವಧಿ: ಗುತ್ತಿಗೆ ಅವಧಿಯು ಆದೇಶ ಹೊರಡಿಸಿದ ದಿನಾಂಕದಿಂದ ಒಂದು (01) ವರ್ಷದ ಅವಧಿಗೆ ಮಾತ್ರ ಜಾರಿಯಲ್ಲಿರುತ್ತದೆ ಮತ್ತು ಅವಶ್ಯಕತೆ ಇದ್ದಲ್ಲಿ ಮತ್ತೆ ಮುಂದುವರೆಸುವುದಕ್ಕೆ ಒಳಪಟ್ಟಿರುತ್ತದೆ.
2. ಅರ್ಜಿ ನಮೂನೆ ಶುಲ್ಕ: https://KPPP.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಬೇಕು.
3. ಇ.ಎಂ.ಡಿ.: ರೂ. 1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಸದರಿ ಮೊತ್ತವನ್ನು https://KPPP.karnataka.gov.in ನಲ್ಲಿ ಇ.ಎಂ.ಡಿ. ಜಮೆಗೆ ಕ್ರಮವಹಿಸುವುದು.
4. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಪಡೆಯಬಹುದಾದ ದಿನಾಂಕ: 22.10.2024 ರಿಂದ 29.10.2024 ರವರೆಗೆ.
5. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್ ಮೆಂಟ್ ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಮತ್ತು ವೇಳೆ: 29.10.2024 ರಂದು ಸಂಜೆ 4.00 ಗಂಟೆಯೊಳಗೆ.
6. ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ತಾಂತ್ರಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ಕಡೆಯ ದಿನಾಂಕ ಮತ್ತು ವೇಳೆ: 30.10.2024 ರಂದು ಅಪರಾಹ್ನ 4.01 ಗಂಟೆಗೆ.
7. ಇ–ಸಂಗ್ರಹಣೆ ವೆಬ್‌ಸೈಟ್‌ನಿಂದ ಆರ್ಥಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ಕಡೆಯ ದಿನಾಂಕ ಮತ್ತು ವೇಳೆ: 12.11.2024 ರಂದು ಅಪರಾಹ್ನ 12.00 ಗಂಟೆಗೆ.
ಆಸಕ್ತ ಸಂಸ್ಥೆಯವರು ಇ–ಟೆಂಡರ್ ವಿವರಗಳನ್ನು https://KPPP.karnataka.gov.in ನಲ್ಲಿ ಪಡೆಯಬಹುದು ಹಾಗೂ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತವನ್ನು https://KPPP.karnataka.gov.in ನಲ್ಲಿ ನಿರ್ದೇಶಿಸಿದಂತೆ ಪಾವತಿಸಿ, ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಿ ಈ ಕೆಳಗೆ ಸಹಿ ಮಾಡಿರುವ ಸಹಿದಾರರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.
ಸಹಿ/–
ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಪುನರ್ವಸತಿ ಮತ್ತು ಪುನರ್ ನಿರ್ಮಾಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು
ವಾಸಸಂಇ/ಸಿಪಿ/ಎಎಎ/2752/2024–25

ಉಡುಪಿಯಲ್ಲಿ ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ

‘ಭಾಷಾ ಕಲಿಕೆ ಆ್ಯಪ್‌ಗಳಿಂದ ಅಸ್ಮಿತೆಗೆ ಧಕ್ಕೆ’

ಪ್ರಜಾವಾಣಿ ವಾರ್ತೆ



‘ಭಾರತೀಯ ಭಾಷೆಗಳು: ಅಪ್ಲಿಕೇಷನ್ ಮತ್ತು ಅವಕಾಶಗಳು’ ಎಂಬ ಗೋಷ್ಠಿಯಲ್ಲಿ ನಾಗರಾಜ ಪಾತುರಿ ಮಾತನಾಡಿದರು. ಸುಂದರೇಶ್ವರನ್, ಚ.ಮು.ಕೃಷ್ಣ ಶಾಸ್ತ್ರಿ, ವಿಜಯಕುಮಾರ್ ಸಿ.ಜಿ ಹಾಗೂ ವಸಂತ್ ಕುಮಾರ್ ಭಟ್ ಭಾಗವಹಿಸಿದ್ದರು

ಉಡುಪಿ: ‘ಕೃತಕ ಬುದ್ಧಿಮತ್ತೆ (ಎಐ) ಮೂಲಕ ಕಾರ್ಯನಿರ್ವಹಿಸುವ ತಂತ್ರಜ್ಞಾನವೂ ಸೇರಿದಂತೆ ಭಾಷೆ ಕಲಿಸುವ ಆ್ಯಪ್‌ಗಳ ಮೂಲಕ ಭಾರತದ ಅಸ್ಮಿತೆಗೆ ಧಕ್ಕೆ ಉಂಟುಮಾಡುವ ಕುತಂತ್ರ ನಡೆಯುತ್ತಿದೆ’ ಎಂದು ಹೈದರಾಬಾದ್‌ನ ಇಂಡಿಕಾ ಅಕಾಡೆಮಿ ನಿರ್ದೇಶಕ ನಾಗರಾಜ ಪಾತುರಿ ಹೇಳಿದರು.

ಬೆಂಗಳೂರಿನ ಭಾರತೀಯ ವಿದ್ವತ್ ಪರಿಷತ್ (ಬಿವಿಪಿ), ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ (ಸಿಎಸ್‌ಯು) ಹಾಗೂ ಉಡುಪಿಯ ಪರ್ಯಾಯ ಪುತ್ತಿಗೆ ಮಠದ ಆಶ್ರಯದಲ್ಲಿ ಕೃಷ್ಣ ಮಠದ ರಾಜಾಂಗಣದಲ್ಲಿ ಆಯೋಜಿಸಿರುವ ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ(ಎಐಒಸಿ)ದಲ್ಲಿ ಶುಕ್ರವಾರ ನಡೆದ 'ಭಾರತೀಯ ಭಾಷೆಗಳು: ಅಪ್ಲಿಕೇಷನ್ ಮತ್ತು ಅವಕಾಶಗಳು' ಎಂಬ ವಿಷಯದ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಭಾಷೆಗೆ ಸಂಬಂಧಿಸಿ ಅವಕಾಶಗಳ ಹೆಸರಿನಲ್ಲಿ ನಮ್ಮ ಸಂಸ್ಕೃತಿಯನ್ನು ಕೆಡಿಸುವ ಜಾಲ ಕೆಲಸ ಮಾಡುತ್ತಿದೆ. ಎಐಯಲ್ಲಿ ಹಿಂದೂಗಳ ಬಗ್ಗೆ ಹಾಸ್ಯಾಸ್ಪದ ಕಂಟೆಂಟ್ ಸಿದ್ಧಪಡಿಸಲು ಹೇಳಿದರೆ ತಕ್ಷಣ ಸ್ಪಂದನೆ ಸಿಗುವಂತೆ ಮಾಡಲಾಗಿದೆ. ಮುಸ್ಲಿಂ ಅಥವಾ ಕ್ರೈಸ್ತರ ಬಗ್ಗೆ ಕೇಳಿದರೆ ಅದು ಕಾನೂನಾತ್ಮಕವಾಗಿ ತಪ್ಪು ಎಂಬ ಸಂದೇಶ ಬರುತ್ತದೆ. ಇಂಥ ಕುತಂತ್ರಗಳ ಬಗ್ಗೆ ಜಾಗರೂಕರಾಗಿರಬೇಕು’ ಎಂದು ಅವರು ಹೇಳಿದರು.

‘ತಂತ್ರಜ್ಞಾನದ ಹೆಸರಿನಲ್ಲಿ ಅನೇಕ ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ. ವಿದೇಶಗಳಲ್ಲಿ ಉದ್ಯೋಗದ ಆಸೆ ಮೂಡಿಸಲಾಗುತ್ತದೆ. ಇದು ಒಂದು ಬಗೆಯ ಕುತಂತ್ರ. ಅವಕಾಶಗಳೆಂಬ ಆಸೆ ತೋರಿಸಿ ನಮ್ಮಿಂದಲೇ ನಮ್ಮತನಕ್ಕೆ ಅಪಾಯ ಉಂಟುಮಾಡುವ ಹುನ್ನಾರ. ವಾಸ್ತವದಲ್ಲಿ, ನಮ್ಮ ಭಾಷೆಗಳನ್ನು ಅಧ್ಯಯನ ಮಾಡಲು ಮತ್ತು ಅವುಗಳಿಗೆ ಸಂಬಂಧಿಸಿದ ಅಪ್ಲಿಕೇಷನ್ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಭಾರತೀಯ ಭಾಷಾ ಸಮಿತಿ ಇದೆ. ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು’ ಎಂದು ಅವರು ಸಲಹೆ ನೀಡಿದರು.

ನವದೆಹಲಿಯ ಭಾರತೀಯ ಭಾಷಾ ಸಮಿತಿಯ ಅಧ್ಯಕ್ಷ ಚ.ಮು.ಕೃಷ್ಣ ಶಾಸ್ತ್ರಿ, ಉಜ್ಜೈನಿಯ ಮಹರ್ಷಿ ಪಾಣಿನಿ ವಿಶ್ವವಿದ್ಯಾಲಯದ ಕುಲಪತಿ ವಿಜಯಕುಮಾರ್ ಸಿ.ಜಿ, ಕ್ಯಾಲಿಕಟ್ ವಿವಿ ನಿವೃತ್ತ ಪ್ರಾಧ್ಯಾಪಕ ಸುಂದರೇಶ್ವರನ್ ಹಾಗೂ ಗುಜರಾತ್‌ನ ನಿವೃತ್ತ ಪ್ರಾಧ್ಯಾಪಕ ವಸಂತ್ ಕುಮಾರ್ ಭಟ್ ಇದ್ದರು.

ಅಂಜಲಿ ಕುಟುಂಬಕ್ಕೆ ₹5 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೆಲ ತಿಂಗಳ ಹಿಂದೆ ವೀರಾಪುರ ಓಣಿಯ ಮನೆಯಲ್ಲಿ ಕೊಲೆಯಾದ ಯುವತಿ ಅಂಜಲಿ ಅಂಬಿಗೇರ ಅವರ ಕುಟುಂಬಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹5ಲಕ್ಷ ಪರಿಹಾರದ ಚೆಕ್ ಅನ್ನು ಇಲ್ಲಿನ ವಿಮಾನ ನಿಲ್ದಾಣದಲ್ಲಿ ವಿತರಿಸಿದರು.

ಅಂಬಿಗೇರ ಸಮಾಜದ ಮುಖಂಡ ಮನೋಜ ಕರ್ಜಗಿ ಮಾತನಾಡಿ, ‘ಅಂಜಲಿ ಕುಟುಂಬಕ್ಕೆ ಪರಿಹಾರ ಕೊಡಿಸುವಲ್ಲಿ ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ದೊಡ್ಡದು. ₹25 ಲಕ್ಷ ಪರಿಹಾರಕ್ಕೆ ಒತ್ತಾಯಿಸಲಾಗಿತ್ತು. ಸದ್ಯ ಸಿಎಂ ಪರಿಹಾರ ನಿಧಿಯಿಂದ ₹5 ಲಕ್ಷ ಕೊಟ್ಟಿದ್ದಾರೆ. ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ, ಮನೆ ನೀಡಲು ವಿನಂತಿಸಿದ್ದೇವೆ. ಶಾಸಕ ಪ್ರಸಾದ ಅಬ್ಬಯ್ಯ ಅವರು ಸೋನಿಯಾ ಗಾಂಧಿ ನಗರದಲ್ಲಿ ಮನೆ ನೀಡುವುದಾಗಿ ಹೇಳಿದ್ದಾರೆ’ ಎಂದರು.

ಮಂತ್ರಾಲಯ ಮಠಕ್ಕೆ ₹ 3.38 ಕೋಟಿ ಕಾಣಿಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಹುಂಡಿ ತೆರೆದು ಎಣಿಕೆ ಮಾಡಲಾಗಿದ್ದು, ಅಕ್ಟೋಬರ್‌ನಲ್ಲಿ ₹3.38 ಕೋಟಿ ಕಾಣಿಕೆ ಬಂದಿದೆ.

₹3,30,57,440 ನಗದು, ₹7,44,960 ಮೊತ್ತದ ನಾಣ್ಯಗಳು ಸೇರಿ ಒಟ್ಟು ₹3,38,02,400 ನಗದು, 136ಗ್ರಾಂ ಚಿನ್ನ ಹಾಗೂ 1,180 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ನಡುರಾತ್ರಿ ಬಂದ ಮೆಸೇಜ್: ಯುವತಿ ಆತ್ಮಹತ್ಯೆಗೆ ಯತ್ನ

ಸುರತ್ಕಲ್ (ದಕ್ಷಿಣ ಕನ್ನಡ): ಇಲ್ಲಿನ ಇಡ್ಯಾ ಗ್ರಾಮದ 21 ವರ್ಷದ ಯುವತಿಯೊಬ್ಬರು ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಸಂಬಂಧ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಯುವತಿಯ ಅಣ್ಣ ಕಿಶನ್‌ಗೆ ಫೇಸ್‌ಬುಕ್ ಮೆಸೆಂಜರ್‌ನಲ್ಲಿ ‘ನಿನ್ನ ತಂಗಿಯನ್ನು ಬಿಡುವುದಿಲ್ಲ’ ಎಂಬ ಸಂದೇಶ ಅ.22ರ ರಾತ್ರಿ 1 ಗಂಟೆ ಸುಮಾರಿಗೆ ಬಂದಿದೆ. ಈ ವಿಷಯವನ್ನು ತಿಳಿದ ಯುವತಿ, ‘ನಾನು ಸತ್ತರೆ ನನ್ನ ಸಾವಿಗೆ ಶಾರೀಕ್ ಮತ್ತು ನೂರ್‌ಜಹಾನ್ ಕಾರಣ’ ಎಂದು ಡೆತ್‌ನೋಟ್ ಬರೆದಿಟ್ಟು ಮಾತ್ರೆಗಳನ್ನು ಸೇವಿಸಿದ್ದಾರೆ. ಪ್ರಸ್ತುತ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆರೋಗ್ಯ ಸ್ಥಿರವಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ಸಂಬಂಧ ತನಿಖೆ ಮುಂದುವರಿದಿದೆ ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

‘ಯುವತಿ ಡೆತ್‌ನೋಟ್‌ನಲ್ಲಿ ಹೆಸರು ಉಲ್ಲೇಖಿಸಿರುವ ವ್ಯಕ್ತಿಗಳು ಆಕೆಗೆ ನಿರಂತರ ಬೆದರಿಕೆ ಒಡ್ಡುತ್ತಿದ್ದರು. ಈ ಕುರಿತು ಆಕೆಯ ಕುಟುಂಬಸ್ಥರು ಠಾಣೆಗೆ ದೂರು ಸಹ ನೀಡಿದ್ದರು’ ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.

‘ಅನ್ಯಕೋಮಿನ ಯುವಕ ಅಶ್ಲೀಲ ಮೆಸೇಜ್ ಕಳುಹಿಸಿ, ಕಿರುಕುಳ ನೀಡಿರುವ ಪರಿಣಾಮ ಯುವತಿ ಆತ್ಮಹತ್ಯೆಗೆ ಯತ್ನಿಸಿದ್ದು, ಘಟನೆಯಲ್ಲಿ ಪೊಲೀಸರ ವೈಫಲ್ಯ ಕಾಣುತ್ತಿದೆ. ‘ತನ್ನೊಂದಿಗೆ ಬರದಿದ್ದರೆ 24 ತುಂಡು ಮಾಡಿ ಬಿಸಾಡುವೆ’ ಎಂದು ಫೇಸ್‌ಬುಕ್ ಮೆಸೆಂಜರ್ ಮೂಲಕ ಯುವಕ ಬೆದರಿಕೆ ಹಾಕಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಸ್ಥಳೀಯ ಶಾಸಕ ಡಾ. ವೈ. ಭರತ್ ಶೆಟ್ಟಿ ಒತ್ತಾಯಿಸಿದ್ದಾರೆ.

Infosys®
Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

ಅಂಚೆ ಮತದಾನ/ಇ–ವೋಟಿಂಗ್ ಪ್ರಕಟಣೆ

ಸದಸ್ಯರಿಗೆ ಈ ಮೂಲಕ ತಿಳಿಸುವುದೇನಂದರೆ, ಕಂಪನಿಗಳ ಕಾಯ್ದೆ, 2013ರ (**“ಕಾಯ್ದೆ”**) ಸೆಕ್ಷನ್ 108 ಮತ್ತು 110 ಹಾಗೂ ತಿದ್ದುಪಡಿಗೊಂಡಿರುವ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014 (**“ಮ್ಯಾನೇಜ್‌ಮೆಂಟ್ ರೂಲ್ಸ್”**) ರೊಂದಿಗೆ ಓದಿಕೊಂಡಂತೆ ಪ್ರದತ್ತ ನಿಯಮಗಳನ್ವಯ, ಕಾರ್ಪೊರೇಟ್ ಸಚಿವಾಲಯ, ಭಾರತ ಸರ್ಕಾರ ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸ. 09/2024 ದಿನಾಂಕ ಸೆಪ್ಟೆಂಬರ್ 19, 2024 ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ ("ಸೆಬಿ") ಹೊರಡಿಸಿದ ದಿನಾಂಕ ಅಕ್ಟೋಬರ್ 3, 2024ರ ಸಂಖ್ಯೆ SEBI/HO/CFD/CFD-PoD-2/P/CIR/2024/133ಯ ಸುತ್ತೋಲೆ ("ಇನ್ನು ಮುಂದೆ ಒಟ್ಟಾರೆಯಾಗಿ ಸುತ್ತೋಲೆಗಳು"), ಭಾರತದ ಕಂಪನಿ ಕಾರ್ಯದರ್ಶಿಗಳ (ಸೆಕ್ರೆಟೇರಿಯಲ್ ಸ್ಟಾಂಡರ್ಡ್ಸ್) "**ಎಸ್‌ಎಸ್–2**", ಸೆಬಿಯ ರೇಗುಲೇಷನ್ 44 ಮತ್ತು ತಿದ್ದುಪಡಿಯಾದ (ಲಿಸ್ಟಿಂಗ್ ಆಬ್ಲಿಗೇಷನ್ ಅಂಡ್ ಡಿಸ್ಕ್ಲೋಶರ್ ರಿಕ್ವೈರ್‌ಮೆಂಟ್ಸ್), ರೇಗುಲೇಷನ್‌ಗಳು, 2015 ("**ಎಲ್‌ಒಡಿಆರ್ ರೇಗುಲೇಷನ್**") ಮತ್ತು ಅನ್ವಯವಾಗುವ ಇತರ ಯಾವುದೇ ಕಾನೂನುಗಳು, ನಿಯಮಗಳು, ಸುತ್ತೋಲೆಗಳು, (ಮಾರ್ಪಾಡಾಗಿರುವ ಅಥವಾ ಮರುಜಾರಿಗೊಳಿಸಲಾದ ಸೂಚನೆ ಹಾಗೂ ನಿಯಮಗಳನ್ನು, ಈ ಕಾಲಘಟ್ಟದಲ್ಲಿ ಚಾಲ್ತಿಯಲ್ಲಿರುವ) ಈ ಎಲ್ಲದರನ್ವಯ ಈ ಕೆಳಗೆ ತಿಳಿಸಲಾದಂತೆ ಮತ್ತು ದಿನಾಂಕ ಅಕ್ಟೋಬರ್ 17, 2024ರ ಅಂಚೆ ಮತ ಸೂಚನಾಪತ್ರದಲ್ಲಿದ್ದಂತೆ ವ್ಯವಹಾರಗಳನ್ನು ನಡೆಸಲು ಹೇಳಲಾದ ಠರಾವುಗಳಗೆ ಕಂಪನಿಯ ಸದಸ್ಯರುಗಳ ಅನುಮೋದನೆಯನ್ನು ಅಂಚೆ ಮತ, ಇ–ವೋಟಿಂಗ್ ಪ್ರಕ್ರಿಯೆ ಮೂಲಕ ಮಾತ್ರವಾಗಿರುತ್ತದೆ:

ವಿಷಯ ಸಂಖ್ಯೆ	ಠರಾವಿನ ವಿವರಣೆ
1	ಇನ್ಫೋಸಿಸ್ ಲಿಮಿಟೆಡ್ ಹಾಗೂ ಸ್ಟೇಟರ್ N.V ಅಂಗಸಂಸ್ಥೆಗಳ ನಡುವಿನ ಮೆಟೀರಿಯಲ್ ರಿಲೇಟೆಡ್ ಪಾರ್ಟಿ ವಹಿವಾಟುಗಳು.
2	ಇನ್ಫೋಸಿಸ್ ಲಿಮಿಟೆಡ್ ಹಾಗೂ ಸ್ಟೇಟರ್ ನೆದರ್‌ಲ್ಯಾಂಡ್ B.V ಅಂಗಸಂಸ್ಥೆಗಳ ನಡುವಿನ ಮೆಟೀರಿಯಲ್ ರಿಲೇಟೆಡ್ ಪಾರ್ಟಿ ವಹಿವಾಟುಗಳು.

ಸುತ್ತೋಲೆಗಳ ಪ್ರಕಾರ, ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಜೊತೆಗೆ ತಮ್ಮ ಇ–ಮೇಲ್ ವಿಳಾಸಗಳನ್ನು ಬುಧವಾರ, ಅಕ್ಟೋಬರ್ 23, 2024 ರಂದು (**“ಕಟ್–ಆಫ್ ದಿನಾಂಕ”**) ನೋಂದಣಿ ಮಾಡಿಕೊಂಡಿರುವ ಎಲ್ಲಾ ಸದಸ್ಯರಿಗೆ, ಶುಕ್ರವಾರ, ಅಕ್ಟೋಬರ್ 25, 2024 ರಂದು ಕಂಪನಿಯು ಅಂಚೆ ಮತದಾನ ಪ್ರಕಟಣೆಯ ಜೊತೆಗೆ ವಿವರಣಾತ್ಮಕ ವರದಿಯನ್ನು ರವಾನಿಸಿರುತ್ತದೆ.

ಎಡಿಆರ್ ಡೆಪಾಸಿಟರಿ ಆಗಿರುವ, ಅಮೇರಿಕದ ಡಚ್ ಬ್ಯಾಂಕ್ ಟ್ರಸ್ಟ್ ಕಂಪನಿಗೆ ಕೂಡ ಅಂಚೆ ಮತದಾನ ಪ್ರಕಟಣೆಯನ್ನು ಒದಗಿಸಲಾಗಿದ್ದು, ಅವರು ಇದನ್ನು (1) ಕಂಪನಿಯ ಇಕ್ವಿಟಿ ಷೇರುಗಳ ಅಡಿಯಲ್ಲಿನ ಅಮೆರಿಕನ್ ಡೆಪಾಸಿಟರಿ ಷೇರುಗಳನ್ನು (**“ಎಡಿಎಸ್”**) ಸಾಬೀತುಪಡಿಸಬಲ್ಲ ಅಮೆರಿಕನ್ ಡೆಪಾಸಿಟರಿ ರಸೀದಿಗಳನ್ನು ಹೊಂದಿರುವ ನೋಂದಾಯಿತ ಹಿಡುವಳಿದಾರರಿಗೆ; ಮತ್ತು (2) ದಿ ಡೆಪಾಸಿಟರಿ ಟ್ರಸ್ಟ್ ಕಂಪನಿ (**“ಡಿಟಿಸಿ”**) ಮೇಲಿಂಗ್ ಏಜೆಂಟ್, ನಂತರದಲ್ಲಿ ಅವರ ಮತದಾನ ಸೂಚನಾ ನಮೂನೆಗಳನ್ನು ಮೇಲ್ ಮಾಡುವ ಇವರು, ಡಿಟಿಸಿ’ಯಲ್ಲಿ ಬ್ಯಾಂಕ್, ಬ್ರೋಕರ್ ಅಥವಾ ಇನ್ನಿತರ ನಾಮಿನಿಗಳ ಹಾಗೂ ಫಲಾನುಭವಿ ಎಡಿಎಸ್ ಹಿಡುವಳಿದಾರರಿಗೆ ಅಂಚೆ ಮತದಾನದ ಪ್ರಕಟಣೆಯ ಸಮೇತ ಮೇಲ್ ರವಾನಿಸುತ್ತಾರೆ.

ಸದರಿ ನೋಟಿಸ್ ಕಂಪನಿಯ www.infosys.com ಜಾಲತಾಣದಲ್ಲಿ ಲಭ್ಯವಿರುತ್ತದೆ, ಇದಕ್ಕೆ ಸಂಬಂಧಿತ ಬಿಎಸ್‌ಇ ಲಿಮಿಟೆಡ್ (**“ಬಿಎಸ್‌ಇ”**) ಜಾಲತಾಣ: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್‌ನ (**“ಎನ್‌ಎಸ್‌ಇ”**) www.nseindia.com ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ (**“ಎನ್‌ಎಸ್‌ಡಿಎಲ್”**) www.evoting.nsdl.com ಜಾಲತಾಣದಲ್ಲಿ ಕೂಡ ಲಭ್ಯವಿರುತ್ತದೆ.

ಸುತ್ತೋಲೆಗಳ ನಿಯಮಗಳ ಪ್ರಕಾರ, ಸದಸ್ಯರು ಇ–ವೋಟಿಂಗ್ ವಿಧಾನದಲ್ಲಿ ಮಾತ್ರ ಮತ ಚಲಾಯಿಸಬಹುದು. ಸದಸ್ಯರ ಮತದಾನದ ಹಕ್ಕುಗಳನ್ನು, ಕಟ್–ಆಫ್ ದಿನಾಂಕದಂದು ಅವರು ಹೊಂದಿರುವ ಕಂಪನಿಯ ಇಕ್ವಿಟಿ ಷೇರುಗಳ ಆಧಾರದ ಮೇರೆಗೆ ನಿರ್ಧರಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಕಂಪನಿಯ ಷೇರುದಾರರಾಗಿಲ್ಲದವರ ಯಾವುದೇ ವ್ಯಕ್ತಿಯು ಸದರಿ ಅಂಚೆ ಮತದಾನ ಪ್ರಕಟಣೆಯನ್ನು ಕೇವಲ ತಮ್ಮ ಮಾಹಿತಿಗಾಗಿ ಎಂದು ಮಾತ್ರ ಭಾವಿಸತಕ್ಕದ್ದು.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ, **ಎನ್‌ಎಸ್‌ಡಿಎಲ್** ಇ–ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯ ಪ್ರಕಾರ ಲಭ್ಯವಿರುತ್ತದೆ:

ಇ–ವೋಟಿಂಗ್ ಅವಧಿಯ ಆರಂಭ	ಬೆಳಗ್ಗೆ 9.00 IST ಸೋಮವಾರ, ಅಕ್ಟೋಬರ್ 28, 2024 ರಂದು
ಇ–ವೋಟಿಂಗ್ ಅವಧಿಯ ಮುಕ್ತಾಯ	ಸಂಜೆ 5.00 IST ಮಂಗಳವಾರ, ನವೆಂಬರ್ 26, 2024 ರಂದು
ಮತದಾನದ ಅರ್ಹತೆಗೆ ಕಟ್–ಆಫ್ ದಿನಾಂಕ	ಬುಧವಾರ, ಅಕ್ಟೋಬರ್ 23, 2024

ನಂತರ ಸಂಜೆ 5.00 ಕ್ಕೆ IST ಮಂಗಳವಾರ, ನವೆಂಬರ್ 26, 2024 ರಂದು ಇ–ವೋಟಿಂಗ್ ಪ್ರಕ್ರಿಯೆ ಮುಕ್ತಾಯಗೂಳಿಸಲಾಗುತ್ತದೆ.

ಇದುವರೆಗೆ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಎಲೆಕ್ಟ್ರಾನಿಕ್ ವಿಧಾನದ ಷೇರುಗಳನ್ನು ಹೊಂದಿದ್ದಲ್ಲಿ ತಮ್ಮ ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಮುಖಾಂತರ ತಮ್ಮ ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳತಕ್ಕದ್ದು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು einward.ris@kfintechcom ವಿಳಾಸಕ್ಕೆ ಮೇಲ್ ಬರೆಯುವ ಮೂಲಕವಾಗಲಿ ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಂ ಟವರ್ ಬಿ, ಪ್ಲಾಟ್ 31 & 32, ಫೈನಾನ್ಷಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500032 ವಿಳಾಸಕ್ಕೆ ಲಿಖಿತ ಮನವಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು.

ಅಂಚೆ ಮತದಾನ/ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವುದಕ್ಕಾಗಿ, ಕಂಪನಿಯ ಮಂಡಳಿಯು ಹೇಮಂತ್, ಹೊಳ್ಳ & ಕೋ., (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 6374)(ಸಿಪಿ ಸಂಖ್ಯೆ 6519) ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ, ಅವರನ್ನು ಪರಿಶೀಲಕರನ್ನಾಗಿ ನೇಮಿಸಲಾಗಿದೆ.

ಯಾವುದೇ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ, www.evoting.nsdl.com ಜಾಲತಾಣದಲ್ಲಿನ ಡೌನ್‌ಲೋಡ್ ಸೆಕ್ಷನ್‌ನಲ್ಲಿ Frequently Asked Questions (FAQs) ಅಡಿಯಲ್ಲಿ ಲಭ್ಯವಿರುವ ಷೇರುದಾರರ ಮತ್ತು ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಪರಿಶೀಲಿಸಬಹುದು ಅಥವಾ 022–4886 7000 ಸಂಖ್ಯೆಗೆ ಸಂಪರ್ಕಿಸಬಹುದು ಅಥವಾ evoting@nsdl.com ವಿಳಾಸಕ್ಕೆ ಮನವಿ ಸಲ್ಲಿಸಬಹುದು.

ಇ–ವೋಟಿಂಗ್ ಪರಿಶೀಲನೆಯ ನಂತರ, ಪರಿಶೀಲಕರು ತಮ್ಮ ವರದಿಯನ್ನು ಕಂಪನಿಯ ಚೇರ್ಮನ್ ಅಥವಾ ಚೇರ್ಮನ್ನರ ಇನ್ನಿತರ ಯಾವುದೇ ಅಧಿಕೃತ ವ್ಯಕ್ತಿಗೆ ಸಲ್ಲಿಸುತ್ತಾರೆ, ಮತ್ತು ಅಂಚೆ ಮತದಾನದ ಮೂಲಕ ನಡೆದ ಮತದಾನ ಫಲಿತಾಂಶವನ್ನು ಇ–ಮತದಾನದ ಮುಕ್ತಾಯದಿಂದ 48 ಗಂಟೆಗಳ ಒಳಗೆ ಪ್ರಕಟಿಸಲಾಗುತ್ತದೆ. ಅಂದರೆ ಸಂಜೆ 5.00 IST ಗುರುವಾರ, ನವೆಂಬರ್ 28, 2024 ಹಾಗೂ ಕಂಪನಿಯ ಜಾಲತಾಣದಲ್ಲಿ (https://www.infosys.com/investors/shareholder-services/postal-ballot.html) ಮತ್ತು ಎನ್‌ಎಸ್‌ಡಿಎಲ್’ ರವರ (https://www.evoting.nsdl.com) ಜಾಲತಾಣದಲ್ಲಿ ಕೂಡ ಪ್ರಕಟಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜಸ್, ಡೆಪಾಸಿಟರಿ, ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ರ ಜಾಲತಾಣದಲ್ಲಿ ಕೂಡ ಫಲಿತಾಂಶವನ್ನು ತಿಳಿಸಲಾಗುತ್ತದೆ.

ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ ಅಥವಾ ದೂರುಗಳಿದ್ದಲ್ಲಿ, ಷೇರುದಾರರು ಶೋಭಾ ಆನಂದ್, ವೈಸ್ ಪ್ರೆಸಿಡೆಂಟ್, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಂ ಟವರ್ ಬಿ, ಪ್ಲಾಟ್ 31 & 32, ಫೈನಾನ್ಷಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500032 ಇವರನ್ನು ಫೋನ್ ನಂ.: 1800–309–4001 ಸಂಖ್ಯೆಯಲ್ಲಿ ಸಂಪರ್ಕಿಸಬಹುದು. ಇ–ಮೇಲ್ ಐಡಿ: shobha.anand@kfintech.com; einward.ris@kfintech.com; ಮೇಲ್ಕಂಡ ದೂರವಾಣಿ ಸಂಖ್ಯೆ ಅಲ್ಲದೆ, ಷೇರುದಾರರು ಅಮಿತ್ ವಿಶಾಲ್, ಡೆಪ್ಯೂಟಿ ವೈಸ್ ಪ್ರೆಸಿಡೆಂಟ್ ಅಥವಾ ಪಲ್ಲವಿ ಮ್ಹಾತ್ರೆ, ಸೀನಿಯರ್ ಮ್ಯಾನೇಜರ್, ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್, 4ನೇ ಮಹಡಿ, ಎ ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪಟ್ ಮಾರ್ಗ, ಲೋವರ್ ಪರೇಲ್, ಮುಂಬೈ – 400013, ಭಾರತ ಇವರನ್ನು ಕೂಡ ಸಂಪರ್ಕಿಸಬಹುದು. ಸಂಪರ್ಕಿಸುವ ವಿವರ: evoting@nsdl.com ದೂರವಾಣಿ ಸಂಖ್ಯೆ – 022–4886 7000.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್.ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎಸಿಎಸ್ 21918

ಅಕ್ಟೋಬರ್ 25, 2024
ಬೆಂಗಳೂರು, ಭಾರತ





ಕೇವಲ ₹199* ಕ್ಕೆ
ಸೌಂಡ್‌ಬಾರ್ (16W) — ₹2999 ಶಾಪಿಂಗ್ ಮೇಲೆ — MRP ~~₹2800~~
ಅಥವಾ
ವೀಲ್‌ಗಳು ಇರುವ ಡಫಲ್ ಬ್ಯಾಗ್ (20" INCH) — ₹2999 ಶಾಪಿಂಗ್ ಮೇಲೆ — MRP ~~₹2800~~

ಕೇವಲ ₹399* ಕ್ಕೆ
2 ಜಾರ್‌ಗಳೊಂದಿಗೆ ಮಿಕ್ಸರ್ ಗ್ರೈಂಡರ್ (500W) — ₹5999 ಶಾಪಿಂಗ್ ಮೇಲೆ — MRP ~~₹3600~~

Scan & get ₹200 off on LimeRoad.com

*Terms & conditions apply. Images used are for reference only. All prices mentioned are inclusive of all taxes. Offer can be withdrawn without any prior notice. No two offers can be clubbed together. Special offer is not valid on purchase of FMCG/Kirana products. For more details regarding size, quantity, marketer refer product pack and label of the product. VMRL reserves the right to amend the terms & conditions at its discretion without any prior notice. In case of any dispute, V-Mart has the right to take the final decision.

FIND THE STORE NEAR YOU
475 STORES | 304 CITIES | 25 STATES
+91 9027 057 057
customercare@vmart.co.in

ಬೆಂಗಳೂರು: • ಬಸವೇಶ್ವರ ನಗರ - ಕದಂಬ ಹೊಟೇಲ್ ಎದುರು • ಜಿಟಿ ಮಾಲ್- ಪ್ರಸನ್ನ ಥಿಯೇಟರ್ ಪಕ್ಕ • ಪಾರ್ಕ್ ಸ್ಕ್ವೇರ್ ಮಾಲ್ - ಐಟಿಪಿಎಲ್ • ರಾಮಮೂರ್ತಿ ನಗರ - ತರುಣ್ ಮೋಟರ್ಸ್ ಪಕ್ಕ • ಸಹಕಾರ ನಗರ - ಹೆಚ್‌ಡಿಎಫ್‌ಸಿ ಬ್ಯಾಂಕ್ ಪಕ್ಕ • ವೈಷ್ಣವಿ ಸಫೈರ್ ಮಾಲ್ - ಮೆಟ್ರೊ ಸ್ಟೇಷನ್ ಪಕ್ಕ • ವಿದ್ಯಾರಣ್ಯಪುರ - ಹೆಚ್‌ಎಂಟಿ ಬಡಾವಣೆ • ತುಮಕೂರು - ಎಸ್‌ಪಿ ಕಚೇರಿ ಎದುರು, ಬಿಹೆಚ್ ರಸ್ತೆ • ಕೆಂಗೇರಿ - ಕೆಂಗೇರಿ ಉಪನಗರ

ಆಹಾರ ಪರೀಕ್ಷಾ ಕೇಂದ್ರಕ್ಕೆ ಚಾಲನೆ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಮಾಲ್‌ಗಳಲ್ಲಿ ಆಹಾರ ಗುಣಮಟ್ಟ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪದಾರ್ಥಗಳಲ್ಲಿನ ಕಲಬೆರಕೆ ಪತ್ತೆ ಹಚ್ಚಲು ಹಾಗೂ ಗುಣಮಟ್ಟ ಪರಿಶೀಲಿಸಲು ನಗರದ ಪ್ರಮುಖ ಮಾಲ್‌ಗಳಲ್ಲಿ ಪ್ರಾಯೋಗಿಕವಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಿರ್ಮಿಸಿರುವ 'ಮ್ಯಾಜಿಕ್ ಬಾಕ್ಸ್' ಆಹಾರ ಪರೀಕ್ಷಾ ಕೇಂದ್ರಗಳಿಗೆ ಶುಕ್ರವಾರ ಚಾಲನೆ ದೊರೆತಿದೆ.

ಯಲಹಂಕದಲ್ಲಿರುವ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಪರೀಕ್ಷಾ ಕೇಂದ್ರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು. ಬಳಿಕ ಪರೀಕ್ಷಾ ವಿಧಾನವನ್ನ ಪರಿಶೀಲಿಸಿದ ಅವರು, ಆಹಾರ ಪದಾರ್ಥಗಳ ಪರೀಕ್ಷೆಗೆ ಮುಂದಾಗುವ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ಒದಗಿಸುವ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ವೇಳೆ ಮಾತನಾಡಿದ ಸಚಿವರು, 'ಈ ಕೇಂದ್ರಗಳ ನೆರವಿನಿಂದ ಸಾರ್ವಜನಿಕರು ತ್ವರಿತಗತಿಯಲ್ಲಿ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರೀಕ್ಷಿಸಿಕೊಳ್ಳಬಹುದಾಗಿದೆ. ಆರಂಭಿಕ ಹಂತದಲ್ಲಿ ನಗರದ 10 ಮಾಲ್‌ಗಳಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ ಕಲಬೆರಕೆ ಪತ್ತೆ ಹಚ್ಚುವ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿದಿನ ಬಳಸುವ ಆಹಾರ ಪದಾರ್ಥಗಳಾದ ಬೇಳೆ-ಕಾಳುಗಳು, ಸಕ್ಕರೆ, ಅಡುಗೆ ಎಣ್ಣೆ, ಟೀ-ಪುಡಿ, ಉಪ್ಪು, ಹಾಲು ಮತ್ತು ಹಾಲಿನ ಉತ್ಪನ್ನಗಳು, ತರಕಾರಿಗಳು, ಸಾಂಬಾರ ಪದಾರ್ಥಗಳು ಸೇರಿ ವಿವಿಧ ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ತ್ವರಿತ ಪರೀಕ್ಷೆಗಳಿಂದ ಖಚಿತಪಡಿಸಿಕೊಳ್ಳಬಹುದು' ಎಂದರು.



ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ನಿರ್ಮಿಸಲಾಗಿರುವ ಪರೀಕ್ಷಾ ಕೇಂದ್ರದಲ್ಲಿ ಆಹಾರ ಗುಣಮಟ್ಟ ಪರೀಕ್ಷೆಯನ್ನು ದಿನೇಶ್ ಗುಂಡೂರಾವ್ ಪರಿಶೀಲಿಸಿದರು.ಕೆ.ಶ್ರೀನಿವಾಸ್, ಮಾಲ್‌ನ ಪ್ರಧಾನ ವ್ಯವಸ್ಥಾಪಕ ಸತೀಶ್ ಉಪಸ್ಥಿತರಿದ್ದರು

ಯಾವೆಲ್ಲ ಮಾಲ್‌ಗಳಲ್ಲಿ ಪ್ರಾರಂಭ

ಆಹಾರ ಪರೀಕ್ಷಾ ಕೇಂದ್ರಗಳನ್ನು ತುಮಕೂರು ರಸ್ತೆಯಲ್ಲಿರುವ ವೈಷ್ಣವಿ ಸಫೈರ್ ಸೆಂಟರ್, ಥಣಿಸಂದ್ರದಲ್ಲಿರುವ ಎಲಿಮೆಂಟ್ಸ್ ಮಾಲ್, ಬಳ್ಳಾರಿ ರಸ್ತೆಯಲ್ಲಿರುವ ಫೀನಿಕ್ಸ್ ಮಾಲ್ ಆಫ್ ಏಷ್ಯಾ, ಬನ್ನೇರುಘಟ್ಟ ರಸ್ತೆಯಲ್ಲಿರುವ ಮೀನಾಕ್ಷಿ ಮಾಲ್, ಚರ್ಚ್ ಸ್ಟ್ರೀಟ್‌ನಲ್ಲಿರುವ ಶೋಭಾ ಮಾಲ್, ಬೆಳ್ಳಂದೂರಿನಲ್ಲಿರುವ ಸೆಂಟ್ರಲ್ ಮಾಲ್, ಬೆನ್ನಿಗಾನಹಳ್ಳಿಯಲ್ಲಿರುವ ಗೋಪಾಲನ್ ಸಿಗ್ನೆಚರ್ ಮಾಲ್, ಕೋರಮಂಗಲದಲ್ಲಿರುವ ನೆಕ್ಸಸ್ ಫೋರಂ ಮಾಲ್, ಥಣಿಸಂದ್ರದಲ್ಲಿರುವ ಭಾರತೀಯ ಮಾಲ್ ಆಫ್ ಬೆಂಗಳೂರು ಹಾಗೂ ಮಾಗಡಿ ರಸ್ತೆಯಲ್ಲಿರುವ ಜಿ.ಟಿ. ವರ್ಲ್ಡ್ ಮಾಲ್‌ನಲ್ಲಿ ಪ್ರಾರಂಭಿಸಲಾಗಿದೆ.

'ಆಹಾರ ಗುಣಮಟ್ಟದ ವಿಚಾರದಲ್ಲಿ ಇತ್ತೀಚೆಗೆ ಹಲವು ಬಿಗಿ ಕ್ರಮಗಳನ್ನ ಕೈಗೊಳ್ಳುತ್ತಿರುವುದು ಆಹಾರ ತಯಾರಕರಿಗೆ ತೊಂದರೆ ಕೊಡುವ ಉದ್ದೇಶದಿಂದಲ್ಲ. ಬದಲಿಗೆ, ಜನರಲ್ಲಿ ಅರಿವು ಮೂಡಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ. ಶುದ್ಧವಾದ ಆಹಾರ ಸೇವನೆಯಿಂದ ಜನರು ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಹೀಗಾಗಿ, ಆಹಾರ ಕಲಬೆರಕೆಯ ನಿರ್ಮೂಲನೆಗಾಗಿ ಕೈ ಜೋಡಿಸಬೇಕು' ಎಂದು ಮನವಿ ಮಾಡಿದರು.

ನಗರದಲ್ಲಿ ತರಕಾರಿ ಮತ್ತು ಆಹಾರ ಧಾನ್ಯಗಳನ್ನ ಮಾರಾಟ ಮಾಡುವ ಮೋರ್, ರಿಲಯನ್ಸ್ ಫ್ರೆಶ್ ಸೇರಿದಂತೆ ವಿವಿಧ ಸೂಪರ್ ಮಾರುಕಟ್ಟೆಗಳಲ್ಲಿಯೂ ಆಹಾರದ ಗುಣಮಟ್ಟ ಪರೀಕ್ಷೆ ಕಿಟ್‌ಗಳನ್ನು ಅಳವಡಿಸುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಇಲಾಖೆ ಆಯುಕ್ತ ಕೆ.ಶ್ರೀನಿವಾಸ್, 'ಸಾರ್ವಜನಿಕರಲ್ಲಿ ಆಹಾರ ಗುಣಮಟ್ಟ, ಆಹಾರ ಕಲಬೆರಿಕೆ ಬಗ್ಗೆ ಅರಿವು ಮೂಡಿಸುವುದೇ ಈ ಪ್ರಯತ್ನದ ಉದ್ದೇಶ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಬಿಎಂಟಿಸಿಯಲ್ಲಿ ಚಾಲನಾ ತರಬೇತಿ

ಬೆಂಗಳೂರು: ರಾಜ್ಯ ಸರ್ಕಾರದ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿಎಸ್‌ಪಿ) ಅಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು ಮತ್ತು ಭಾರಿ ವಾಹನ ಚಾಲನಾ ತರಬೇತಿ ಕಾರ್ಯಕ್ರಮವನ್ನು ಬಿಎಂಟಿಸಿ ಹಮ್ಮಿಕೊಂಡಿದೆ.

ಕಾರು, ಜೀಪು ತರಬೇತಿಗೆ 18ರಿಂದ 45 ವಯೋಮಿತಿಯ ಅಭ್ಯರ್ಥಿಗಳು, ಬಸ್ ಚಾಲನಾ ತರಬೇತಿಗೆ 20ರಿಂದ 45 ವಯೋಮಿತಿಯವರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ವಸತಿ ಸಹಿತ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ವಸತಿ ಸೌಕರ್ಯ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ನೀಡಲಾಗುತ್ತದೆ. ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಸೇವಾ ಸಿಂಧು ಪೋರ್ಟಲ್ https://sevasindhuservices.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಜಿ ವಿವರಗಳಿಗೆ ಸೇವಾಸಿಂಧು ಪೋರ್ಟಲ್ ಸಹಾಯ ಕೇಂದ್ರದ ಸಂಪರ್ಕ ಸಂಖ್ಯೆ: 08022279954, 8792662814 / 8792662816 ಸಂಪರ್ಕಿಸಬಹುದು. ತರಬೇತಿ ಕುರಿತ ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್: www.mybmtc.gov.in ಅಥವಾ ದೂರವಾಣಿ ಸಂಖ್ಯೆ: 6364858520 / 7760991085ಗೆ ಕರೆ ಮಾಡಿ ಪಡೆಯಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



'ಹವಾಮಾನ ಬದಲಾವಣೆ ತಡೆಗೆ ಕ್ರಮ ಸಾಲದು'

ಬೆಂಗಳೂರು: 'ಹವಾಮಾನ ಬದಲಾವಣೆ ನಿಯಂತ್ರಣಕ್ಕೆ ಈಗ ವಿನಿಯೋಗಿಸುತ್ತಿರುವ ಹಣ ಮತ್ತು ತೆಗೆದುಕೊಳ್ಳುತ್ತಿರುವ ಕ್ರಮಗಳು ಸಾಲದು. ನಿಯಂತ್ರಣ ಕ್ರಮಗಳು ಇದೇ ಗತಿಯಲ್ಲಿದ್ದರೆ, 2050ರ ವೇಳೆಗೆ ಜಾಗತಿಕ ತಾಪಮಾನ ಏರಿಕೆಯು 2 ಡಿಗ್ರಿ ಸೆಲ್ಸಿಯಸ್ ಮಿತಿಯನ್ನು ದಾಟುತ್ತದೆ' ಎಂದು ಫೈಡ್ ಸಂಸ್ಥೆಯ ಸಹ ಸಂಸ್ಥಾಪಕ ಪ್ರಮೋದ್ ವರ್ಮಾ ಕಳವಳ ವ್ಯಕ್ತಪಡಿಸಿದರು.

ಫೈಡ್ ಮತ್ತು ಸತ್ವ ನಾಲೆಡ್ಜ್ ಇನ್‌ಸ್ಟಿಟ್ಯೂಟ್ ನಗರದಲ್ಲಿ ಆಯೋಜಿಸಿರುವ 'ಬೆಕನ್ ನಾಡ್ ಝೀರೊ: ಹವಾಮಾನ ಬದಲಾವಣೆ ತಡೆ ಸಮ್ಮೇಳನ'ವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು. ನಂತರ 'ಹವಾಮಾನ ಬದಲಾವಣೆ ನಿಯಂತ್ರಣದಲ್ಲಿ ಓಪನ್ ನೆಟ್‌ವರ್ಕ್‌ಗಳ ಪಾತ್ರ' ಕುರಿತು ಉಪನ್ಯಾಸ ನೀಡಿದರು.

'ಹಲವು ಭಿನ್ನ ಕ್ಷೇತ್ರಗಳು, ವಿಷಯಗಳಿಗೆ ಒಗ್ಗಬಲ್ಲ ವ್ಯವಹಾರಿಕ ವೇದಿಕೆಗಳು ಈಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ. ಇಂತಹ ಸಾಕ್ಷೇಪ ಗುಣ ಇರುವ ಕಾರಣದಿಂದಲೇ ಅವನ್ನು ಓಪನ್ ನೆಟ್‌ವರ್ಕ್ ಎನ್ನಲಾಗುತ್ತದೆ. ಇವಕ್ಕೆ ಉತ್ತೇಜನ ನೀಡುವುದರಿಂದ, ಅನಗತ್ಯವಾದ ಉದ್ದಿಮೆ ಮೂಲಸೌಕರ್ಯ ನಿರ್ಮಾಣವನ್ನು ತಪ್ಪಿಸಬಹುದು' ಎಂದರು.

ಅಹಿಂದ 'ದೆಹಲಿ ಚಲೋ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಕೇಂದ್ರ ಸರ್ಕಾರ ಪಿತೂರಿ ನಡೆಸಿದ್ದು, ರಾಷ್ಟ್ರಪತಿ ಮಧ್ಯ ಪ್ರವೇಶಿಸಬೇಕು' ಎಂದು ಆಗ್ರಹಿಸಿ ಅಹಿಂದ ಮುಖಂಡರು ನವೆಂಬರ್ 7ರಂದು ದೆಹಲಿ ಚಲೋ ಹಮ್ಮಿಕೊಳ್ಳಲು ನಿರ್ಧರಿಸಿದ್ದಾರೆ.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಅಹಿಂದ ಸಮುದಾಯವು ನಗರದಲ್ಲಿ ಶುಕ್ರವಾರ ಜಂಟಿಯಾಗಿ ಏರ್ಪಡಿಸಿದ್ದ ದುಂಡುಮೇಜಿನ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ದೆಹಲಿಯ ರಾಮಲೀಲಾ ಮೈದಾನದಲ್ಲಿ ಅಂದು ಬೆಳಿಗ್ಗೆ 11ಕ್ಕೆ ಪ್ರತಿಭಟನೆ ನಡೆಸಲಿದ್ದಾರೆ.

ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ. ವಿಜಯ್ ಕುಮಾರ್ ಮಾತನಾಡಿ, 'ಶೋಷಿತರ ಧ್ವನಿಯಾಗಿ ಕೆಲಸ ಮಾಡುವವರನ್ನು ಅಧಿಕಾರದಿಂದ ಕೆಳಗಿಳಿಸುವ ಕೆಲಸ ರಾಜ್ಯ ರಾಜಕಾರಣದಲ್ಲಿ ನಿರಂತರವಾಗಿ ನಡೆಯುತ್ತಿದ್ದು, ಸಿದ್ದರಾಮಯ್ಯ ವಿರುದ್ಧವೂ ಮುಂದು ವರೆದಿದೆ. ರಾಷ್ಟ್ರಪತಿಯೂ ತಟಸ್ಥ ವಾದರೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮಧ್ಯಪ್ರವೇಶಿಸಬೇಕು' ಎಂದು ಆಗ್ರಹಿಸಿದರು.

'ಕೇಂದ್ರದ ಕಪಿಮುಷ್ಠಿಯಲ್ಲಿರುವ ಸಿಬಿಐ, ಇಡಿ, ಐಟಿ ತನಿಖಾ ಸಂಸ್ಥೆಗಳಲ್ಲಿರುವ ಲೋಪ, ದೋಷಗಳ ಕುರಿತ ತನಿಖೆಗಾಗಿ ನ್ಯಾಯಾಂಗ ಆಯೋಗ ರಚಿಸಬೇಕು ಎಂಬುದೂ ನಮ್ಮ ಆಗ್ರಹ. ಅಭಿಯಾನದಲ್ಲಿ ಪ್ರೊ.ಬಂಜಗೆರೆ ಜಯಪ್ರಕಾಶ್, ದಿನೇಶ್ ಅಮೀನ್ ಮಟ್ಟು, ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಕೆ.ಎಸ್.ಭಗವಾನ್, ವಸುಂಧರಾ ಭೂಪತಿ, ನಾ.ದಿವಾಕರ್ ಭಾಗವಹಿಸಲಿದ್ದಾರೆ' ಎಂದು ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ಸ್ ನೇತೃತ್ವದಲ್ಲಿ ಪ್ರತಿಭಟನೆ

ಚಿಲ್ಲರೆ ಮದ್ಯ: ಶೇ 20 ಲಾಭಾಂಶಕ್ಕೆ ಆಗ್ರಹ

ಬೆಂಗಳೂರು: 'ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ 20ರಷ್ಟು ಲಾಭಾಂಶ ನೀಡಬೇಕು. ಅಬಕಾರಿ ಶುಲ್ಕವನ್ನು ಕಡಿಮೆ ಮಾಡಬೇಕು. ಲೋಕಾಯುಕ್ತ ಪೊಲೀಸರ ದಾಳಿಯಲ್ಲಿ ಸಿಕ್ಕಿಬಿದ್ದ ಅಬಕಾರಿ ಅಧಿಕಾರಿಗೆ ಎಕ್ಸಿಕ್ಯುಟಿವ್ ಹುದ್ದೆ ನೀಡಬಾರದು' ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ಸ್ ಕರ್ನಾಟಕ' ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

'ಸಿಎಲ್-2ಗಳಲ್ಲಿ ಗ್ರಾಹಕರಿಗೆ ಮದ್ಯ ಸೇವಿಸಲು ಅವಕಾಶ ನೀಡಬೇಕು. ಸಿಎಲ್-9 ಮತ್ತು ಸಿಎಲ್-7 ಅಥವಾ ಇತರೆ ದೊಡ್ಡ ಹೋಟೆಲ್‌ಗಳಿಗೆ ಗ್ರಾಹಕರು ತೆರಳಿ ಆಹಾರ ಪದಾರ್ಥಗಳನ್ನು ಖರೀದಿಸಲು ಆಗುವುದಿಲ್ಲ. ಆದ್ದರಿಂದ, ಗ್ರಾಹಕರಿಗೆ ಅನುಕೂಲವಾಗುವಂತೆ ಸನ್ನದು ಷರತ್ತುಗಳನ್ನು ಸಡಿಲಿಕೆ ಮಾಡಬೇಕು. ಮದ್ಯದಂಗಡಿಯ ಆವರಣದಲ್ಲಿ ತಯಾರಿಸಿದ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'2005ರಲ್ಲಿ ತಿದ್ದುಪಡಿ ಆಗಿರುವ ಅಬಕಾರಿ ಕಾಯ್ದೆ ಕಲಂ 29 ಅನ್ನು ಪುನರ್ ವಿಮರ್ಶಿಸಿ, ತಿದ್ದುಪಡಿ ಮಾಡಬೇಕು. ಎಂಎಸ್ ಐಎಲ್ ಅಂಗಡಿಗಳನ್ನು ಗ್ರಾಮಾಂತರ ಭಾಗದಲ್ಲಿ ತೆರೆಯಬೇಕು. ಆದರೆ, ಈಗ ನಗರ ಪ್ರದೇಶಗಳಲ್ಲೂ ತೆರೆಯುತ್ತಿರುವುದರಿಂದ ಇತರೆ ಸನ್ನದುದಾರರಿಗೆ ನಿರೀಕ್ಷಿತ ವ್ಯಾಪಾರ-ವಹಿವಾಟು ಆಗುತ್ತಿಲ್ಲ' ಎಂದು ಆರೋಪಿಸಿದರು.

'ಮಿಲಿಟರಿ ಕ್ಯಾಂಟೀನ್ ಸ್ಟೋರ್‌ಗಳು, ಡ್ಯೂಟಿ ಫ್ರೀ ಹೆಸರಿನಲ್ಲಿ ಬರುವ ನಕಲಿ ಮದ್ಯ, ಗೋವಾದಿಂದ ಆಮದು ಮಾಡಿಕೊಳ್ಳುತ್ತಿರುವ ಮದ್ಯಕ್ಕೆ ಕಡಿವಾಣ ಹಾಕಬೇಕು. ನಕಲಿ ಮದ್ಯ ತಯಾರಿಕಾ ಕೇಂದ್ರಗಳನ್ನು ನಿಯಂತ್ರಿಸಿ, ಅಂಥ ಕೇಂದ್ರಗಳನ್ನು ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪೊಲೀಸ್ ಇಲಾಖೆಯವರ ಅನಗತ್ಯ ಹಸ್ತಕ್ಷೇಪ ಮತ್ತು ಮದ್ಯದಂಗಡಿಗಳನ್ನು ಬಂದ್ ಮಾಡುತ್ತಿರುವುದರ ಬಗ್ಗೆ ಸರ್ಕಾರ ಮಧ್ಯ ಪ್ರವೇಶಿಸಿ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದರು. ಸಂಘಟನೆ ಅಧ್ಯಕ್ಷ ಎಸ್. ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ. ಗೋವಿಂದರಾಜ್ ಹೆಗ್ಡೆ, ಕೋಶಾಧಿಕಾರಿ ಟಿ.ಎಂ. ಮೆಹರ್‌ವಾಡೆ, ವಿಭಾಗೀಯ ಅಧ್ಯಕ್ಷ ಕರುಣಾಕರ ಹೆಗ್ಡೆ, ಜಿ. ರಾಮುಲು ಬಳ್ಳಾರಿ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಅಸೋಸಿಯೇಷನ್ ಸದಸ್ಯರು ಉಪಸ್ಥಿತರಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ನಡೆದ ಪ್ರತಿಭಟನೆಯಲ್ಲಿ ಫೆಡರೇಷನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಷನ್ಸ್ ಕರ್ನಾಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಪುನೀತ್ ನೆನಪಲ್ಲಿ ಗೀತೆ ರಚನೆ: 29ಕ್ಕೆ ಬಿಡುಗಡೆ

ಬೆಂಗಳೂರು: ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ 'ಮರೆಯಲಾರೆವು ನಿನ್ನನು ನಾವು' ಎಂಬ ಕನ್ನಡ ಅನುವಾದಿತ ಗೀತೆಯನ್ನು ರಚಿಸಲಾಗಿದ್ದು, ಅ.29ರಂದು ಬಿಡುಗಡೆಗೊಳಿಸಲಾಗುವುದು ಎಂದು ಹಿಂದಿ ಸಾಹಿತಿ ಲಲಿತಾ ಗೋಯೆಂಕಾ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕನ್ನಡ ಚಿತ್ರರಂಗದಲ್ಲಿ ಪುನೀತ್ ಅವರ ನಟನೆ, ಗಾಯನದ ಜೊತೆಗೆ ಸಮಾಜಮುಖಿ ಕೆಲಸಗಳನ್ನು ಮಾಡಿ ಜನಪ್ರಿಯರಾಗಿದ್ದರು. ಅವರ ಸವಿನೆನಪಿನಲ್ಲಿ ಹೊಸ ಗೀತೆಯನ್ನು ರಚಿಸಿದ್ದೇನೆ. ನಾನು ಈ ಹಾಡಿನ ಸಾಹಿತ್ಯವನ್ನು ಹಿಂದಿಯಲ್ಲಿ ರಚಿಸಿದ್ದು, ಕನ್ನಡಕ್ಕೆ ಜ್ಞಾನಮೂರ್ತಿ ಅವರು ಅನುವಾದಿಸಿದ್ದಾರೆ. ಪಿಂಟು ಮಲ್ಲಿಕ್ ಅವರ ಗಾಯನ ಮತ್ತು ಸಂಗೀತ ನಿರ್ದೇಶನವಿದ್ದು, ಅರಿತ್ರಾ ಘೋಷಾಲ್ ಅವರ ಛಾಯಾಗ್ರಹಣವಿದೆ' ಎಂದು ಮಾಹಿತಿ ನೀಡಿದರು. ಜ್ಞಾನಮೂರ್ತಿ, ವೀಣಾ, ಪಿಂಟು ಮಲ್ಲಿಕ್, ಅರಿತ್ರಾ ಘೋಷಾಲ್ ಸುದ್ದಿಗೋಷ್ಠಿಯಲ್ಲಿದ್ದರು.

ಡೋಝೀ ಸಂಸ್ಥೆಯಿಂದ ಅಧ್ಯಯನ ವರದಿ ಬಿಡುಗಡೆ

ರೋಗಿಗಳ ಮೇಲೆ ಎಐ ನಿಗಾ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ವೈದ್ಯಕೀಯ ಸಾಧನಗಳ ನೆರವಿನಿಂದ ರೋಗಿಗಳ ಆರೋಗ್ಯ ಸ್ಥಿತಿಯ ಮೇಲೆ ನಿಗಾ ಇಡುವ ವ್ಯವಸ್ಥೆಯನ್ನು ಡೋಝೀ ಸಂಸ್ಥೆ ರೂಪಿಸಿದ್ದು, 706 ರೋಗಿಗಳ ಮೇಲೆ ಅಧ್ಯಯನ ನಡೆಸಿದೆ.

ಸಂಸ್ಥೆಯು ಇಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅಧ್ಯಯನ ವರದಿಯನ್ನು ಬಿಡುಗಡೆ ಮಾಡಲಾಯಿತು. ಈ ಅಧ್ಯಯನವನ್ನು ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯದ (ಕೆಜಿಎಂಯು) ಸಹಯೋಗದಲ್ಲಿ ನಡೆಸಲಾಗಿದೆ.

ಈ ಅಧ್ಯಯನದ ಬಗ್ಗೆ ಮಾತನಾಡಿದ ಕೆಜಿಎಂಯು ವೈದ್ಯಕೀಯ ವಿಭಾಗದ ಪ್ರಾಧ್ಯಾಪಕ ಡಾ. ಹಿಮಾಂಶು ದಂಡು, 'ಆಸ್ಪತ್ರೆಗಳಲ್ಲಿನ ಬೆಡ್‌ಗಳಿಗೆ ಅಳವಡಿಸುವ 'ಡೋಝೀ ಪಾಡ್' ಸಾಧನ ಹಾಗೂ ಸೆನ್ಸರ್ ಶೀಟ್‌ಗಳ ನೆರವಿನಿಂದ ರೋಗಿಯ ಆರೋಗ್ಯ ಸ್ಥಿತಿ ಹದಗೆಡುವ 16 ಗಂಟೆಗಳ ಮೊದಲೇ ಸೂಚನೆಗಳು ನಿಯಂತ್ರಣಾ ಕೊಠಡಿಗಳಿಗೆ ರವಾನೆಯಾಗಲಿವೆ. ಇದರಿಂದ ರೋಗಿಯ ಆರೋಗ್ಯ ಸ್ಥಿತಿ ಸುಧಾರಣೆಗೆ ಕ್ರಮವಹಿಸಲು, ಪ್ರಾಣಾಪಾಯದಿಂದ ಪಾರು ಮಾಡಲು ಸಾಧ್ಯವಾಗುತ್ತದೆ. ಈ ಅಧ್ಯಯನ ವರದಿಯನ್ನು ಫ್ರಂಟಿಯರ್ಸ್ ಗ್ರೂಪ್ ಪ್ರಕಟ ಮಾಡಿದೆ' ಎಂದು ತಿಳಿಸಿದರು.

'ಸಾಮಾನ್ಯ ವಾರ್ಡ್‌ಗಳಲ್ಲಿ ರೋಗಿಗಳನ್ನು ನಿರ್ವಹಿಸಲು ಈ ವ್ಯವಸ್ಥೆ ಸಹಕಾರಿಯಾಗಲಿದೆ. ಸಿಬ್ಬಂದಿಯ ಸಮಯವನ್ನೂ ಉಳಿಸಬಹುದಾಗಿದೆ. ದೇಶದ ಬಹುತೇಕ ಆಸ್ಪತ್ರೆಗಳಲ್ಲಿ ನಿಗಾ ವ್ಯವಸ್ಥೆ ತೀವ್ರ ನಿಗಾ ಘಟಕಗಳಿಗೆ (ಐಸಿಯು) ಮಾತ್ರ ಸೀಮಿತವಾಗಿದೆ. ಸಾಮಾನ್ಯ ವಾರ್ಡ್‌ಗಳಲ್ಲಿನ ರೋಗಿಗಳ ಆರೋಗ್ಯ ಸ್ಥಿತಿ ಹದ ಗೆಡುತ್ತಿರುವುದು ಅಷ್ಟಾಗಿ ಗಮನಕ್ಕೆ ಬರುವುದಿಲ್ಲ. ಎಐ ತಂತ್ರಜ್ಞಾನ ಆಧಾರಿತ ಈ ವ್ಯವಸ್ಥೆಯಿಂದ ಹೃದಯ ಬಡಿತ, ಉಸಿರಾಟ, ರಕ್ತದೊತ್ತಡದಂತಹ ದೇಹದ ಪ್ರಮುಖ ಚಟುವಟಿಕೆಗಳ ಮೇಲೆ ನಿರಂತರ ನಿಗಾ ಸಾಧ್ಯವಾಗಲಿದ್ದು, ದೇಹದಲ್ಲಿ ವ್ಯತ್ಯಾಸವಾದರೆ ಸೂಚನೆಗಳು ರವಾನೆಯಾಗಲಿವೆ' ಎಂದರು.

ಡೋಝೀಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೌರವ್ ಪರ್ಚಾನಿ, 'ಲಖನೌದಲ್ಲಿರುವ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವ ವಿದ್ಯಾಲಯದ ಎರಡು ವಾರ್ಡ್‌ಗಳಲ್ಲಿ ಈ ಸಾಧನಗಳನ್ನು ಅಳವಡಿಸಿ, ಅಧ್ಯಯನ ನಡೆಸಲಾಗಿದೆ. ವೈದ್ಯಕೀಯ ವ್ಯವಸ್ಥೆಯನ್ನು ಬಲಪಡಿಸಲು ಇದು ಸಹಕಾರಿಯಾಗಿದೆ. ಐಸಿಯು ಮೇಲಿನ ಭಾರವನ್ನು ಇಳಿಸಲಿದೆ' ಎಂದು ವಿವರಿಸಿದರು.



ಅಧ್ಯಯನ ವರದಿ ಬಿಡುಗಡೆ ಕಾರ್ಯಕ್ರಮದಲ್ಲಿ ಡಾ. ಹಿಮಾಂಶು ದಂಡು, ಡಾ. ಅಂಬುಜ್ ಯಾದವ್, ಗೌರವ್ ಪರ್ಚಾನಿ ಹಾಗೂ ಡಾ. ರಾಜೇಶ್ ಮಿಶ್ರಾ ಉಪಸ್ಥಿತರಿದ್ದರು

ಚುನಾವಣೆಗೆ ಸಿದ್ಧ: ಮುಕುಂದರಾಜ್ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಚುನಾವಣೆಗೆ ಸ್ಪರ್ಧಿಸಲಿ, ನಾನು ಅಕಾಡೆಮಿಗೆ ರಾಜೀನಾಮೆ ನೀಡಿ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಸವಾಲು ಹಾಕಿದರು.

ಸಂಸ ಥಿಯೇಟರ್, ಕರ್ನಾಟಕ ಲೇಖಕಿಯರ ಸಂಘ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಸಹಯೋಗದಲ್ಲಿ ನಗರದಲ್ಲಿ ಶುಕ್ರವಾರ 'ಕೆ.ಎಲ್. ವಿಜಯಲಕ್ಷ್ಮಿ ಅವರ ಸ್ಮರಣಾರ್ಥ ನಡೆದ ಅನುವಾದ ಕಾವ್ಯ ಕಮ್ಮಟ ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ'ದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯೇತರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ವಿವಾದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಮಂಡ್ಯದಲ್ಲಿ ಮಾತನಾಡಿದ್ದ ಕಸಾಪ ಅಧ್ಯಕ್ಷ ಮಹೇಶ್ ಜೋಶಿ, 'ನಾನು ಸರ್ಕಾರದಿಂದ ನಾಮ ನಿರ್ದೇಶನಗೊಂಡವನಲ್ಲ. ಚುನಾವಣೆ ಎದುರಿಸಿ ಗೆದ್ದವನು. ಮುಕುಂದರಾಜ್ ಅವರು ಚುನಾವಣೆ ಎದುರಿಸಿ ಗೆಲ್ಲಲಿ' ಎಂದು ಸವಾಲು ಹಾಕಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಕುಂದರಾಜ್, 'ಜೋಶಿ ಅವರ ಸವಾಲನ್ನು ಸ್ವೀಕರಿಸಿದ್ದೇನೆ. ಅವರು ಈಗಲೇ ರಾಜೀನಾಮೆ ಕೊಟ್ಟು ಚುನಾವಣೆ ಎದುರಿಸಬೇಕು. ನಾನೂ ರಾಜೀನಾಮೆ ನೀಡಿ ಚುನಾವಣೆಗೆ ಸ್ಪರ್ಧಿಸುತ್ತೇನೆ' ಎಂದರು.

'ಅನುವಾದಕರು, ಕನ್ನಡ ಭಾಷೆ, ಸಂಸ್ಕೃತಿಗೆ ಹೊಂದುವಂತೆ ಅನುವಾದ ಮಾಡಬೇಕು. ಕನ್ನಡ ಸಾಹಿತ್ಯದ ಕೃತಿಗಳು ಬೇರೆ ಭಾಷೆಯಲ್ಲಿ ಲಭ್ಯವಾಗಬೇಕು' ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ ಮಾತನಾಡಿ, 'ಕನ್ನಡ ಸಾಹಿತ್ಯಕ್ಕೆ ಹೊಸತನದ ಪರಿಚಯವಾದದ್ದು ಅನುವಾದದ ಮೂಲಕ. ಅನುವಾದದ ಮೂಲಕವೇ ಬೇರೆ ಬೇರೆ ದೇಶಗಳ ಸ್ತ್ರೀ ಚಿಂತನೆಗಳನ್ನು ತಿಳಿದುಕೊಳ್ಳಲು ಸಾಧ್ಯವಾದದ್ದು' ಎಂದು ಹೇಳಿದರು. ಕಾರ್ಯಕ್ರಮ ಉದ್ಘಾಟಿಸಿದ ಕುವೆಂಪು ಭಾಷಾಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಚನ್ನಪ್ಪಕಟ್ಟಿ 'ಅನುವಾದ ಮೂಲ ಭಾಷೆಯ ಘಮವನ್ನು ಬಿಟ್ಟುಕೊಡಬಾರದು' ಎಂದು ಅಭಿ ಪ್ರಾಯಪಟ್ಟರು. ಲೇಖಕ ಶೂದ್ರ ಶ್ರೀನಿವಾಸ್, ಅನುವಾದಕ ಲಕ್ಷ್ಮೀಪತಿ ಸೊಂದಲಗೆರೆ, ಕಮ್ಮಟದ ನಿರ್ದೇಶಕಿ ಪ್ರೊ. ಷಾಕಿರಾ ಖಾನಮ್ ಹಾಜರಿದ್ದರು.



ಕೆ.ಎಲ್.ವಿಜಯಲಕ್ಷ್ಮಿ ಅನುವಾದ ಕಾವ್ಯ ಕಮ್ಮಟವನ್ನು ಸಂಸ ಥಿಯೇಟರ್ ಗೌರವಾಧ್ಯಕ್ಷ ಎಂ. ಜಯರಾಮ, ಕಮ್ಮಟದ ನಿರ್ದೇಶಕಿ ಪ್ರೊ.ಷಾಕಿರಾ ಖಾನಮ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಧ್ಯಕ್ಷ ಚನ್ನಪ್ಪ ಕಟ್ಟಿ, ಲೇಖಕ ಶೂದ್ರ ಶ್ರೀನಿವಾಸ್ ಮತ್ತು ಅನುವಾದಕ ಲಕ್ಷ್ಮೀಪತಿ ಸೊಂದಲಗೆರೆ ರವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ನಮಃ ಶಿವಾಯ' ಸ್ತೋತ್ರಮಹಾಸಮರ್ಪಣೆ: ಉಪಸ್ಥಿತಿ: ಶಂಕರಭಾರತೀ ಸ್ವಾಮೀಜಿ, ಬ್ರಹ್ಮಾನಂದಭಾರತೀ ಸ್ವಾಮೀಜಿ, ಪುಸ್ತಕ ಬಿಡುಗಡೆ: ಜಗದೀಪ್ ಧನಕರ್, ಅತಿಥಿಗಳು: ಪ್ರಲ್ಹಾದ್ ಜೋಶಿ, ಡಿ.ಕೆ. ಶಿವಕುಮಾರ್, ವಿ. ಸೋಮಣ್ಣ, ಆಯೋಜನೆ: ಸುವರ್ಣ ಭಾರತೀ, ವೇದಾಂತ ಭಾರತೀ, ಮಿಥಿಕ್ ಸೊಸೈಟಿ, ಸ್ಥಳ: ಕೃಷ್ಣಾವಿಹಾರ, ತ್ರಿಪುರವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 10.30


'ಮರೆಯದ ಮಾಣಿಕ್ಯ ಮಂಜುನಾಥ' ಅಭಿನಂದನಾ ಕೃತಿ ಬಿಡುಗಡೆ, ಶಿಕ್ಷಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಎನ್.ಎಸ್. ಬೋಸರಾಜು, ಕಿಮ್ಮನೆ ರತ್ನಾಕರ, ಕೃತಿ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಪ್ರಶಸ್ತಿ ಪ್ರದಾನ: ಪುಟ್ಟಣ್ಣ, ಚಂದ್ರಶೇಖರ್ ಪಾಟೀಲ್, ಅಧ್ಯಕ್ಷತೆ: ರಾಮೋಜಿಗೌಡ, ಆಯೋಜನೆ: ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ, ಎಚ್.ಕೆ. ಮಂಜುನಾಥ ಒಡನಾಡಿಗಳ ಬಳಗ, ಸ್ಥಳ: ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 10.30

'ಶಾ. ಬಾಲುರಾವ್ ಅನುವಾದ ಪ್ರಶಸ್ತಿ ಮತ್ತು ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ' ಪ್ರದಾನ: ಅಗ್ರಹಾರ ಕೃಷ್ಣಮೂರ್ತಿ, ಅತಿಥಿ: ಕಮಲಿನಿ ಶಾ. ಬಾಲುರಾವ್, ಪ್ರಶಸ್ತಿ ಪುರಸ್ಕೃತರು: ಡಿ.ಎ. ಶಂಕರ್, ಶಂಕರ್ ಸಿಹಿಮೊಗ್ಗೆ, ಉಪಸ್ಥಿತಿ: ಪಿ.ವಿ. ನಾರಾಯಣ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಡಿ.ಎ. ಶಂಕರ್


ಮಹಿಳಾ ಪತ್ರಕರ್ತರಿಗೆ ಹಣಕಾಸಿನ ವಹಿವಾಟು-ಮಾಹಿತಿ ಕಾರ್ಯಾಗಾರ: ಅತಿಥಿ: ಗುಂಜನ್ ಕೃಷ್ಣ, ಅಧ್ಯಕ್ಷತೆ: ಆರ್. ಶ್ರೀಧರ, ಉಪಸ್ಥಿತಿ: ಶಿವಕುಮಾರ್ ಬೆಳ್ಳಿತಟ್ಟೆ, ಉಪನ್ಯಾಸ: ಶರತ್ ಎಂ.ಎಸ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30



ಎಂ.ಆರ್. ದೊರೆಸ್ವಾಮಿ

'ವಿದ್ಯಾರ್ಥಿಗಳ ಮುಂದಿರುವ ಸವಾಲುಗಳು ಹಾಗೂ ಸರಿಯುತ್ತರ' ಉಪನ್ಯಾಸ: ಸ್ವಾಮಿ ವೀರೇಶಾನಂದ ಸರಸ್ವತಿ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಜಿಜೆಬಿಸಿ ಸಭಾಂಗಣ, ಸುವರ್ಣ ಮಹೋತ್ಸವ ಕಟ್ಟಡ ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ ಮೂರನೇ ಹಂತ, ಬೆಳಿಗ್ಗೆ 10.30

ಕನ್ನಡ ಪುಸ್ತಕ ಹಬ್ಬ-2024: ಉದ್ಘಾಟನೆ: ನಿರ್ಮಲಾ ನಂದನಾಥ ಸ್ವಾಮೀಜಿ, ಅತಿಥಿಗಳು: ಚಂದ್ರಶೇಖರ ಕಂಬಾರ, ಮಹೇಶ ಜೋಶಿ, ಅಧ್ಯಕ್ಷತೆ: ಎಂ.ಪಿ. ಕುಮಾರ್, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ಕೆಂಪೇಗೌಡನಗರ, ಬೆಳಿಗ್ಗೆ 11



ನಿರ್ಮಲಾನಂದ ನಾಥ ಸ್ವಾಮೀಜಿ

ಕೆ.ಎನ್. ವಿಜಯಲಕ್ಷ್ಮಿ ಅನುವಾದ ಕಾವ್ಯ ಕಮ್ಮಟ ಮತ್ತು ಪ್ರಶಸ್ತಿ ಸಮಾರಂಭ: 'ಕಾವ್ಯಾನುವಾದದ ತತ್ವ, ತಂತ್ರ ಆಯ್ಕೆಗಳು': ಎನ್. ದೇವರಾಜು, 'ಸೃಜನೇತರ ಬರಹಗಳ ಅನುವಾದ ಹಾಗೂ ಅದರ ಸವಾಲುಗಳು': ಕೆ.ಆರ್. ಸಂಧ್ಯಾರೆಡ್ಡಿ, ಆಯೋಜನೆ: ಸಂಸ ಥಿಯೇಟರ್, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಕೆ.ಎಸ್. ರಾಮಮೂರ್ತಿ ಅವರ 'ಕೋಲಾರ ಜಿಲ್ಲಾ ಮುಲಕನಾಡು ಬ್ರಾಹ್ಮಣರು' ಪುಸ್ತಕ ಬಿಡುಗಡೆ: ಅತಿಥಿಗಳು: ಬಾಬುಕೃಷ್ಣಮೂರ್ತಿ, ಎಂ.ಎಸ್. ನರಸಿಂಹಮೂರ್ತಿ, ಆರ್. ಶೇಷಶಾಸ್ತ್ರಿ, ಸ್ಥಳ: ಶಂಕರಕೃಪ ಗಿರಿನಗರ ಶಂಕರಮಠ ಆವರಣ, ಗಿರಿನಗರ ಮುಖ್ಯರಸ್ತೆ, ಬೆಳಿಗ್ಗೆ 11

ಪದವಿ ದಿನ: ಮುಖ್ಯ ಭಾಷಣಕಾರರು: ಎಂ. ಶಂಕರನ್, ಅತಿಥಿಗಳು: ನಿರಜ್ ಕುಮಾರ್, ದೀಪಕ್ ಎನ್.ಜಿ., ಉಪಸ್ಥಿತಿ: ಡಿ. ಹೇಮಚಂದ್ರ ಸಾಗರ್, ಡಿ. ಪ್ರೇಮಚಂದ್ರ ಸಾಗರ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಇನ್‌ಸ್ಟಿಟ್ಯೂಷನ್ಸ್, ಕುಮಾರಸ್ವಾಮಿ ಲೇಔಟ್, ಮಧ್ಯಾಹ್ನ 3

ಕಾರಂತರ ಜನ್ಮದಿನ ಮತ್ತು ನಿರಂಜನ ಸ್ಮರಣೆ: 'ಶಿವರಾಮ ಕಾರಂತ ಮತ್ತು ನಿರಂಜನ ಕಾದಂಬರಿಯೆಂಬ ಕನ್ನಡಿಯಲ್ಲಿ' ಉಪಸ್ಥಿತಿ: ಎಚ್.ಎಸ್. ರಾಘವೇಂದ್ರ ರಾವ್, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನ ಸಭಾಂಗಣ, ಆರ್. ಟಿ. ನಗರ, ಸಂಜೆ 4

ದಸರಾ ಉಪನ್ಯಾಸ ಮಾಲಿಕೆ-2024: ಅತಿಥಿ: ಜಿ. ಶ್ರೀನಿವಾಸನ್, ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಸಂಜೆ 4

ಜಿ.ಎಸ್. ಶಿವಪ್ರಸಾದ್ ಅವರ 'ಮೊನಾಲೀಸಾ' ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಎಸ್.ಆರ್. ವಿಜಯಶಂಕರ್, ಪುಸ್ತಕದ ಕುರಿತು: ಕೆ.ವೈ. ನಾರಾಯಣಸ್ವಾಮಿ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4.30

'ಸುದರ್ಶನ ಗ್ರಹಣ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುರೇಶ ಶೆಟ್ಟಿ ಶಂಕರನಾರಾಯಣ, ಕಾರ್ತಿಕ್ ಧಾರೇಶ್ವರ, ಚಿನ್ಮಯ ಹೆಗಡೆ, ಮುಮ್ಮೇಳ: ಹಿರಣ್ಯ ವೆಂಕಟೇಶ್ವರ ಭಟ್, ಉಜಿರೆ ಅಶೋಕ ಭಟ್, ಆಯೋಜನೆ: ಕುರಿಯ ವಿಠಲ ಶಾಸ್ತ್ರಿ, ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಚಿತ್ಪಾವನ ಸುವರ್ಣ ಭವನ, ರಾಜಾಜಿನಗರ, ಸಂಜೆ 5

ಶ್ರೇಷ್ಠ ಹಾಸ್ಯಪಟು ಎಂ.ಆರ್. ಸುಬ್ಬರಾಮು ಸಂಸ್ಮಾರಣಾರ್ಥ 'ವಿನೋದ ಸಂಜೆ' ಕಾರ್ಯಕ್ರಮ: ಭಾಗವಹಿಸುವವರು: ಎಂ.ಎಸ್. ನರಸಿಂಹಮೂರ್ತಿ, ಎಂ. ಕೃಷ್ಣೇಗೌಡ, ರಿಚರ್ಡ್ ಲೂಯಿಸ್, ಅಣಕು ರಾಮನಾಥ್, ಆಯೋಜನೆ: ಎಸ್. ಡೆಂಟಲ್ ಕೇರ್ ಆ್ಯಂಡ್ ತೇಜು ಪಬ್ಲಿಕೇಷನ್ಸ್, ಸ್ಥಳ: ಸಿ. ಅಶ್ವತ್ಥ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5

ಶ್ರೀಮತಿ ಎಚ್.ಎಸ್. ಅವರು ಅನುವಾದಿಸಿದ 'ಬಂಧಮುಕ್ತ' ಪುಸ್ತಕದ ಕುರಿತು ಚರ್ಚೆ: ಅಕ್ಕೈ ಪದ್ಮಶಾಲಿ, ಅರುಣ್ ಜೋಳದಕೂಡ್ಲಿಗಿ, ಗುರುಪ್ರಸಾದ್, ಆಯೋಜನೆ: ಜೀರುಂಡೆ, ಸ್ಥಳ: ದೇವರಾಜ್ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5

'ಚಿತ್ರಾಂಗದ' ನೃತ್ಯರೂಪಕ ಪ್ರದರ್ಶನ: ಮಾಧುರಿ ಸರ್ಕಾರ್, ಅತಿಥಿಗಳು: ಶುಭ ಧನಂಜಯ್ಯ, ಸರ್ಬಾನಿ ಘೋಷ್, ಶರ್ಮಿಳಾ ಮುಖರ್ಜಿ, ಉಜ್ವಲ್ ಅಧಿಕಾರಿ, ಆಯೋಜನೆ: ನಿಗಮಸುಧಾ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಭರತನಾಟ್ಯ ರಂಗಪ್ರವೇಶ: ಪ್ರಿಯಾ ಎಸ್. ಎನ್., ಅರ್ಚನಾ ಎಸ್. ಕಟ್ಟಿ, ವಿಜಯಶ್ರೀ ಎ., ಶ್ವೇತಾ ಆರ್., ಆಯೋಜನೆ: ಚಿತ್ರನಾಟ್ಯ ಫೌಂಡೇಶನ್, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 6

'ಅನು ಒಲಿದಂತೆ ಹಾಡುವೆನಯ್ಯಾ ನಿನಗೆ ಕೇಡಿಲ್ಲವಾಗಿ' ಕುರಿತು ವಿಶೇಷ ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ರಾಜಕುಮಾರ್, ಆಯೋಜನೆ: ಬಸವ ಬಳಗ, ಸ್ಥಳ: ಸ್ತ್ರೀ ಶಕ್ತಿ ಭವನ, ಕುಂದಲಹಳ್ಳಿ, ಸಂಜೆ 6

ನಾಟ್ಯ ಪರಂಪರ ಉತ್ಸವ-2024: ಸನ್ಮಾನಿತರು: ವೇದಾಂತಂ ವಿಧುಮೌಳಿ, ಬಾಲಾ ವಿಶ್ವನಾಥ್, ಕುಚಿಪುಡಿ ನೃತ್ಯ ಪ್ರದರ್ಶನ: ಜನನಿ ರಾವ್, ದಿಲೀಪ್ ಸೆಲಾರ್, ಕಾರ್ತಿಕಾ ಮೋಹನ್, ರೋಶಿನ್ ಚಂದ್ರನ್, ಆಯೋಜನೆ: ಕುಚಿಪುಡಿ ಪರಂಪರ ಫೌಂಡೇಶನ್, ಸ್ಥಳ: ಮೈದೈ ಸಭಾಂಗಣ, ಕೋರಮಂಗಲ, ಸಂಜೆ 6

ಇಂಟರ್‌ನ್ಯಾಷನಲ್ ವುಮೆನ್ಸ್ ಅಚೀವರ್ಸ್ ಅವಾರ್ಡ್ಸ್, ಯಂಗ್ ಅಚೀವರ್ಸ್ ಅವಾರ್ಡ್ಸ್: ಅತಿಥಿಗಳು: ರಾಮಲಿಂಗಾರೆಡ್ಡಿ, ರಿಜ್ವಾನ್ ಅರ್ಷದ್, ಮನ್ಸೂರ್ ಅಲಿ ಖಾನ್, ವಿವೇಕ್, ಎಂ. ನಾಸರ್, ಶಮ್ಲಾ ಇಕ್ಬಾಲ್, ಪ್ರಶಸ್ತಿ ಪುರಸ್ಕೃತರು: ಆರತಿ ಕೃಷ್ಣ, ಅಂಜುಬಾಬಿ ಜಾರ್ಜ್, ರೆಬೆಕಾ ಮರಿಸ್ಸಾ ಟೇಲರ್, ಸೌಮ್ಯರೆಡ್ಡಿ, ಪ್ರೇಮಾ, ಕಸ್ತೂರಿ ಶಂಕರ್, ಆರತಿ, ಗೌರಿ, ಪ್ರಿಯಾ ಕೆರವಶಿ, ಸುಧಾ, ದೀಪ್ತಿ ತೊಲ್ಪಾಡಿ, ಪೃಥ್ವಿ ವಕುದಾ, ಆಯೋಜನೆ: ಕಬ್ಬನ್ ಪಾರ್ಕ್ ವಾಕರ್ಸ್ ಅಸೋಸಿಯೇಷನ್, ಕಬ್ಬನ್ ಪಾರ್ಕ್ ವಾಕರ್ಸ್ ಫೋರಂ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬಿಎಂಟಿಸಿ ಬಸ್‌ನಲ್ಲಿ ಹೊಗೆ: ಪ್ರಯಾಣಿಕರು ಪಾರು

ಬೆಂಗಳೂರು: ಬೊಮ್ಮಸಂದ್ರ ಬಸ್ ನಿಲ್ದಾಣದ ಬಳಿ ಬಿಎಂಟಿಸಿ ಬಸ್‌ನಲ್ಲಿ ಶುಕ್ರವಾರ ಹೊಗೆ ಕಾಣಿಸಿಕೊಂಡಿದ್ದು, ಪ್ರಯಾಣಿಕರು ಇಳಿದು ಪಾರಾಗಿದ್ದಾರೆ.

ಬನಶಂಕರಿಯಿಂದ ಆನೇಕಲ್ ಕಡೆಗೆ ಸಂಚರಿಸುತ್ತಿದ್ದ ಎಲೆಕ್ಟ್ರಿಕ್ ಬಸ್‌ನಲ್ಲಿ (ಸ್ವಿಚ್ ಮೊಬಿಲಿಟಿ) ಒಮ್ಮೆಲೇ ಹೊಗೆ ಕಾಣಿಸಿಕೊಂಡಿತು. ಕೂಡಲೇ ಚಾಲಕ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿದರು. ಎಲೆಕ್ಟ್ರಿಕ್ ಬಸ್‌ಗಳಲ್ಲಿ ಹೆಚ್ಚಿನ ಶಾಖದಿಂದ ಬೆಂಕಿ ಉಂಟಾಗುವ ಅಪಾಯ ಇದ್ದಾಗ ಫೈರ್ ಡಿಟೆಕ್ಷನ್ ಸಪ್ರೆಷನ್ ಸಿಸ್ಟಮ್ (ಎಫ್‌ಡಿಎಸ್‌ಎಸ್) ಸಕ್ರಿಯಗೊಂಡಿದ್ದು ಹೊಗೆ ಉಗುಳುತ್ತದೆ. ಇದು ಬೆಂಕಿ ಆವರಿಸದಂತೆ ತಡೆಯುವ ಮತ್ತು ಚಾಲಕ, ನಿರ್ವಾಹಕರಿಗೆ ಅಪಾಯದ ಮಾಹಿತಿ ನೀಡುವ ತಂತ್ರಜ್ಞಾನವಾಗಿದೆ. ಅದೇ ರೀತಿ ಈ ಬಸ್‌ನಲ್ಲಿ ಹೊಗೆ ಕಾಣಿಸಿಕೊಂಡಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ. ಬಿಎಂಟಿಸಿ ಮತ್ತು ಸ್ವಿಚ್ ಮೊಬಿಲಿಟಿ ತಂತ್ರಜ್ಞರು ಹೊಗೆ ಆವರಿಸುವುದನ್ನು ನಿಲ್ಲಿಸಿದರು.

ಮೈಸೂರು ರೇಸ್

ರಾವಿಶಿಂಗ್ ಫಾರಂ ಗೆಲ್ಲುವ ನಿರೀಕ್ಷೆ

ಕೆ.ಟಿ.ಶಾಮಯ್ಯಗೌಡ ಮೆಮೋರಿಯಲ್ ಕಪ್ ಶನಿವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರಾವಿಶಿಂಗ್ ಫಾರಂ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಾಸ್ಟರ್ ವಿಕ್ಟರಿ 10, ಲೀಡ್ ಸಿಂಗರ್ 8, ಬಂಡೆಲ್‌ಖಾಂಡ್ ಕ್ವೀನ್ 3
2ನೇ ರೇಸ್: ಮಾಸ್ಟರಿ 3, ಆರಿಲೆ 4, ಕೂರ್ಗ್ ಜೆನರಲ್ 8
3ನೇ ರೇಸ್: ಈಸ್ಟರನ್ ಗೋಲ್ಡ್ 4, ಮೆಹ್ರಾ 5, ಕನೆಕ್ಟಿಂಗ್ ಡಾಟ್ಸ್ 1
4ನೇ ರೇಸ್: ಹ್ಯಾಂಡ್ ಆಫ್ ಗಾಡ್ 3, ಚೋಟಪಾರಿ 7, ಸಾರ್ಜೆಂಟ್ ರೆಕ್‌ಲೆಸ್ 4
5ನೇ ರೇಸ್: ಅಶ್ವ ವೇಧ 12, ಓ ಮಂಚಲಿ 11, ನೆವಡ ಗೋಲ್ಡ್ 10
6ನೇ ರೇಸ್: ರಾವಿಶಿಂಗ್ ಫಾರಂ 3, ಸೆಗೆರ 2, ಐರನ್ ಕ್ಲಾಡ್ 1
7ನೇ ರೇಸ್: ಸೂಪರ್ ಕೈಂಡ್ 3, ಎಮಿರಾಲ್ಡ್ ಕ್ವೀನ್ 1, ರಿವರ್ ಆಫ್ ಗೋಲ್ಡ್ 2
8ನೇ ರೇಸ್: ಪೆಟ್ಟೀಸ್ ಚಾಯ್ಸ್ 7, ಜಸ್ಟ್ ಬ್ಲೂಸ್ 9, ರಿವಿಲೇಟರ್ 2

ಉತ್ತಮ ಬೆಟ್: ಹ್ಯಾಂಡ್ ಆಫ್ ಗಾಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಬಾಬು ಸಾ ಪಾಳ್ಯ ಕಟ್ಟಡ ಕುಸಿತ: 9ಕ್ಕೇರಿದ ಮೃತರ ಸಂಖ್ಯೆ; 2 ದಿನದಲ್ಲಿ ಅವಶೇಷಗಳ ಸ್ಥಳಾಂತರ

ಉಪಗುತ್ತಿಗೆದಾರ ಏಳುಮಲೈ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಬು ಸಾ ಪಾಳ್ಯದ ಕಟ್ಟಡ ಕುಸಿದ ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸುವ ವೇಳೆ ಉಪಗುತ್ತಿಗೆದಾರ ಏಳುಮಲೈ ಅವರ ಶವ ಶುಕ್ರವಾರ ಪತ್ತೆಯಾಗಿದೆ.

ಇದರೊಂದಿಗೆ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 9 ತಲುಪಿದ್ದು, 15 ಮಂದಿಯನ್ನು ರಕ್ಷಿಸಲಾಗಿದೆ. ರಕ್ಷಣಾ ಸಿಬ್ಬಂದಿ ಮಧ್ಯಾಹ್ನ ಶೋಧ ಕಾರ್ಯಾಚರಣೆಯನ್ನು ಮುಕ್ತಾಯಗೊಳಿಸಿದರು.

ಗುರುವಾರ ದಿನವಿಡೀ ಅವಶೇಷಗಳನ್ನು ತೆರವುಗೊಳಿಸಿ ರಕ್ಷಣಾ ಸಿಬ್ಬಂದಿ ಶೋಧ ನಡೆಸಿದ್ದರೂ ಏಳುಮಲೈ ಸುಳಿವು ಪತ್ತೆಯಾಗಿರಲಿಲ್ಲ. ಅವರು ಬಳಸುತ್ತಿದ್ದ ಮೊಬೈಲ್ ಲೊಕೇಷನ್ ಇದೇ ವ್ಯಾಪ್ತಿಯಲ್ಲಿ ಇತ್ತು. ಹಾಗಾಗಿ ಅವಶೇಷಗಳಡಿ ಸಿಲುಕಿರಬಹುದು ಎಂಬ ಶಂಕೆಯೊಂದಿಗೆ ಶುಕ್ರವಾರ ಬೆಳಿಗ್ಗೆ ಶೋಧ ಆರಂಭಿಸಿದ್ದರು. ಕಾರ್ಯಾಚರಣೆ ಆರಂಭವಾದ ಕೆಲವೇ ಹೊತ್ತಿನಲ್ಲಿ ಅವಶೇಷಗಳಡಿ ಅವರ ಶವ ಪತ್ತೆಯಾಯಿತು. ಬಳಿಕ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಹಸ್ತಾಂತರಿಸಲಾಯಿತು.

‘ಗುತ್ತಿಗೆ ಕೆಲಸದ ಜತೆಗೆ ಕಾರ್ಮಿಕರನ್ನು ಕರೆತರುವ ಜವಾಬ್ದಾರಿಯನ್ನೂ ಏಳುಮಲೈ ನಿಭಾಯಿಸುತ್ತಿದ್ದರು. ಹಾಗಾಗಿ ಇವರ ವಿರುದ್ಧವೂ ಎಫ್‌ಐಆರ್ ದಾಖಲಾಗಿತ್ತು’ ಎಂದು ಹೆಣ್ಣೂರು ಠಾಣೆ ಪೊಲೀಸರು ತಿಳಿಸಿದ್ದಾರೆ.


ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದ ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸಲಾಯಿತು

ಕಟ್ಟಡದ ಅವಶೇಷಗಳನ್ನು ಬೇರೆಡೆಗೆ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಎರಡು–ಮೂರು ದಿನಗಳಲ್ಲಿ ಅವಶೇಷಗಳನ್ನು ಸಂಪೂರ್ಣ ತೆರವು ಮಾಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಾಬು ಸಾ ಪಾಳ್ಯದಲ್ಲಿ ಮಂಗಳವಾರ ಏಳು ಅಂತಸ್ತಿನ ನಿರ್ಮಾಣ ಹಂತದ ಕಟ್ಟಡ ಕುಸಿದು, ಕಾರ್ಮಿಕರು ಅವಶೇಷಗಳಡಿ ಸಿಲುಕಿಕೊಂಡಿದ್ದರು. ಅಗ್ನಿಶಾಮಕ ಮತ್ತು ತುರ್ತು ಕಾರ್ಯಾಚರಣೆ ದಳ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಹಾಗೂ ಪೊಲೀಸರು ಮೂರು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದರು.

ವಿಧಿವಿಜ್ಞಾನ ತಜ್ಞರ ಭೇಟಿ: ಕಟ್ಟಡ ಕುಸಿತ ಸ್ಥಳಕ್ಕೆ ವಿಧಿವಿಜ್ಞಾನ ತಜ್ಞರು ಭೇಟಿ ನೀಡಿದ್ದು, ಪರಿಶೀಲನೆ ನಡೆಸಿ ಮಾದರಿಗಳನ್ನು ಸಂಗ್ರಹಿಸಿದರು.

‘ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ತಂಡವು ಕಟ್ಟಡ ನಿರ್ಮಾಣಕ್ಕೆ ಬಳಸಲಾದ ಮಣ್ಣು, ಮರಳು, ಇಟ್ಟಿಗೆಗಳು, ಸಿಮೆಂಟ್ ಮತ್ತು ಉಕ್ಕಿನ ಸರಳುಗಳು, ರಕ್ತದ ಮಾದರಿಗಳನ್ನು ಸಂಗ್ರಹಿಸಿದೆ. ಈ ಮಾದರಿಗಳ ಗುಣಮಟ್ಟ ಪರೀಕ್ಷಿಸಲು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಟ್ಟಡ ಕುಸಿತ ತನಿಖೆ ಆರಂಭ

ಬಾಬು ಸಾ ಪಾಳ್ಯದ ಕಟ್ಟಡ ದುರಂತ ಪ್ರಕರಣದಲ್ಲಿ ಮೃತಪಟ್ಟಿದ್ದ ಒಂಬತ್ತು ಮಂದಿಯ ಶವವನ್ನು ಹೊರಕ್ಕೆ ತೆಗೆಯಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ತನಿಖೆ ಆರಂಭಿಸಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ದಾಖಲೆಗಳ ಪರಿಶೀಲನೆ ಕಾರ್ಯ ನಡೆಯುತ್ತಿದೆ. ಕಟ್ಟಡದ ಮಾಲೀಕ ಮುನಿರಾಜು ರೆಡ್ಡಿ, ಇವರ ಪುತ್ರ ಭುವನ್ ರೆಡ್ಡಿ ಹಾಗೂ ಕಟ್ಟಡದ ನಾಲ್ಕನೇ ಅಂತಸ್ತಿನವರೆಗೂ ನಿರ್ಮಾಣದ ಜವಾಬ್ದಾರಿ ವಹಿಸಿದ್ದ ಗುತ್ತಿಗೆದಾರ ಮುನಿಯಪ್ಪ ಅವರ ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಪ್ರಾಥಮಿಕ ವರದಿಗಳ ಪ್ರಕಾರ ಕಟ್ಟಡ ನಿರ್ಮಾಣಕ್ಕೆ ಕಳಪೆ ಗುಣಮಟ್ಟದ ವಸ್ತುಗಳನ್ನು ಬಳಸಿದ ಕಾರಣದಿಂದಲೇ ಕಟ್ಟಡ ಕುಸಿದಿರುವ ಸಾಧ್ಯತೆ ಇದೆ’ ಎಂದು ಪೊಲೀಸರು ಹೇಳಿದ್ದಾರೆ.

ರಾಜಕಾಲುವೆ ಒತ್ತುವರಿ ತೆರವಿಗೆ ನ.15ರ ಗಡುವು

ತಹಶೀಲ್ದಾರ್, ವಲಯ ಆಯುಕ್ತರಿಗೆ ಜವಾಬ್ದಾರಿ: ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆಗಳ ಒತ್ತುವರಿಯನ್ನು ನವೆಂಬರ್ 15ರೊಳಗೆ ತೆರವು ಮಾಡಬೇಕು ಎಂದು ಎಲ್ಲ ವಲಯ ಆಯುಕ್ತರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಬೃಹತ್ ಮಳೆನೀರು ಕಾಲುವೆ ಹಾಗೂ ಕೆರೆಗಳ ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ತಹಶೀಲ್ದಾರ್‌ಗಳು ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳೊಂದಿಗೆ ಶುಕ್ರವಾರ ನಡೆಸಿದ ಸಭೆಯಲ್ಲಿ ಈ ಗಡುವು ನೀಡಿದರು.

ತಹಶೀಲ್ದಾರ್ ಅವರು ಎಲ್ಲಾ ಪ್ರಸ್ತಾವನೆಯನ್ನು ಪರಾಮರ್ಶಿಸಿ, ಆದೇಶ ಹೊರಡಿಸಬೇಕು. ಎಲ್ಲಾ ವಲಯ ಆಯುಕ್ತರು ಕೂಡಲೇ ಕ್ರಮ ಕೈಗೊಳ್ಳಬೇಕು. ರಾಜಕಾಲುವೆ ಒತ್ತುವರಿ ತೆರವು ಮಾಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲ ಕೆರೆಗಳ ಸರ್ವೆ ನಡೆಸಬೇಕು. ಸರ್ವೆ ದಾಖಲೆ ಬಂದ ಕೂಡಲೇ ಒತ್ತುವರಿ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಾಂಶಗಳು

- ಒತ್ತುವರಿ ತೆರವು ಮಾಡದಿದ್ದರೆ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ
- ಎಲ್ಲ ಕೆರೆಗಳ ಸರ್ವೆ ನಡೆಸಲು ಸೂಚನೆ
- ತ್ಯಾಜ್ಯ ಬಾಕಿ ಉಳಿಸದಂತೆ ಅಧಿಕಾರಿಗಳಿಗೆ ಆದೇಶ

ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್, ಬಿಬಿಎಂಪಿ ವಿಶೇಷ ಆಯುಕ್ತರಾದ ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ಡಾ.ಹರೀಶ್ ಕುಮಾರ್, ವಿಶೇಷ ಜಿಲ್ಲಾಧಿಕಾರಿ ಎಸ್.ಎಲ್. ಬಾಲಚಂದ್ರನ್, ವಲಯ ಆಯುಕ್ತರಾದ ಕರಿಗೌಡ, ರಮ್ಯಾ, ವಿನೋಥ್ ಪ್ರಿಯಾ, ಸತೀಶ್, ಅರ್ಚನಾ, ಗಿರೀಶ್ ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

ವಿಲೇವಾರಿ: ‘ದೀಪಾವಳಿ ಹಬ್ಬದಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಹೆಚ್ಚು ಕಾಂಪ್ಯಾಕ್ಟರ್‌ಗಳನ್ನು ಬಳಸಿಕೊಳ್ಳಬೇಕು. ತ್ಯಾಜ್ಯ ಬಾಕಿ ಉಳಿಸಬಾರದು’ ಎಂದು ಘನತ್ಯಾಜ್ಯ ವಿಭಾಗದ ಅಧಿಕಾರಿಗಳಿಗೆ ಆದೇಶಿಸಿದರು.

ಕೇಬಲ್ ತೆರವಿಗೆ ಸೂಚನೆ



ಬಿಬಿಎಂಪಿ ವ್ಯಾಪ್ತಿಯ ಟೆಂಡರ್ ಶ್ಯೂರ್ ರಸ್ತೆಗಳ ಮೇಲೆ ಮತ್ತು ಬೆಸ್ಕಾಂ ಕಂಬಗಳಲ್ಲಿ ಹಾಕಿರುವ ಅನಧಿಕೃತ ಓವರ್ ಹೆಡ್ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಇನ್ನು ಮುಂದೆ ಹೊಸ ಕೇಬಲ್ ಅಳವಡಿಸಬೇಕಾದರೆ ಡಕ್ಟ್ ಮೂಲಕ ಅಳವಡಿಸಬೇಕು. ಪಾಲಿಕೆಯ ಅನುಮತಿ ಇಲ್ಲದೇ ಕೇಬಲ್ ಅಳವಡಿಸಿದರೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಬೆಸ್ಕಾಂ ಕೂಡ ಟೆಂಡರ್ ಶ್ಯೂರ್ ರಸ್ತೆಯಲ್ಲಿ ಕಂಬದ ಮೇಲಿನ ಕೇಬಲ್ ಅಳವಡಿಸಬಾರದು, ಹಾಗೆಯೇ ನಿಗದಿತ ಅವಧಿಯಲ್ಲಿ ತೆರವು ಗೊಳಿಸಬೇಕು. ನಿಗದಿತ ಹಣವನ್ನು ಪಾವತಿ ಮಾಡಿ ಡಕ್ಟ್‌ನಲ್ಲಿ ಅಳವಡಿಸಬೇಕು ಎಂದು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.



ಮಳೆ ನಿಂತರೂ...

ಹೊರಮಾವು ಸಮೀಪದ ಸಾಯಿ ಬಡಾವಣೆಯಲ್ಲಿ ಸಂಗ್ರಹವಾಗಿದ್ದ ಮಳೆನೀರನ್ನು ಹೊರಹಾಕಲು ಬಿಬಿಎಂಪಿ ಸಿಬ್ಬಂದಿ ಶುಕ್ರವಾರವೂ ಪ್ರಯತ್ನಪಟ್ಟರು

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಹೆಚ್ಚಿದ ಸಂಚಾರ ದಟ್ಟಣೆ: ಹಲವು ರಸ್ತೆಗಳ ಗುಂಡಿ ಮುಚ್ಚಿದ ಸಂಚಾರ ಪೊಲೀಸರು

ಮಳೆ ನಂತರ ರಸ್ತೆ ಗುಂಡಿಗಳ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ನಿಂತ ಮೇಲೆ ರಸ್ತೆಗಳಲ್ಲಿ ಬೃಹತ್ ಗುಂಡಿಗಳು ಅನಾವರಣಗೊಳ್ಳುತ್ತಿವೆ. ಬಿಬಿಎಂಪಿ ಸಿಬ್ಬಂದಿ ಮಳೆ ಅವಾಂತರದಿಂದಲೇ ಹೊರಬಂದಿಲ್ಲ. ಆದರೆ, ಸುಗಮ ಸಂಚಾರಕ್ಕಾಗಿ ಕೆಲವು ರಸ್ತೆಗಳಲ್ಲಿ ಸಂಚಾರ ಪೊಲೀಸರೇ ಗುಂಡಿ ಮುಚ್ಚುತ್ತಿದ್ದಾರೆ.

ಹೊರ ವರ್ತುಲ ರಸ್ತೆಯ ಇಬ್ಲೂರುನಿಂದ ಸರ್ಜಾಪುರ ರಸ್ತೆಯಲ್ಲಿ ಗುಂಡಿಗಳು ಅತಿಹೆಚ್ಚಾಗಿ ಉದ್ಭವಿಸಿದ್ದವು. ಇವುಗಳಿಂದ ಸಂಚಾರ ದಟ್ಟಣೆ ಅಧಿಕವಾಗಿತ್ತು. ಇದನ್ನು ಅರಿತ ಬೆಳ್ಳಂದೂರು ಸಂಚಾರ ಪೊಲೀಸರು ರಸ್ತೆಗುಂಡಿಗಳನ್ನು ತಾವೇ ಸಲಿಕೆ ಬಳಸಿ ಮುಚ್ಚಿದರು. ಬಿಬಿಎಂಪಿ ಸಹಾಯದಲ್ಲಿ ಗುಂಡಿ ಮುಚ್ಚಲಾಗಿದೆ ಎಂದು ವಿಡಿಯೊ ಹಾಗೂ ಚಿತ್ರವನ್ನು ಬೆಳ್ಳಂದೂರು ಸಂಚಾರ ಪೊಲೀಸರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಶುಕ್ರವಾರ ಹಂಚಿಕೊಂಡಿದ್ದಾರೆ.

‘ನಗರದ ಹಲವು ರಸ್ತೆಗಳಲ್ಲಿ ಗುಂಡಿಗಳಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತದೆ. ನಿಧಾನಗತಿಯಲ್ಲಿ ವಾಹನಗಳು ಸಂಚರಿಸಿರುವುದನ್ನು ಗಮನಿಸಿ, ಸಂಚಾರ ಪೊಲೀಸರು ಗುಂಡಿ ಮುಚ್ಚುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ, ಬಿಬಿಎಂಪಿ ಸಿಬ್ಬಂದಿ ನಿರಂತರ ಮಳೆಯ ಗುಂಗಿನಿಂದ ಹೊರಬಂದಿಲ್ಲ. ಕೆಲವು ರಸ್ತೆಗಳಲ್ಲಿ ಮಾತ್ರ ಡಾಂಬರು ಹಾಕಲಾಗುತ್ತಿದೆ’ ಎಂದು ವಾಹನ ಸವಾರರು ದೂರಿದ್ದಾರೆ.


ಇಬ್ಲೂರು ರಸ್ತೆಯಲ್ಲಿ ಸಂಚಾರ ಪೊಲೀಸರು ರಸ್ತೆ ಗುಂಡಿ ಮುಚ್ಚಿದರು


ಮೈಸೂರು ರಸ್ತೆಯ ಬಿಎಚ್‌ಇಎಲ್ ಸಮೀಪದಲ್ಲಿರುವ ಬೃಹತ್ ಗುಂಡಿ

ಪ್ರಜಾವಾಣಿ ಚಿತ್ರ

‘ಮಳೆ ಅಲ್ಪ ಬಿಡುವು ನೀಡಿದರೂ ರಸ್ತೆ ಗುಂಡಿ ಮುಚ್ಚುವ ಕೆಲಸ ಮಾಡುತ್ತೇವೆ. ಅದಕ್ಕಾಗಿ ಮೂರು ಘಟಕಗಳಲ್ಲಿ ‘ಕೋಲ್ಡ್ ಮಿಕ್ಸ್’ಅನ್ನೇ ತಯಾರಿಸಲಾಗುತ್ತಿದೆ. ಅದನ್ನು ಬಳಸಿಕೊಂಡು ಗುಂಡಿಗಳನ್ನು ಮುಚ್ಚುತ್ತೇವೆ’ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆಗಾಗ್ಗೆ ಹೇಳುತ್ತಲೇ ಇದ್ದಾರೆ. ಆದರೆ, ಅಂತಹ ಕೆಲಸಗಳಾಗುತ್ತಿಲ್ಲ ಎಂಬುದಕ್ಕೆ ನಗರದಲ್ಲಿ ಹೆಚ್ಚಾಗಿರುವ ರಸ್ತೆ ಗುಂಡಿಗಳೇ ಸಾಕ್ಷಿಯಾಗಿವೆ.

‘ಎರಡೂವರೆ ಸಾವಿರ ಗುಂಡಿಗಳಿವೆ ಎಂದು ಹೇಳಿದ್ದರೂ, 16 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಹೇಳಲಾಗಿತ್ತು. ವಲಯವಾರು ವಿವರವನ್ನು ಬಿಡುಗಡೆ ಮಾಡಲೇ ಇಲ್ಲ. ರಾಜರಾಜೇಶ್ವರಿನಗರ ವಲಯದಲ್ಲಿ ಹತ್ತು ಜನರ ಕೆಲಸವನ್ನು ಮಾಡುವ ‘ಜೆಟ್ ಪ್ಯಾಚರ್’ ಯಂತ್ರ ಮೂಲಕ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ಹೇಳಲಾಗಿತ್ತು. ಆದರೆ, ಆ ವಲಯದ ಕೇಂದ್ರ ಕಚೇರಿಯಿರುವ ಅಕ್ಕಪಕ್ಕದ ರಸ್ತೆಗಳಲ್ಲಿ ನೂರಾರು ಗುಂಡಿಗಳಿವೆ’ ಎಂದು ರಾಜರಾಜೇಶ್ವರಿ ನಗರದ ನಿವಾಸಿ ಟಿ.ಸಿ. ಶ್ರೀನಿವಾಸ್ ದೂರಿದರು.

‘ಮಳೆ ನೀರಿನ ಸಮಸ್ಯೆ ನಿವಾರಿಸುವ ಕಾರ್ಯ ನಡೆಯುತ್ತಿದೆ. ಮುಂದಿನ ವಾರದಿಂದ ರಸ್ತೆ ಗುಂಡಿಗಳ ದುರಸ್ತಿ ಮಾಡಲಾಗುವುದು’ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಡಿಸಿಎಂ ಪರಿಶೀಲನೆ ನಂತರ ನಿರ್ಲಕ್ಷ್ಯ!

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 15 ದಿನದಲ್ಲಿ ಗುಂಡಿ ಮುಚ್ಚಬೇಕು ಎಂದು ಸೆಪ್ಟೆಂಬರ್‌ನಲ್ಲಿ ಗಡುವು ನೀಡಿದ್ದರು. ಮುಖ್ಯ ಆಯುಕ್ತ, ಪ್ರಧಾನ ಎಂಜಿನಿಯರ್, ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ರಾತ್ರಿಯೆಲ್ಲ ರಸ್ತೆಗಿಳಿದು ಡಾಂಬರು ಹಾಕುವತ್ತ ನಿಂತು ಚಿತ್ರ ತೆಗೆಸಿಕೊಂಡರು.

‘16 ಸಾವಿರ ಗುಂಡಿಗಳನ್ನು ಮುಚ್ಚಿ ಬಿಬಿಎಂಪಿ ಸಿಬ್ಬಂದಿ ದಾಖಲೆ ಸೃಷ್ಟಿಸಿದ್ದಾರೆ. ಆದರೂ ಅವರ ಮಾತನ್ನು ನಂಬುವುದಿಲ್ಲ’ ಎಂದು ಶಿವಕುಮಾರ್ ರಾತ್ರಿ ಸಂಚಾರದಲ್ಲಿ ಪ್ರಮುಖ ರಸ್ತೆಗಳಲ್ಲಷ್ಟೇ ಗುಂಡಿ ದುರಸ್ತಿ ಪರಿಶೀಲಿಸಿ ಮಾತನಾಡಿದ್ದರು. ‘ಹಳೇ ಬೈಕ್ ಸರಿಪಡಿಸಿದ್ದೇನೆ, ಎಲ್ಲ ರಸ್ತೆಗಳಲ್ಲೂ ಹೋಗುತ್ತೇನೆ’ ಎಂದೂ ಹೇಳಿ ಒಂದು ತಿಂಗಳಾಯಿತು.

ಡಿಸಿಎಂ ಪರಿಶೀಲನೆಗೆ ಮುನ್ನ, ರಸ್ತೆ ಗುಂಡಿಗಳನ್ನು ಮುಚ್ಚಿದ ಬಗ್ಗೆ ವಲಯ ಆಯುಕ್ತರು, ಜಂಟಿ ಆಯುಕ್ತರ ಅವರಾಗಿಯೇ ಮಾಹಿತಿ ನೀಡಿದರು. ‘ಆ ಬಗ್ಗೆ ಮಾಹಿತಿ ಇಲ್ಲ. ಕೇಂದ್ರ ಕಚೇರಿಯಲ್ಲಿ ಕೇಳಿ’ ಎಂದು ಸಬೂಬು ಹೇಳಿದರು.

ಅಕ್ಟೋಬರ್ ಎರಡನೇ ವಾರದಿಂದ ನಗರದಲ್ಲಿ ಮಳೆ ಹೆಚ್ಚಾಯಿತು. ರಸ್ತೆ ಗುಂಡಿಗಳನ್ನು ಎಷ್ಟು ‘ಹೈಟೆಕ್ ತಂತ್ರಜ್ಞಾನ’ದಿಂದ ಮುಚ್ಚಿದ್ದರೂ ಅಲ್ಲೆಲ್ಲ ಅದಕ್ಕಿಂತ ದೊಡ್ಡ ಗುಂಡಿಗಳಾಗಿವೆ.

‘ನಿತ್ಯವೂ ಸಾವಿರಾರು ಗುಂಡಿಗಳು ಹೊಸದಾಗಿ ಉದ್ಭವಿಸುತ್ತವೆ’ ಎಂದು ಬಿಬಿಎಂಪಿ ಮುಖ್ಯ ಅಯುಕ್ತರೇ ಹೇಳುತ್ತಿರುವುದರಿಂದ ವಲಯ ಆಯುಕ್ತರು, ಜಂಟಿ ಆಯುಕ್ತರೂ ಕ್ಷಿಪ್ರ ಕ್ರಮ ಕೈಗೊಳ್ಳುತ್ತಿಲ್ಲ. ಪ್ರಮುಖ ರಸ್ತೆಗಳಿಗೆ ಮಾತ್ರ ಡಾಂಬರು ತುಂಬಿ ಸುಮ್ಮನಾಗಿದ್ದಾರೆ. ವಾರ್ಡ್ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕೆಲಸ ಬಹುತೇಕ ಸ್ಥಗಿತಗೊಂಡಿದೆ.

‘ಪುತ್ರನ ಕಣಕ್ಕಿಳಿಸಲು ‘ಚದುರಂಗದಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಮ್ಮ ಪುತ್ರ ನಿಖಿಲ್ ಅವರನ್ನು ಚನ್ನಪಟ್ಟಣ ಉಪ ಚುನಾವಣೆಯ ಕಣಕ್ಕೆ ಇಳಿಸಲು ‘ಚದುರಂಗದಾಟ’ ಸೃಷ್ಟಿಸಿದರು ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಟೀಕಿಸಿದರು.


ಡಿ.ಕೆ. ಸುರೇಶ್

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಕುಮಾರಸ್ವಾಮಿ 40 ವರ್ಷಗಳಿಂದ ರಾಜಕೀಯ ತಂತ್ರಗಾರಿಕೆ ಮಾಡಿಕೊಂಡು ಬಂದಿದ್ದಾರೆ. ಲೋಕಸಭೆಗೆ ಆಯ್ಕೆಯಾಗಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ ದಿನವೇ ನಿಖಿಲ್ ಸ್ಪರ್ಧೆ ಖಚಿತವಾಗಿತ್ತು. ಅವರೇ ಮುಂದಿನ ಅಭ್ಯರ್ಥಿ ಎನ್ನುವುದು ಇಡೀ ಚನ್ನಪಟ್ಟಣಕ್ಕೆ ಗೊತ್ತಿತ್ತು. ಈಗ ನಿಖಿಲ್‌ಗೆ ಟಿಕೆಟ್ ಕೊಡುವ ಅನಿವಾರ್ಯವನ್ನು ಕಾಂಗ್ರೆಸ್ ಸೃಷ್ಟಿಸಿತು ಎಂದು ನಾಟಕ ಮಾಡುತ್ತಿದ್ದಾರೆ’ ಎಂದರು.

‘ಜೆಡಿಎಸ್‌ಗೆ ಕುಮಾರಸ್ವಾಮಿ ಅವರೇ ಅಧಿನಾಯಕ. ಎಲ್ಲವನ್ನೂ ಅವರೇ ತೀರ್ಮಾನಿಸುತ್ತಾರೆ. ಬಲವಂತವಾಗಿ ನಿಖಿಲ್ ಅವರನ್ನು ಕಣಕ್ಕೆ ಇಳಿಸುತ್ತಿಲ್ಲ. ಅದೆಲ್ಲ ಪೂರ್ವನಿಗದಿತ. ನಾಮಪತ್ರ ಸಲ್ಲಿಸಿದ ನಂತರ ಇನ್ನಷ್ಟು ನಾಟಕಗಳು ಹೊರಬರುತ್ತವೆ’ ಎಂದರು.

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು ಚನ್ನಪಟ್ಟಣದಲ್ಲೇ ಇದ್ದು ಪ್ರಚಾರ ನಡೆಸುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಮೊಮ್ಮಗನ ಪರ ಪ್ರಚಾರಕ್ಕೆ ಬರಬೇಡಿ ಎಂದು ಹೇಳಲು ಆಗುತ್ತದೆಯೇ? ಚುನಾವಣೆಯ ಹೊಣೆ ಹೊತ್ತಿದ್ದೇನೆ. ನಮ್ಮ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇನೆ. ಪಕ್ಷದ ಸಿದ್ಧಾಂತ ಒಪ್ಪಿದ ಎಲ್ಲರನ್ನೂ ಪಕ್ಷಕ್ಕೆ ಬರಮಾಡಿಕೊಳ್ಳುತ್ತೇವೆ’ ಎಂದರು.

“‘ಕೈ’ ಸೇರಿ ಹರಕೆ ಕುರಿಯಾದ ಸಿಪಿವೈ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಅಧಿಕಾರದಲ್ಲಿರುವ ಪಕ್ಷಕ್ಕೆ ಪಕ್ಷಾಂತರವಾಗುತ್ತಾ ರಾಜಕಾರಣ ಮಾಡಿಕೊಂಡು ಬಂದಿರುವ ಸಿ.ಪಿ. ಯೋಗೇಶ್ವರ್, ಬಿಜೆಪಿ ತೊರೆದು ಕಾಂಗ್ರೆಸ್ ಸೇರುವ ಮೂಲಕ ಅಲ್ಲಿ ಹರಕೆಯ ಕುರಿಯಾಗಿದ್ದಾರೆ’ ಎಂದು ಬಿಜೆಪಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದರು.

‘ಕಾಂಗ್ರೆಸ್‌ನಲ್ಲಿ ಯೋಗೇಶ್ವರ್ ಮೊದಲ ಸಾಲಿನ ನಾಯಕರಾಗುವುದಿಲ್ಲ. ಬದಲಿಗೆ, ಮೂರನೇ ಸಾಲಿನ ನಾಯಕನಾಗಿ ಹಿಂದಕ್ಕೆ ಸರಿದಿದ್ದಾರೆ. ವೈಯಕ್ತಿಕ ಅನುಕೂಲಕ್ಕಾಗಿ ಯೋಗೇಶ್ವರ್ ಕಾಂಗ್ರೆಸ್ ಸೇರಿದ್ದಾರೆಯೇ ಹೊರತು, ಅಭಿವೃದ್ಧಿಗಾಗಿ ಅಲ್ಲ. ಪ್ರತಿ ಚುನಾವಣೆಗೆ ಒಂದೊಂದು ಪಕ್ಷದ ಪರ ವಾಲುವುದೇ ಅವರ ಚಾಳಿ’ ಎಂದು ನಗರದ ಹೊರವಲಯದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

‘ಯೋಗೇಶ್ವರ್ ಅವರಿಗೆ ಟಿಕೆಟ್ ಕೊಡಿಸುವ ಸಲುವಾಗಿ ನಾನು, ಡಾ.ಸಿ.ಎನ್.ಅಶ್ವತ್ಥ ನಾರಾಯಣ ಸೇರಿದಂತೆ ಬಿಜೆಪಿ ನಾಯಕರು ನಿರಂತರವಾಗಿ ಪ್ರಯತ್ನ ಮಾಡಿದೆವು. ಕಡೆಗೆ ಜೆಡಿಎಸ್ ಟಿಕೆಟ್ ನೀಡಲು ಎಚ್.ಡಿ. ಕುಮಾರಸ್ವಾಮಿ ಒಪ್ಪಿದರು. ಅದನ್ನೂ ನಿರಾಕರಿಸಿದಾಗ ಬಿಜೆಪಿಯಿಂದಲೇ ಕಣಕ್ಕಿಳಿಸಲು ಮುಂದಾದರು’ ಎಂದರು.

‘ಅಷ್ಟೊತ್ತಿಗಾಗಲೇ ಸಿಪಿವೈ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ, ರಾತ್ರೋರಾತ್ರಿ ಆ ಪಕ್ಷ ಸೇರಿ ಬಿಜೆಪಿಗೆ ದ್ರೋಹ ಬಗೆದರು. ಎನ್‌ಡಿಎ ಅಭ್ಯರ್ಥಿಯಾಗಿ ನಿಖಿಲ್ ಕಣಕ್ಕಿಳಿದಿರುವುದರಿಂದ ಕಣದಲ್ಲಿ ತೀವ್ರ ಪೈಪೋಟಿ ಏರ್ಪಟ್ಟಿದ್ದು, ಗೆಲುವಿಗೆ ಎರಡೂ ಪಕ್ಷಗಳ ನಾಯಕರು ಪಣ ತೊಟ್ಟಿದ್ದಾರೆ’ ಎಂದರು.

‘ಯೋಗೇಶ್ವರ್ ಅಲ್ಲ, ನಾನು ಭಗೀರಥ’

‘ನಾನು ಮುಖ್ಯಮಂತ್ರಿಯಾಗಿದ್ದಾಗ ಏತ ನೀರಾವರಿ ಮೂಲಕ ಚನ್ನಪಟ್ಟಣದ ಕೆರೆಗಳಿಗೆ ನೀರು ತುಂಬಿಸಲು ₹150 ಕೋಟಿ ಬಿಡುಗಡೆ ಮಾಡಿದೆ. ಅದರ ಫಲವಾಗಿ ಇಲ್ಲಿನ ಕೆರೆಗಳು ತುಂಬಿವೆ. ಇದಕ್ಕೆ ಕಾರಣವಾದ ನಾನು ಭಗೀರಥನೇ ಹೊರತು ಯೋಗೇಶ್ವರ್ ಅಲ್ಲ. ನಾನು ಮಾಡಿದ ಕೆಲಸದ ಕ್ರೆಡಿಟ್ ನನಗೇ ಬರಬೇಕು. ಆದರೆ, ಯೋಗೇಶ್ವರ್ ಅದರ ಕ್ರೆಡಿಟ್ ತೆಗೆದುಕೊಂಡು ಭಗೀರಥ ಎಂದು ಹೇಳಿಕೊಂಡು ಚುನಾವಣೆ ಮಾಡುತ್ತಾ ಬಂದಿದ್ದಾರೆ. ಅವರಿಗೆ ಮಾನ ಮರ್ಯಾದೆ ಇದ್ದರೆ ಹಾಗೆ ಹೇಳಿಕೊಳ್ಳದೆ ಚುನಾವಣೆ ಎದುರಿಸಲಿ’ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ ಸವಾಲು ಹಾಕಿದರು.

‘ಆರೋಗ್ಯ ಸರಿ ಹೋದರೆ ಪ್ರಚಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ಕ್ಷೇತ್ರದಲ್ಲಿ ನಿಖಿಲ್ ಕುಮಾರಸ್ವಾಮಿ ಅವರೇ ಅಭ್ಯರ್ಥಿ ಆಗಬೇಕು ಎನ್ನುವುದು ಕ್ಷೇತ್ರದ ಕಾರ್ಯಕರ್ತರು ಮತ್ತು ಜನರ ಅಭಿಪ್ರಾಯ. ಆದ್ದರಿಂದ ಅವರನ್ನು ಕಣಕ್ಕಿಳಿಸಲಾಗಿದೆ ಎಂದು ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ಹೇಳಿದ್ದಾರೆ.

‘ನನಗೆ ಆರೋಗ್ಯ ಸರಿ ಇಲ್ಲ. ಆರೋಗ್ಯ ಸರಿಯಾದರೆ ಚನ್ನಪಟ್ಟಣದಲ್ಲಿ ಪ್ರಚಾರಕ್ಕೆ ಹೋಗುತ್ತೇನೆ’ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ನಿಖಿಲ್ ಅವರನ್ನು ಕಣಕ್ಕೆ ಇಳಿಸಲು ಕುಮಾರಸ್ವಾಮಿ ಅವರಿಗೆ ಮನಸ್ಸು ಇರಲಿಲ್ಲ. ಕಾರ್ಯಕರ್ತರನ್ನೇ ನಿಲ್ಲಿಸಬೇಕು ಎಂದುಕೊಂಡಿದ್ದರು. ಕಾರ್ಯಕರ್ತರ ಒತ್ತಡಕ್ಕೆ ಮಣಿಯಬೇಕಾಯಿತು. ಕಾಂಗ್ರೆಸ್ ಪಕ್ಷದಲ್ಲಿ ಅಭ್ಯರ್ಥಿಯೇ ಇಲ್ಲದ ಕಾರಣ ಯೋಗೇಶ್ವರ್ ಅವರನ್ನು ಎಳೆದುಕೊಂಡರು. ಕಾಂಗ್ರೆಸ್‌ಗೆ ಇಂತಹ ದಯನೀಯ ಪರಿಸ್ಥಿತಿ ಬರುತ್ತದೆ ಎಂದುಕೊಂಡಿರಲಿಲ್ಲ’ ಎಂದು ರೇವಣ್ಣ ಹೇಳಿದರು.

‘ಚನ್ನಪಟ್ಟಣಕ್ಕೆ ಕಾಂಗ್ರೆಸ್ ಕೊಡುಗೆ ಏನು ಹೇಳಲಿ? ರಾಮನಗರ ಆಸ್ಪತ್ರೆ, ರಸ್ತೆ ಮತ್ತಿತರ ಅಭಿವೃದ್ಧಿ ಕೆಲಸಗಳು ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನಡೆಯಿತು. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಹಳಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಯಡಿಯೂರಪ್ಪ, ವಿಜಯೇಂದ್ರ ಮತ್ತು ಕುಮಾರಸ್ವಾಮಿ ಅವರು ಒಂದಾಗಿದ್ದಾರೆ’ ಎಂದು ಅವರು ಪ್ರತಿಪಾದಿಸಿದರು.

ಚಿತ್ರಾವಳಿ


ಆಸ್ಟಿನ್ ಟೌನ್ ರಾಜಕಾಲುವೆ ಬಳಿ ರಾಶಿ ಬಿದ್ದಿರುವ ಕಸ


ನೀಲಸಂದ್ರದ ರಸ್ತೆಯಲ್ಲಿ ತುಂಬಿರುವ ಕಸದ ರಾಶಿಯಲ್ಲಿ ಹಸುಗಳು


ಸಿದ್ದಾಪುರದ ಅಶೋಕ ಪಿಲ್ಲರ್ ರಸ್ತೆಯಲ್ಲಿ ತ್ಯಾಜ್ಯದೊಂದಿಗೆ ಸಾಲಾಗಿ ನಿಂತ ಆಟೊಗಳು– ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌ಜಿ.

ಶಾಸಕ ಸೋಮಶೇಖರ್‌ಗೆ ಬೈರತಿ ಬಸವರಾಜ ಸವಾಲು

‘ಬಿಜೆಪಿ ಬಿಡುವವರ ಹೆಸರು ಹೇಳಿ’

ಬೆಂಗಳೂರು: ‘ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರುವ ಶಾಸಕರ ಹೆಸರು ಹೇಳಿ’ ಎಂದು ಶಾಸಕ ಎಸ್.ಟಿ.ಸೋಮಶೇಖರ್ ಅವರಿಗೆ ಬಿಜೆಪಿಯ ಮತ್ತೊಬ್ಬ ಶಾಸಕ ಬೈರತಿ ಬಸವರಾಜ ಸವಾಲು ಹಾಕಿದ್ದಾರೆ.


ಎಸ್.ಟಿ. ಸೋಮಶೇಖರ್

‘ಬೆಂಗಳೂರಿನ ಇಬ್ಬರು ಸೇರಿ ಒಟ್ಟು ಎಂಟು ಶಾಸಕರು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರುತ್ತಾರೆ’ ಎಂದು ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಗುರುವಾರ ನೀಡಿದ ಹೇಳಿಕೆ ನೀಡಿದ್ದರು. ಅದಕ್ಕೆ ಬೈರತಿ ಬಸವರಾಜ ಮತ್ತು ಸಂಸದ ಗೋವಿಂದ ಕಾರಜೋಳ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಸೇರಿದ ಬಗ್ಗೆ ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸೋಮಶೇಖರ್, ‘ಬಿಜೆಪಿಯವರು ಯೋಗೇಶ್ವರ್ ಅವರನ್ನು ದುಡಿಸಿಕೊಂಡು ಕೈಬಿಟ್ಟಿದ್ದಾರೆ. ಕೆಟ್ಟದಾಗಿ ನಡೆಸಿಕೊಂಡಿದ್ದಾರೆ. ಆರ್. ಅಶೋಕ ಅವರ ಮಾತು ಯಾರೂ ಕೇಳಬಾರದು. ನಾನಂತೂ ಪಕ್ಷದ ಶಿಸ್ತುಕ್ರಮಕ್ಕೆ ಹೆದರುವುದಿಲ್ಲ’ ಎಂದು ಹೇಳಿದ್ದರು.

‘ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಬೇಕು. ಆದ್ದರಿಂದ ನಾನು ಬಿಜೆಪಿ ಶಾಸಕನಾಗಿದ್ದರೂ ಅಭಿವೃದ್ಧಿ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡುತ್ತಿರುತ್ತೇನೆ. ಬೆಂಗಳೂರಿನ ಇಬ್ಬರು ಸೇರಿ ಒಟ್ಟು ಎಂಟು ಶಾಸಕರು ಕಾಂಗ್ರೆಸ್ ಸೇರುತ್ತಾರೆ’ ಎಂದು ಹೇಳಿದ್ದರು.

ರಾಜೀನಾಮೆ ನೀಡಿ ಮಾತನಾಡಲಿ: ‘ಸೋಮಶೇಖರ್ ಬಿಜೆಪಿಯಿಂದ ಸಚಿವರು, ಶಾಸಕರಾಗಿ ಎಲ್ಲ ಅಧಿಕಾರ ಅನುಭವಿಸಿ ಪಕ್ಷದ ವಿರುದ್ಧವೇ ಹೇಳಿಕೆ ನೀಡುವುದು ಸರಿಯಲ್ಲ. ನೈತಿಕತೆ ಇದ್ದರೆ ಬಿಜೆಪಿಯ ಪ್ರಾಥಮಿಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಹೇಳಿಕೆ ನೀಡಲಿ’ ಎಂದು ಗೋವಿಂದ ಕಾರಜೋಳ ಅವರು ಹುಬ್ಬಳ್ಳಿಯಲ್ಲಿ ಶುಕ್ರವಾರ ಹೇಳಿದರು.

‘ಸೋಮಶೇಖರ್ ತಾಂತ್ರಿಕವಾಗಿ ಮಾತ್ರ ಬಿಜೆಪಿಯಲ್ಲಿ ಇದ್ದಾರೆ. ಬಿಜೆಪಿಯಿಂದ ಶಾಸಕರಾಗಿ ಆಯ್ಕೆ ಆಗಿರುವ ಅವರು, ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ. ನಂತರ ಅವರ ಹೇಳಿಕೆಗೆ ಮಹತ್ವ ಬರುತ್ತದೆ. ಮುಳುಗುವ ಹಡಗು ಕಾಂಗ್ರೆಸ್‌ಗೆ ಯಾರೂ ಹೋಗಲ್ಲ’ ಎಂದರು.

ಶಾಸಕ ಬೈರತಿ ಬಸವರಾಜ ಮಾತನಾಡಿ, ‘ಸೋಮಶೇಖರ್‌ಅವರು ಊಹಾಪೋಹದ ಹೇಳಿಕೆ ನೀಡುವುದು ಸರಿಯಲ್ಲ. ಪಕ್ಷ ತೊರೆಯುವವರು ಯಾವ ವಿಧಾನಸಭಾ ಕ್ಷೇತ್ರದ ಶಾಸಕರು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕಿತ್ತು. ಕಾಂಗ್ರೆಸ್‌ನ ಹತ್ತು ಅಥವಾ ಹದಿನೈದು ಶಾಸಕರು ಬಿಜೆಪಿ ಸೇರುತ್ತಾರೆ ಎಂದು ನಾವು ಹೇಳಿದರೆ ಸಮಂಜಸವೇ’ ಎಂದು ಪ್ರಶ್ನಿಸಿದರು.

‘ತತ್ವ, ಸಿದ್ಧಾಂತ ಒಪ್ಪಿ ಬರುವವರಿಗೆ ಸ್ವಾಗತ’

ಹುಬ್ಬಳ್ಳಿ: ‘ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತ ಮತ್ತು ನಾಯಕತ್ವ ಒಪ್ಪಿ ಬರುವವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗುವುದು’ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಬಿಜೆಪಿಯ ಶಾಸಕರು ಕಾಂಗ್ರೆಸ್ ಸೇರ್ಪಡೆ ಆಗುವ ಬಗ್ಗೆ ಸೋಮಶೇಖರ್ ನೀಡಿದ ಹೇಳಿಕೆಗೆ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಬಿಜೆಪಿಯ ದ್ವೇಷದ ರಾಜಕಾರಣಕ್ಕೆ ಅವರದ್ದೇ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಬೇಸರಗೊಂಡಿದ್ದಾರೆ. ಅವರ ಜನ ವಿರೋಧಿ ನೀತಿ ಸಹಿಸಲಾಗದೆ ಬಹುತೇಕರು ಕಾಂಗ್ರೆಸ್‌ನತ್ತ ಒಲವು ತೋರಿದ್ದಾರೆ. ಎಂಟು ಮಂದಿ ಬರುತ್ತಾರೋ, ಇಪ್ಪತ್ತೆಂಟು ಮಂದಿ ಬರುತ್ತಾರೋ ಅದು ದೊಡ್ಡ ವಿಷಯವಲ್ಲ’ ಎಂದರು.

ಶಿಗ್ಗಾವಿ ಬಂಡಾಯ ಶಮನ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಗ್ಗಾವಿ ಉಪ ಚುನಾವಣೆ ಟಿಕೆಟ್ ಕುರಿತು ಕೆಲವರು ಅಸಮಾಧಾನಗೊಂಡಿದ್ದಾರೆ. ಹೆಚ್ಚಿನ ಆಕಾಂಕ್ಷಿಗಳು ಇದ್ದಾಗ ಅದೆಲ್ಲ ಸಹಜ, ಶೀಘ್ರ ಬಂಡಾಯ ಶಮನವಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಮುಖಂಡರಾದ ಸೈಯದ್ ಅಜ್ಜಂಪೀರ್ ಖಾದ್ರಿ ಅವರು ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ. ಸಚಿವರಾದ ಜಮೀರ್ ಅಹಮದ್ ಖಾನ್, ರಹೀಂ ಖಾನ್ ಸೇರಿದಂತೆ ಆ ಜಿಲ್ಲೆಯ ನಾಯಕರು ಚರ್ಚೆ ನಡೆಸಿದ್ದಾರೆ. ಖಾದ್ರಿ ಅವರು ನಾಮಪತ್ರ ಹಿಂಪಡೆಯಲಿದ್ದು, ಎಲ್ಲರೂ ಒಟ್ಟಾಗಿ ಚುನಾವಣೆ ಎದುರಿಸುತ್ತೇವೆ’ ಎಂದರು.

ಮೂರನೇ ಸಲ ಅದೃಷ್ಟ ಪರೀಕ್ಷೆಗಿಳಿದ ನಿಖಿಲ್ • ರೋಡ್ ಷೋದಲ್ಲಿ ಜೆಡಿಎಸ್–ಬಿಜೆಪಿ ನಾಯಕರು ಭಾಗಿ

ಮೈತ್ರಿ ನಾಯಕರೊಂದಿಗೆ ನಿಖಿಲ್ ನಾಮಪತ್ರ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಶುಕ್ರವಾರ ನಾಮಪತ್ರ ಸಲ್ಲಿಸಿದರು. ಚುನಾವಣಾ ಸಮರದಲ್ಲಿ ಮೂರನೇ ಸಲ ಅದೃಷ್ಟ ಪರೀಕ್ಷೆಗಿಳಿದಿರುವ ಅವರ ನಾಮಪತ್ರ ಸಲ್ಲಿಕೆ ಕಾರ್ಯಕ್ರಮ ಎರಡೂ ಪಕ್ಷಗಳ ಭಾರಿ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಯಿತು.

ನಿಖಿಲ್ ತಂದೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಹಾಗೂ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಸಂಸದರಾದ ಡಾ.ಸಿ.ಎನ್. ಮಂಜುನಾಥ್, ಬಿ.ವೈ.ರಾಘವೇಂದ್ರ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಡಾ.ಸಿ. ಎನ್.ಅಶ್ವತ್ಥ ನಾರಾಯಣ ಸೇರಿದಂತೆ ಮೈತ್ರಿಕೂಟದ ನಾಯಕರ ದಂಡು ರೋಡ್ ಷೋಗೆ ಶಕ್ತಿ ತುಂಬಿತು.

ಬೈಕ್ ರ‍್ಯಾಲಿ: ತಾಲ್ಲೂಕಿನ ಕೆಂಗಲ್‌ನ ಆಂಜನೇಯ ದೇವಸ್ಥಾನದಲ್ಲಿ ಕುಟುಂಬದೊಂದಿಗೆ ಬೆಳಿಗ್ಗೆ ಪೂಜೆ ಸಲ್ಲಿಸಿದ ನಿಖಿಲ್ ಅವರನ್ನು ಕಾರ್ಯಕರ್ತರು ಬೈಕ್ ರ‍್ಯಾಲಿ ಮೂಲಕ ಚನ್ನಪಟ್ಟಣದವರೆಗೆ ಕರೆದೊಯ್ದರು. ಶೇರು ಹೋಟೆಲ್‌ನಲ್ಲಿ ಅಷ್ಟೊತ್ತಿಗಾಗಲೇ ಜಮಾಯಿಸಿದ್ದ ಸಾವಿರಾರು ಕಾರ್ಯಕರ್ತರಿಂದ ಅದ್ದೂರಿ ಸ್ವಾಗತ ಸಿಕ್ಕಿತು.

ತೆರೆದ ವಾಹನದಲ್ಲಿ ನಡೆದ ರೋಡ್ ಷೋನಲ್ಲಿ ಜೆಡಿಎಸ್ ಮತ್ತು ಬಿಜೆಪಿ ಬಾವುಟಗಳು ರಾರಾಜಿಸಿದವು. ಜಾನಪದ ಕಲಾತಂಡಗಳು ಕಾರ್ಯಕರ್ತರ ಉತ್ಸಾಹ ಇಮ್ಮಡಿಗೊಳಿಸಿದವು. ಪ್ರಧಾನಿ ಮೋದಿ, ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ, ಕುಮಾರಸ್ವಾಮಿ, ನಿಖಿಲ್ ಪರ ಕಾರ್ಯಕರ್ತರ ಘೋಷಣೆ ಮುಗಿಲು ಮುಟ್ಟಿದವು. ಸಾತನೂರು ವೃತ್ತದಲ್ಲಿ ನಾಯಕರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಹೆಗಲ ಮೇಲೆ ಹೊತ್ತೊಯ್ದರು: ತಂದೆ, ಪತ್ನಿ ಹಾಗೂ ಬಿಜೆಪಿ ನಾಯಕರೊಂದಿಗೆ ಚುನಾವಣಾಧಿಕಾರಿಗೆ ಮೂರು ಪ್ರತಿ ನಾಮಪತ್ರ ಸಲ್ಲಿಸಿ ಹೊರಬಂದ ನಿಖಿಲ್ ಅವರನ್ನು ಕಾರ್ಯಕರ್ತರು, ಹೆಗಲ ಮೇಲೆ ಹೊತ್ತುಕೊಂಡು ವಾಹನದವರೆಗೆ ಕರೆದೊಯ್ದರು. ಹೂವಿನ ಹಾರ ಹಾಕಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಅವರ ನಾಮಪತ್ರ ಸಲ್ಲಿಕೆ ರೋಡ್ ಷೋ ಮಂಗಳವಾರ ಪೇಟೆಯಿಂದ ಶುರುವಾಗಿ ಗಾಂಧಿ ಭವನ ಸರ್ಕಲ್‌ನಲ್ಲಿ ನಾಯಕರ ಭಾಷಣಕ್ಕೆ ಸಾಕ್ಷಿಯಾಗಿತ್ತು. ನಿಖಿಲ್ ಅವರ ರೋಡ್ ಷೋ ಅದಕ್ಕೆ ವಿರುದ್ಧವಾಗಿ ಶೇರು ಹೋಟೆಲ್‌ನಿಂದ ಆರಂಭವಾಯಿತು. ಸಾತನೂರು ವೃತ್ತದಲ್ಲಿ ನಾಯಕರ ಭಾಷಣ ಕಾರ್ಯಕ್ರಮ ಮುಗಿದ ಬಳಿಕ ಚುನಾವಣಾಧಿಕಾರಿ ಕಚೇರಿಯತ್ತ ಸಾಗಿತು.



ಚನ್ನಪಟ್ಟಣ ಉಪ ಚುನಾವಣೆ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರ ನಾಮಪತ್ರ ಸಲ್ಲಿಕೆಯ ರೋಡ್ ಷೋದಲ್ಲಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿದರು. ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಶಾಸಕ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ ಹಾಗೂ ಇತರರು ಇದ್ದಾರೆ – ಪ್ರಜಾವಾಣಿ ಚಿತ್ರ

> **ಲೋಕಸಭಾ ಚುನಾವಣೆಯ ಗೆಲುವಿನ ಯಾತ್ರೆ ಉಪ ಚುನಾವಣೆಯಲ್ಲೂ ಮುಂದುವರಿಯಬೇಕು. ಅದಕ್ಕಾಗಿ ಬಿಜೆಪಿ- ಜೆಡಿಎಸ್ ಕಾರ್ಯಕರ್ತರ ಹೃದಯಗಳು ಒಂದಾಗಬೇಕು**
> **ಡಾ. ಸಿ.ಎನ್.ಮಂಜುನಾಥ್,** ಸಂಸದ

> **ಮತದಾರರ ಅಭಿಮಾನವೇ ನನಗೆ ಶ್ರೀರಕ್ಷೆ. ಈ ಚುನಾವಣೆಯಲ್ಲಿ ನೀವು ಕೈಗೊಳ್ಳುವ ತೀರ್ಮಾನವು ಹಿಂದಿನ ಚುನಾವಣೆಗಳ ಸೋಲಿನ ಕಹಿ ಅಳಿಸುವ ವಿಶ್ವಾಸವಿದೆ**
> **ನಿಖಿಲ್ ಕುಮಾರಸ್ವಾಮಿ,** ಜೆಡಿಎಸ್ ಅಭ್ಯರ್ಥಿ

ಕುತಂತ್ರಕ್ಕೆ ಅಂತ್ಯ ಹಾಡಲು ಸಿದ್ಧ: ಎಚ್‌ಡಿಕೆ

‘ಕಾಂಗ್ರೆಸ್‌ನ ರಾಜಕೀಯ ಕುತಂತ್ರಕ್ಕೆ ಅಂತ್ಯ ಹಾಡಲು ಚನ್ನಪಟ್ಟಣದ ಜನ ಸಿದ್ಧರಾಗಿದ್ದಾರೆ. ನಮ್ಮ ಕಾರ್ಯಕರ್ತರಿಗೆ ನೋವು ಕೊಟ್ಟರೂ, ನೀವೇ ಅಭ್ಯರ್ಥಿಯಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗೆಲ್ಲಿ ಎಂದು ಈಗಿನ ಕಾಂಗ್ರೆಸ್ ಅಭ್ಯರ್ಥಿಗೆ (ಸಿ.ಪಿ.ಯೋಗೇಶ್ವರ್) ಹೇಳಿದ್ದೆ. ಆದರೆ, ಜೆಡಿಎಸ್ ಮತ್ತು ಬಿಜೆಪಿಗೆ ಟೋಪಿ ಹಾಕಿದರು’ ಎಂದು ಯೋಗೇಶ್ವರ್ ವಿರುದ್ಧ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

‘ನಿಮ್ಮ ಒತ್ತಾಯದಂತೆ ನಿಖಿಲ್‌ನನ್ನು ನಿಮ್ಮ ಮಡಿಲಿಗೆ ಹಾಕಿದ್ದೇನೆ. ಬಡವರ ಪರ ಆಡಳಿತಕ್ಕಾಗಿ ನನಗೆ ಆಶೀರ್ವದಿಸಿದಂತೆ ಆತನಿಗೂ ಆಶೀರ್ವದಿಸಿ. ನಿಮ್ಮ ನಿರ್ಣಯ ರಾಜ್ಯದಲ್ಲಿ ಬದಲಾವಣೆ ತರಲಿದೆ. ಇಂದು ಮುಸ್ಲಿಂ ಸಮುದಾಯದವರು ಸಹ ಬಂದು ಶಕ್ತಿ ನೀಡಿದ್ದಾರೆ. ಜಿಲ್ಲೆಗೆ ನಾನೇನು ಮಾಡಿದ್ದೇನೆ ಎಂದು ಸಾಕ್ಷಿಗುಡ್ಡೆ ಕೇಳುತ್ತಿರುವವರು ರೇಷ್ಮೆ ಮಾರುಕಟ್ಟೆ, ಎಂಜಿನಿಯರಿಂಗ್ ಕಾಲೇಜು, ಮಾವು ಸಂಸ್ಕರಣಾ ಘಟಕ ಯಾರಿಂದ ಬಂತು ಎಂದು ಪ್ರಶ್ನಿಸಿಕೊಳ್ಳಲಿ. ನನ್ನ ಹಳೆ ಗೆಳೆಯರು ಯೋಗೇಶ್ವರ್ ಅವರನ್ನು ತಬ್ಬಿಕೊಂಡು ತಿರುಗುತ್ತಿರುವುದನ್ನು ನೋಡಿದರೆ ನಗು ಬರುತ್ತದೆ. ಅವರ ಆಟವನ್ನು ದೇವರು ಗಮನಿಸುತ್ತಿದ್ದಾನೆ’ ಎಂದರು.

2028ರ ಚುನಾವಣೆ ದಿಕ್ಸೂಚಿ: ‘ಉಪ ಚುನಾವಣೆಯು 2028ರ ಚುನಾವಣೆ ದಿಕ್ಸೂಚಿಯಾಗಲಿದೆ. ಸತತ ಎರಡು ಬಾರಿ ಸೋತರೂ ಬಿಜೆಪಿ–ಜೆಡಿಎಸ್ ಗೌರವ ಉಳಿಸಲು ಕಣಕ್ಕಿಳಿದಿರುವ ನಿಖಿಲ್ ಕುಮಾರಸ್ವಾಮಿ ಅವರ ಎದೆಗಾರಿಕೆ ಹಾಗೂ ಛಲ ಮೆಚ್ಚಬೇಕು. ಕುಮಾರಸ್ವಾಮಿ ಅವರಿಗೆ ಸೇರಿದ ಕ್ಷೇತ್ರವನ್ನು ಮತ್ತೆ ಅವರ ಕೈಸೇರಲು ಎರಡೂ ಪಕ್ಷದವರು ಶ್ರಮಿಸಬೇಕು. ಅಧಿಕಾರ ಹಾಗೂ ದರ್ಪದಿಂದ ಚುನಾವಣೆ ಗೆಲ್ಲಬಹುದು ಎಂದುಕೊಂಡಿರುವವರನ್ನು ಸೋಲಿಸಿ ದೇಶಕ್ಕೆ ಸಂದೇಶ ನೀಡಬೇಕು’ ಎಂದು ಚಿಕ್ಕಬಳ್ಳಾಪುರ ಸಂಸದ ಡಾ.ಕೆ.ಸುಧಾಕರ್ ಹೇಳಿದರು.

‘ಜನರಿಗೆ ಕಣ್ಣೀರು ನೋಡಿ ಸಾಕಾಗಿದೆ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಪ್ರತಿ ಸಲವೂ ಭಾವನಾತ್ಮಕ ಮಾತು, ಕಣ್ಣೀರು ಹಾಕುವುದು ನೋಡಿ ಜನ ಬೇಸತ್ತಿದ್ದಾರೆ. ಇದಕ್ಕೆಲ್ಲ ಮತದಾರರು ಮಾರು ಹೋಗುವುದಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಕಿದರು.

‘ನಿಖಿಲ್ ಕುಮಾರಸ್ವಾಮಿಯನ್ನು ನಿಮ್ಮ ಮಡಿಲಿಗೆ ಹಾಕಿರುವೆ’ ಎನ್ನುವ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಅವರು ಚನ್ನಪಟ್ಟಣದಲ್ಲಿ ಮಾಡಿದ ಭಾಷಣ ವಿಷಯವಾಗಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಎಲ್ಲ ಸಂದರ್ಭದಲ್ಲೂ ಅಳು ನೋಡಿ ಜನರು ಮತ ಹಾಕಲ್ಲ. ಅವರಿಗೂ ಸಾಕಾಗಿದೆ. ಮತದಾರರ ಆಶೀರ್ವಾದ ನಮ್ಮ ಮೇಲಿದೆ’ ಎಂದರು.

‘ಉಪ ಚುನಾವಣೆಯ ಮೂರು ಕ್ಷೇತ್ರಗಳಲ್ಲಿ ನಾವು ಗೆಲ್ಲಲಿದ್ದು, ಸಮರ್ಥ ಅಭ್ಯರ್ಥಿಗಳನ್ನು ಪಕ್ಷದಿಂದ ಕಣಕ್ಕಿಳಿಸಿದ್ದೇವೆ. ಒಳ ಒಪ್ಪಂದದ ರಾಜಕಾರಣ ಬಿಜೆಪಿ ಮಾಡುತ್ತದೆ ಹೊರತು ಕಾಂಗ್ರೆಸ್ ಅಲ್ಲ. ಚುನಾವಣೆಯಲ್ಲಿ ಸೋಲಲೆಂದೇ ಬಿಜೆಪಿಯವರು ಒಳಒಪ್ಪಂದ ಮಾಡಿಕೊಳ್ಳುತ್ತಾರೆ. ಶಿಗ್ಗಾವಿಯಲ್ಲಿ ನಾವು ಗೆಲ್ಲುವ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ’ ಎಂದರು.



ಸಿದ್ದರಾಮಯ್ಯ

‘ಶಿಗ್ಗಾವಿಯಲ್ಲಿ ನಮಗೆ ಎದುರಾಳಿ ಅಭ್ಯರ್ಥಿಯೇ ಇಲ್ಲ’ ಎಂಬ ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಕಳೆದ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಯಲ್ಲಿ ನಾವು ಬಿಜೆಪಿಗೆ ತೀವ್ರ ಸ್ಪರ್ಧೆ ಒಡ್ಡಿದ್ದೆವು. ಎದುರಾಳಿಯೇ ಅಲ್ಲದಿದ್ದರೆ ಹೆಚ್ಚು ಮತಗಳು ಹೇಗೆ ಬಂದವು? ಬೊಮ್ಮಾಯಿ ಸ್ಪರ್ಧಿಸಿದ್ದ ಶಿಗ್ಗಾವಿ ಕ್ಷೇತ್ರದಲ್ಲೇ ಹೆಚ್ಚು ಮತಗಳು ಬಂದಿವೆ. ನಮಗೆ ಅಲ್ಲಿ ಬಿಜೆಪಿ ಎದುರಾಳಿಯಲ್ಲ’ ಎಂದರು.

‘ಶಿಗ್ಗಾವಿ ವಿಧಾನಸಭಾ ಕ್ಷೇತ್ರಕ್ಕೆ ಯಾಸಿನ್ ಪಠಾಣ್ ಮತ್ತು ಅಜ್ಜಂಪೀರ್ ಖಾದ್ರಿ ಇಬ್ಬರೂ ಟಿಕೆಟ್ ಆಕಾಂಕ್ಷಿ ಆಗಿದ್ದರು. ಇಬ್ಬರೂ ಸಮರ್ಥ ಅಭ್ಯರ್ಥಿಗಳೇ. ಕಳೆದ ಬಾರಿ ಪಠಾಣ್ ಅವರಿಗೆ ಟಿಕೆಟ್ ನೀಡಲಾಗಿತ್ತು, ಹೀಗಾಗಿ ಈ ಉಪ ಚುನಾವಣೆಯಲ್ಲೂ ಅವರಿಗೆ ಟಿಕೆಟ್ ನೀಡಲಾಗಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

ಶತಕೋಟಿ ದಾಟಿದ ನಿಖಿಲ್ ಆಸ್ತಿ ಮೊತ್ತ



ಪಕ್ಷ: ಜೆಡಿಎಸ್
ಶಿಕ್ಷಣ: ಬಿಬಿಎಂ
ಒಟ್ಟು ಆಸ್ತಿ ಮೌಲ್ಯ: ₹107.49 ಕೋಟಿ
ಚರಾಸ್ತಿ: ₹29.34 ಕೋಟಿ
ಸ್ಥಿರಾಸ್ತಿ: ₹78.14 ಕೋಟಿ
ಕಳೆದ ಚುನಾವಣೆಯಲ್ಲಿದ್ದ ಆಸ್ತಿ: ₹74.81 ಕೋಟಿ
ಈಗ ಎಷ್ಟು ಹೆಚ್ಚಳ: ₹37 ಕೋಟಿ
ಸಾಲ: ₹70.44 ಕೋಟಿ
• ಕೈಯಲ್ಲಿರುವ ನಗದು: ₹4.66 ಲಕ್ಷ
ಅಪರಾಧ ಪ್ರಕರಣ: ಇಲ್ಲ
ಪತ್ನಿ ರೇವತಿ ಆಸ್ತಿ ಮೌಲ್ಯ: ₹5.93 ಕೋಟಿ
ಚರಾಸ್ತಿ: ₹5.49 ಕೋಟಿ • ಸ್ಥಿರಾಸ್ತಿ: ₹43.43 ಲಕ್ಷ
ಸಾಲ: ₹4.96 ಕೋಟಿ • ಕೈಯಲ್ಲಿರುವ ನಗದು: ₹3.53 ಲಕ್ಷ
ಪುತ್ರ ಅವ್ಯನ್ ದೇವ್ ಹೆಸರಿನಲ್ಲಿ ₹11.91 ಲಕ್ಷ ಠೇವಣಿ ಇದೆ.
ಕುಟುಂಬದ ಒಟ್ಟು ಆಸ್ತಿ ಮೌಲ್ಯ (ನಿಖಿಲ್, ಪತ್ನಿ, ಪುತ್ರ ಸೇರಿ): ₹113.54 ಕೋಟಿ
ಕಳೆದ ಚುನಾವಣೆ ಸಂದರ್ಭದಲ್ಲಿದ್ದ ಆಸ್ತಿ ಮೌಲ್ಯ: ₹76.89 ಕೋಟಿ
ಹೆಚ್ಚಳ: ₹36.65 ಕೋಟಿ

• ನಿಖಿಲ್ ಬಳಿ 1 ರೇಂಜ್ ರೋವರ್, 2 ವ್ಯಾನಿಟಿ ವ್ಯಾನ್ ಸೇರಿ 5 ವಾಹನಗಳಿವೆ. 1.5 ಕೆ.ಜಿ ಚಿನ್ನ, 16 ಕೆ.ಜಿ ಬೆಳ್ಳಿ ಇದೆ. ಕೃಷಿ ಮತ್ತು ಕೃಷಿಯೇತರ ಜಮೀನು ಸೇರಿ ₹78.14 ಕೋಟಿ ಸ್ಥಿರಾಸ್ತಿ ಇದೆ. ಪತ್ನಿ ರೇವತಿ ಬಳಿ 1.5 ಕೆ.ಜಿ ಚಿನ್ನ, 33.5 ಕೆ.ಜಿ ಬೆಳ್ಳಿ, 13 ಕ್ಯಾರೆಟ್ ವಜ್ರ ಸೇರಿ ₹5.49 ಕೋಟಿ ಸ್ಥಿರಾಸ್ತಿ ಇದೆ

• ನಿಖಿಲ್ ತಮ್ಮ ತಂದೆ ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ₹1.74 ಕೋಟಿ, ಪತ್ನಿ ರೇವತಿಗೆ ₹4.46 ಕೋಟಿ ಸಾಲ ನೀಡಿದ್ದಾರೆ. ತಾಯಿ ಅನಿತಾ ಅವರಿಂದ ₹4.70 ಕೋಟಿ ಸಾಲ ಪಡೆದುಕೊಂಡಿದ್ದಾರೆ. 2024–25ನೇ ಸಾಲಿನಲ್ಲಿ ನಿಖಿಲ್ ₹1.69 ಕೋಟಿ ಆದಾಯ ಹಾಗೂ ರೇವತಿ ₹7.38 ಲಕ್ಷ ಆದಾಯ ತೋರಿಸಿದ್ದಾರೆ.

ಶಿಗ್ಗಾವಿ ಕ್ಷೇತ್ರ: ಅಭ್ಯರ್ಥಿಗಳ ಆಸ್ತಿ ವಿವರ

ಯಾಸೀರ್ ಅಹಮದ್ ಖಾನ್



ಕ್ಷೇತ್ರ; ಶಿಗ್ಗಾವಿ
ಪಕ್ಷ; ಕಾಂಗ್ರೆಸ್
ಶಿಕ್ಷಣ; ಬಿ.ಎ
ಒಟ್ಟು ಆಸ್ತಿ ಮೌಲ್ಯ; ₹48.37 ಲಕ್ಷ
ಚರಾಸ್ತಿ; ₹6.02 ಲಕ್ಷ
ಸ್ಥಿರಾಸ್ತಿ; ₹ 42.35 ಲಕ್ಷ
ಕೈಯಲ್ಲಿರುವ ನಗದು; ₹ 85 ಸಾವಿರ
ಅಪರಾಧ ಪ್ರಕರಣ; ಇಲ್ಲ
ಪತ್ನಿ ಸಾಯಿದಾಬಾನು ಒಟ್ಟು ಆಸ್ತಿ; ₹ 2.56 ಕೋಟಿ
ಕುಟುಂಬದ ಒಟ್ಟು ಆಸ್ತಿ (ಪತ್ನಿ ಸೇರಿ); ₹ 3.04 ಕೋಟಿ

ಮಂಜುನಾಥ ಕುನ್ನೂರು



ಕ್ಷೇತ್ರ; ಶಿಗ್ಗಾವಿ
ಪಕ್ಷ; ಪಕ್ಷೇತರ (ಕಾಂಗ್ರೆಸ್ ಬಂಡಾಯ)
ಶಿಕ್ಷಣ; ಬಿ.ಎಸ್ಸಿ ಮತ್ತು ಎಲ್‌.ಎಲ್‌.ಬಿ
ಒಟ್ಟು ಆಸ್ತಿ ಮೌಲ್ಯ; ₹3.86 ಕೋಟಿ
ಚರಾಸ್ತಿ; ₹ 1.36 ಕೋಟಿ
ಸ್ಥಿರಾಸ್ತಿ; ₹ 2.50 ಕೋಟಿ
ಕೈಯಲ್ಲಿರುವ ನಗದು; ₹ 15 ಲಕ್ಷ
ಅಪರಾಧ ಪ್ರಕರಣ; ಇಲ್ಲ
ಪತ್ನಿ ಒಟ್ಟು ಆಸ್ತಿ; ₹ 3.50 ಕೋಟಿ
ಕುಟುಂಬದ ಒಟ್ಟು ಆಸ್ತಿ (ಪತ್ನಿ ಸೇರಿ); ₹ 7.36 ಕೋಟಿ

ಸೈಯದ್ ಅಜ್ಜಂಪೀರ್ ಖಾದ್ರಿ



ಕ್ಷೇತ್ರ; ಶಿಗ್ಗಾವಿ
ಪಕ್ಷ; ಪಕ್ಷೇತರ (ಕಾಂಗ್ರೆಸ್ ಬಂಡಾಯ)
ಶಿಕ್ಷಣ; ಪಿಯುಸಿ
ಒಟ್ಟು ಆಸ್ತಿ ಮೌಲ್ಯ; ₹1.14 ಕೋಟಿ
ಚರಾಸ್ತಿ; ₹ 30.50 ಲಕ್ಷ
ಸ್ಥಿರಾಸ್ತಿ; ₹ 84.00 ಲಕ್ಷ
ಸಾಲ: ₹ 14.56 ಲಕ್ಷ
ಕೈಯಲ್ಲಿರುವ ನಗದು; ₹ 50 ಸಾವಿರ
ಅಪರಾಧ ಪ್ರಕರಣ; 1 (ಹುಲಗೂರು ಠಾಣೆ)
ಪತ್ನಿ ಸೈಯದಾ ಫಮೀದಾ ಒಟ್ಟು ಆಸ್ತಿ; ₹ 1.30 ಕೋಟಿ
ಮಕ್ಕಳ ಹೆಸರಿನಲ್ಲಿರುವ ಆಸ್ತಿ; ₹ 1.95 ಲಕ್ಷ
ಕುಟುಂಬದ ಒಟ್ಟು ಆಸ್ತಿ (ಪತ್ನಿ, ಮಕ್ಕಳು ಸೇರಿ); ₹ 1.17 ಕೋಟಿ

ರವಿ ಕೃಷ್ಣಾರೆಡ್ಡಿ



ಕ್ಷೇತ್ರ; ಶಿಗ್ಗಾವಿ
ಪಕ್ಷ; ಕೆಆರ್‌ಎಸ್
ಶಿಕ್ಷಣ; ಎಂ.ಇ
ಒಟ್ಟು ಆಸ್ತಿ ಮೌಲ್ಯ; ₹1.87 ಕೋಟಿ
ಚರಾಸ್ತಿ; ₹ 16.93 ಲಕ್ಷ
ಸ್ಥಿರಾಸ್ತಿ; ₹ 1.70 ಕೋಟಿ
ಸಾಲ: ₹ 12.50 ಲಕ್ಷ
ಕೈಯಲ್ಲಿರುವ ನಗದು; ₹ 15 ಸಾವಿರ
ಅಪರಾಧ ಪ್ರಕರಣ; 6
ಪತ್ನಿ ಒಟ್ಟು ಆಸ್ತಿ; ₹ 6.30 ಕೋಟಿ
ಕುಟುಂಬದ ಒಟ್ಟು ಆಸ್ತಿ (ಪತ್ನಿ, ಮಕ್ಕಳು ಸೇರಿ); ₹ 8.30 ಕೋಟಿ

ಶಕ್ತಿ ಪ್ರದರ್ಶಿಸಿದ ಭರತ್–ಯಾಸೀರ್

ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ • ಕೊನೆಯ ದಿನದಂದೂ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಶಿಗ್ಗಾವಿ (ಹಾವೇರಿ ಜಿಲ್ಲೆ): ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಅವರು ತಮ್ಮ ಪಕ್ಷದ ನಾಯಕರ ನೇತೃತ್ವದಲ್ಲಿ ಶುಕ್ರವಾರ ಮೆರವಣಿಗೆ ಮೂಲಕ ಶಕ್ತಿ ಪ್ರದರ್ಶನ ಮಾಡಿ, ನಾಮಪತ್ರ ಸಲ್ಲಿಸಿದರು.

ಬಿಜೆಪಿಯ ಮೆರವಣಿಗೆಯಲ್ಲಿ ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಅರವಿಂದ ಬೆಲ್ಲದ, ಛಲವಾದಿ ನಾರಾಯಣಸ್ವಾಮಿ, ಭೈರತಿ ಬಸವರಾಜ್, ಮುರುಗೇಶ ನಿರಾಣಿ, ಶಿವಕುಮಾರ ಉದಾಸಿ ಹಾಜರಿದ್ದರು.

ಅಭ್ಯರ್ಥಿ ಭರತ್ ಬೊಮ್ಮಾಯಿ ಮಾತನಾಡಿ, ‘ಕ್ಷೇತ್ರ ಅಭಿವೃದ್ಧಿಗಾಗಿ ತಂದೆ ಬಸವರಾಜ ಬೊಮ್ಮಾಯಿ ಅವರು ಕಂಡ ಕನಸನ್ನು ನನಸು ಮಾಡುವುದೇ ನನ್ನ ಕೆಲಸ. ಕ್ಷೇತ್ರದ ರೈತರು, ಹಿಂದುಳಿದವರು, ಪರಿಶಿಷ್ಟ ಜಾತಿ–ಪಂಗಡದವರು ಸೇರಿದಂತೆ ಎಲ್ಲರ ಏಳ್ಗೆಗಾಗಿ ಶ್ರಮಿಸುವೆ. ಪ್ರತಿಯೊಬ್ಬರು ಮತದ ರೂಪದಲ್ಲಿ ನನಗೆ ಆಶೀರ್ವಾದಿಸಬೇಕು’ ಎಂದರು.

ತರಾತುರಿಯಲ್ಲಿ ನಾಮಪತ್ರ ಸಲ್ಲಿಕೆ: ಗುರುವಾರ ತಡವಾಗಿ ಟಿಕೆಟ್ ಘೋಷಣೆಯಾಗಿದ್ದರಿಂದ ಬೆಂಗಳೂರಿನಿಂದ ಶಿಗ್ಗಾವಿಗೆ ಶುಕ್ರವಾರ ನಸುಕಿನಲ್ಲಿ ಬಂದ ಯಾಸೀರ್ ಅಹ್ಮದ್ ಖಾನ್, ತರಾತುರಿಯಲ್ಲಿ ಬೆಳಿಗ್ಗೆಯೇ ಸೂಚಕರ ಜೊತೆ ಸೇರಿ ಚುನಾವಣಾಧಿಕಾರಿಗೆ ಮೊದಲ ನಾಮಪತ್ರ ಸಲ್ಲಿಸಿದರು. ಮಧ್ಯಾಹ್ನ ಮುಖಂಡರ ಜೊತೆ ಸೇರಿ ಎರಡನೇ ಬಾರಿ ಉಮೇದುವಾರಿಕೆ ಸಲ್ಲಿಸಿದರು.

ಕಾಂಗ್ರೆಸ್ ಮೆರವಣಿಗೆಯಲ್ಲಿ ಸಚಿವರಾದ ಈಶ್ವರ ಖಂಡ್ರೆ, ಸತೀಶ ಜಾರಕಿಹೊಳಿ, ಜಮೀರ್ ಅಹ್ಮದ್ ಖಾನ್, ಶಿವಾನಂದ ಪಾಟೀಲ, ಶಾಸಕರಾದ ಪ್ರಕಾಶ ಕೋಳಿವಾಡ, ಶ್ರೀನಿವಾಸ್ ಮಾನೆ, ರುದ್ರಪ್ಪ ಲಮಾಣಿ, ಯು.ಬಿ. ಬಣಕಾರ, ಮುಖಂಡರಾದ ಸಲೀಂ ಅಹ್ಮದ್, ವಿನೋದ ಅಸೂಟಿ ಹಾಜರಿದ್ದರು.

ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಮಾತನಾಡಿ, ‘ನಾನು ಸಿ.ಎಂ ಮಗನಲ್ಲ. ಸಾಮಾನ್ಯ ರೈತ ಕುಟುಂಬದ ಮಗ. ನನ್ನಂಥ ಸಾಮಾನ್ಯ ಕಾರ್ಯಕರ್ತನಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದಕ್ಕೆ ಕೃತಜ್ಞತೆಗಳು. ಜನರ ಸಮಸ್ಯೆಗಳ ಅರಿವು ನನಗಿದೆ. ಸೋತರೂ ಕ್ಷೇತ್ರದಲ್ಲಿದ್ದು, ಸಂಘಟನೆ ಮಾಡಿದ್ದೇನೆ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ’ ಎಂದರು.

> **ಕ್ಷೇತ್ರದಲ್ಲಿ ಕಾರ್ಯಕರ್ತರ ಉತ್ಸಾಹ ನೋಡಿದರೆ ಗೆಲುವು ಖಚಿತವಾಗಿದೆ. ಬಸವರಾಜ ಬೊಮ್ಮಾಯಿ ಅವರಿಗಿಂತಲೂ ಹೆಚ್ಚಿನ ಮತಗಳ ಅಂತರದಲ್ಲಿ ಭರತ್ ಅವರನ್ನು ಗೆಲ್ಲಿಸಬೇಕು**
> **ಬಿ.ಎಸ್. ಯಡಿಯೂರಪ್ಪ**
> ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

> **ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿರುವುದಾಗಿ ಬಸವರಾಜ ಬೊಮ್ಮಾಯಿ ಸುಳ್ಳು ಹೇಳುತ್ತಿದ್ದಾರೆ. ಅವರು ಒಂದೇ ಒಂದು ಮನೆ ಕೊಟ್ಟಿರುವುದನ್ನು ತೋರಿಸಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ**
> **ಜಮೀರ್ ಅಹಮದ್ ಖಾನ್,** ಸಚಿವ

> **ಶ್ರೀಕಾಂತ್ ದುಂಡಿಗೌಡ್ರಗೆ ಟಿಕೆಟ್ ಕೊಡಿಸುವುದಾಗಿ ಹೇಳಿ ದೆಹಲಿಗೆ ಕರೆದುಕೊಂಡು ಹೋಗಿ ಬಂದಿದ್ದ ಬೊಮ್ಮಾಯಿ, ಕೊನೆಗೆ ಮಗನಿಗೆ ಟಿಕೆಟ್ ಕೊಡಿಸಿದರು.**
> **ಶಿವಾನಂದ ಪಾಟೀಲ**
> ಜಿಲ್ಲಾ ಉಸ್ತುವಾರಿ ಸಚಿವ

> **ಕ್ಷೇತ್ರದ ಅಭಿವೃದ್ಧಿ ಮುಂದುವರಿಯಲು ಹಾಗೂ ಜನರ ರಕ್ಷಣೆಗೆ ಭರತ್‌ಗೆ ಆಶೀರ್ವಾದ ಮಾಡಿ. ಅಧಿಕಾರ ಇರಲಿ ಬಿಡಲಿ, ಜೀವ ಇರುವ ತನಕ ನಿಮ್ಮ ಸೇವೆ ಮಾಡುತ್ತೇನೆ**
> **ಬಸವರಾಜ ಬೊಮ್ಮಾಯಿ**
> ಹಾವೇರಿ ಸಂಸದ





ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ಶುಕ್ರವಾರ ನಾಮಪತ್ರ ಸಲ್ಲಿಕೆಗೂ ಮುನ್ನ ಮೆರವಣಿಗೆ ನಡೆಸಿದರು (ಎಡಚಿತ್ರ) ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್‌ಖಾನ್ ಪಠಾಣ ಅವರು ಶುಕ್ರವಾರ ಮುಖಂಡರು–ಕಾರ್ಯಕರ್ತರ ಜೊತೆ ಮೆರವಣಿಗೆ ನಡೆಸಿದರು

ರಾಜಕೀಯ ದಿಕ್ಕು ಬದಲಿಸುವ ಚುನಾವಣೆ: ವಿಜಯೇಂದ್ರ

ಹನುಮಂತ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ ಜಿಲ್ಲೆ): ಸಂಡೂರು ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿಯಾಗಿ ಪಕ್ಷದ ರಾಜ್ಯ ಎಸ್‌.ಟಿ ಮೋರ್ಚಾದ ಅಧ್ಯಕ್ಷ ಬಂಗಾರು ಹನುಮಂತ ಶುಕ್ರವಾರ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ನಡೆದ ಮೆರವಣಿಗೆಯು ಪಕ್ಷದ ಶಕ್ತಿ, ನಾಯಕರ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಾಯಿತು.

ಸಂಡೂರಿನ ಎಪಿಎಂಸಿ ಪ್ರಾಂಗಣದಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡರು. ಅಲ್ಲಿಂದ ಚುನಾವಣಾಧಿಕಾರಿ ಕಚೇರಿ ಅಂತರ ಒಂದು ಕಿಲೋಮೀಟರ್ ಆಗಿದ್ದರೂ ಸ್ಥಳ ತಲುಪಲು ಮೂರು ಗಂಟೆಗೂ ಹೆಚ್ಚು ಸಮಯ ಬೇಕಾಯಿತು.

ಟಿಕೆಟ್ ಹಂಚಿಕೆ, ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ಬಳ್ಳಾರಿಯ ಪ್ರಮುಖ ನಾಯಕರಲ್ಲಿ ಮುನಿಸು ಇಲ್ಲ ಎಂದು ಹೇಳಲು ಮತ್ತು ಕಾರ್ಯಕರ್ತರಲ್ಲಿನ ಗೊಂದಲ ನಿವಾರಿಸಲು ಪ್ರಯತ್ನಿಸಲಾಯಿತು.

ಚುನಾವಣೆ ಪ್ರಚಾರದಲ್ಲಿ ಭಾಗಿಯಾಗಿರದ ಶ್ರೀರಾಮುಲು ಮತ್ತು ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ದಿವಾಕರ್, ಶಾಸಕ ಜನಾರ್ದನ ರೆಡ್ಡಿ, ಅನಿಲ್ ಲಾಡ್ ಮುಂತಾದವರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವ ವಹಿಸಿದರು. ಆದರೆ, ಪ್ರಮುಖ ನಾಯಕ ಕಾರ್ತಿಕ್ ಘೋರ್ಪಡೆ ಗೈರಾಗಿದ್ದರು.

ಅಭ್ಯರ್ಥಿ ಬಂಗಾರು ಹನುಮಂತ ಮಾತನಾಡಿ, ‘ಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಎಲ್ಲ ನಾಯಕರೂ ಒಟ್ಟಾಗಿ ಈ ಚುನಾವಣೆ ಗೆಲ್ಲುತ್ತೇವೆ’ ಎಂದರು.

ಪಕ್ಷದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಮಾತನಾಡಿ, ‘ರಾಜ್ಯ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಎದ್ದಿದೆ. ಸಾಲು ಸಾಲು ಹಗರಣಗಳನ್ನು ಬಿಜೆಪಿ ಬಯಲಿಗೆಳೆದಿದೆ. ‘ಗ್ಯಾರಂಟಿ’ಗಳ ಹೆಸರಲ್ಲಿ ಚುನಾವಣೆ ನಡೆಯುತ್ತಿದೆ. ಚನ್ನಪಟ್ಟಣ, ಸಂಡೂರು ಮತ್ತು ಶಿಗ್ಗಾವಿಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳೇ ಗೆಲುವು ಸಾಧಿಸುವರು. ರಾಜ್ಯ ರಾಜಕೀಯದ ದಿಕ್ಕನ್ನು ಈ ಉಪಚುನಾವಣೆ ಫಲಿತಾಂಶ ಬದಲಿಸಲಿದೆ’ ಎಂದರು.



ಸಂಡೂರು ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಅವರು ಮೆರವಣಿಗೆಯಲ್ಲಿ ತೆರಳಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ, ಶಾಸಕ ಜನಾರ್ದನ ರೆಡ್ಡಿ, ಪಕ್ಷದ ಮುಖಂಡ ಬಿ. ಶ್ರೀರಾಮುಲು, ಭಗವಂತ ಖೂಬಾ ಮತ್ತಿತರರು ಇದ್ದರು

ಆಯ್ಕೆ ಪ್ರಶ್ನಿಸಿದ ಅರ್ಜಿ: ಯತ್ನಾಳಗೆ ‘ಸುಪ್ರೀಂ’ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಜಯಪುರ ನಗರ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ ಆಯ್ಕೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಲು ‘ಸುಪ್ರೀಂ’ ಕೋರ್ಟ್ ಶುಕ್ರವಾರ ಅಂಗೀಕರಿಸಿದೆ. ಯತ್ನಾಳ ಅವರಿಗೆ ನ್ಯಾಯಪೀಠ ನೋಟಿಸ್ ಜಾರಿ ಮಾಡಿದೆ.



ಯತ್ನಾಳ್

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದ ಅಬ್ದುಲ್ ಹಮೀದ್ ಮುಶ್ರೀಫ್ ಅವರು ಯತ್ನಾಳ ಆಯ್ಕೆ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಕೆಲವು ನ್ಯೂನತೆಗಳನ್ನು ಸರಿಪಡಿಸದೆ ಅರ್ಜಿ ಸಲ್ಲಿಸಲಾಗಿದೆ ಎಂಬ ಕಾರಣಕ್ಕೆ ಅರ್ಜಿದಾರರಿಗೆ ನ್ಯಾಯಪೀಠ ₹1 ಲಕ್ಷ ದಂಡ ವಿಧಿಸಿತ್ತು.

ಈ ಆದೇಶ ಪ್ರಶ್ನಿಸಿ ಮುಶ್ರೀಫ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ವಿಷಯದ ಬಗ್ಗೆ ಹೈಕೋರ್ಟ್ ಹೆಚ್ಚು ಸಮಗ್ರ ದೃಷ್ಟಿಕೋನದಿಂದ ನೋಡಬೇಕು ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ಮೇಲ್ಮನವಿಯನ್ನು ಅಂಗೀಕರಿಸಿತು. ಆದರೆ, ದಂಡ ವಿಧಿಸಿದ್ದನ್ನು ರದ್ದುಗೊಳಿಸಲು ನಿರಾಕರಿಸಿತು.

3 ಕ್ಷೇತ್ರ: ಇನ್ನು ಪ್ರಚಾರದ ಅಬ್ಬರ

ಒಂದನೇ ಪುಟದಿಂದ...

ಇದಕ್ಕೆ ಸವಾಲು ಒಡ್ಡುವ ರೀತಿಯಲ್ಲಿ ಭಾರಿ ಜನಸ್ತೋಮದೊಂದಿಗೆ ನಿಖಿಲ್ ಕುಮಾರಸ್ವಾಮಿಯವರನ್ನು ಮೆರವಣಿಗೆಯಲ್ಲಿ ಕರೆದೊಯ್ದ ಜೆಡಿಎಸ್, ತನ್ನ ಭದ್ರ ನೆಲೆಯಲ್ಲಿ ಶಕ್ತಿ ಹೇಗಿದೆ ಎಂದು ತೋರಿಸುವ ಯತ್ನ ಮಾಡಿತು. ತಮ್ಮ ಅಜ್ಜ ಎಚ್‌.ಡಿ. ದೇವೇಗೌಡರು ಹಾಗೂ ಅಪ್ಪ ಕುಮಾರಸ್ವಾಮಿ ಜತೆಗೆ ಬೆಂಗಳೂರಿನಲ್ಲಿ ದೇವರ ಪೂಜೆ ನೆರವೇರಿಸಿದ ನಿಖಿಲ್, ಕುಟುಂಬಸ್ಥರೊಂದಿಗೆ ಚನ್ನಪಟ್ಟಣಕ್ಕೆ ತೆರಳಿದರು. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಅವರು ಸ್ಪರ್ಧಿಸಿರುವುದರಿಂದಾಗಿ, ಅವರು ನಾಮಪತ್ರ ಸಲ್ಲಿಸುವಾಗ ವಿರೋಧ ಪಕ್ಷದ ನಾಯಕ ಆರ್‌. ಅಶೋಕ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಹಾಗೂ ಹಿಂದೆ ಜಿಲ್ಲಾ ಉಸ್ತುವಾರಿಯಾಗಿದ್ದ ಸಿ.ಎನ್‌. ಅಶ್ವತ್ಥನಾರಾಯಣ ಜತೆಗೂಡಿದ್ದರು. ಅತ್ತ ಶಿಗ್ಗಾವಿಯಲ್ಲಿ ಭರತ್ ಬೊಮ್ಮಾಯಿ ನಾಮಪತ್ರ ಸಲ್ಲಿಸುವ ವೇಳೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಗೋವಿಂದ ಕಾರಜೋಳ, ಅಭ್ಯರ್ಥಿಯ ತಂದೆ ಬಸವರಾಜ ಬೊಮ್ಮಾಯಿ ಜತೆಯಾದರು. ಸಂಡೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತು ಭಾರಿ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವ ಬಿ. ಶ್ರೀರಾಮುಲು, ಶಾಸಕ ಜಿ. ಜನಾರ್ದನ ರೆಡ್ಡಿ ಅವರ ಜತೆಗೆ ಸಾಗಿದರು.

ಮಹಾರಾಷ್ಟ್ರ: ಮಹಾಯುತಿ ಮೈತ್ರಿಕೂಟ ಸೀಟು ಹಂಚಿಕೆ • ಫಡಣವೀಸ್ ನಾಮಪತ್ರ ಸಲ್ಲಿಕೆ

11 ಸ್ಥಾನಗಳಿಗೆ ಮುಂದುವರಿದ ಜಗ್ಗಾಟ

ಮುಂಬೈ/ ನಾಗಪುರ (ಪಿಟಿಐ): ಆಡಳಿತರೂಢ ಮಹಾಯುತಿ ಮೈತ್ರಿಕೂಟವು ಮಹಾರಾಷ್ಟ್ರ ವಿಧಾನ ಸಭೆ ಚುನಾವಣೆಯಲ್ಲಿ ಇನ್ನುಳಿದ 11 ಸೀಟುಗಳ ಹಂಚಿಕೆಗೆ ಸಂಬಂಧಿಸಿದಂತೆ ಮಾತುಕತೆ ಮುಂದುವರಿಸಿವೆ ಎಂದು ಎನ್‌ಸಿಪಿ ಮುಖ್ಯಸ್ಥ, ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಹೇಳಿದ್ದಾರೆ.

ತಮ್ಮ ಪಕ್ಷಕ್ಕೆ ಹಂಚಿಕೆಯಾಗಿರುವ ಸೀಟುಗಳಲ್ಲಿ ಶೇ 10ರಷ್ಟನ್ನು ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಮೀಸಲಿಡಲಾಗುವುದು ಎಂದು ಅವರು ತಿಳಿಸಿದ್ದಾರೆ.

‘ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಈಗಾಗಲೇ ಪ್ರಕಟಿಸಿದ್ದೇನೆ. 11 ಸೀಟುಗಳಿಗೆ ಸಂಬಂಧಿಸಿದಂತೆ ಮೈತ್ರಿಕೂಟದ ನಾಯಕರು ಮಾತುಕತೆ ಮುಂದುವರಿಸಿದ್ದಾರೆ. ಎಲ್ಲರನ್ನೂ ತೃಪ್ತಿಪಡಿಸಲು ನಮಗೆ ಸಾಧ್ಯವಿಲ್ಲ’ ಎಂದು ಬಾರಾಮತಿ ಕ್ಷೇತ್ರದಿಂದ ಕಣಕ್ಕಿಳಿದಿರುವ ಅವರು ಹೇಳಿದ್ದಾರೆ.

ಮಹಾಯುತಿ ಮೈತ್ರಿಕೂಟವು ಎನ್‌ಸಿಪಿ (ಅಜಿತ್ ಪವಾರ್ ಬಣ), ಬಿಜೆಪಿ ಮತ್ತು ಶಿವಸೇನಾ (ಶಿಂದೆ ಬಣ) ಪಕ್ಷಗಳನ್ನು ಒಳಗೊಂಡಿವೆ. ಪವಾರ್ ಅವರು ಸೀಟು ಹಂಚಿಕೆ ಸಂಬಂಧ ಗುರುವಾರ ನವದೆಹಲಿಯಲ್ಲಿ ಬಿಜೆಪಿ ನಾಯಕರ ಜತೆ ಮಾತುಕತೆ ನಡೆಸಿದ್ದಾರೆ.

ಬಿಜೆಪಿಯು ತನ್ನ ಮೊದಲ ಪಟ್ಟಿಯಲ್ಲಿ 99 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಎನ್‌ಸಿಪಿ ತನ್ನ ಎರಡು ಪಟ್ಟಿಗಳಲ್ಲಿ 45 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ಶಿವಸೇನಾ ಕೂಡಾ 45 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ಫಡಣವೀಸ್ ನಾಮಪತ್ರ ಸಲ್ಲಿಕೆ: ಮಹಾರಾಷ್ಟ್ರ ಉಪಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು. ನ.20ರಂದು ನಡೆಯುವ ಚುನಾವಣೆಯಲ್ಲಿ ಅವರು ನಾಗಪುರ ನೈರುತ್ಯ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

2014 ರಿಂದ 2019ರವರೆಗೆ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದ ಫಡಣವೀಸ್ ಅವರು ನಾಗಪುರ ಪಶ್ಚಿಮ ಕ್ಷೇತ್ರದಿಂದ ಎರಡು ಸಲ ಹಾಗೂ ನಾಗಪುರ ನೈರುತ್ಯ ಕ್ಷೇತ್ರದಿಂದ ಮೂರು ಸಲ ಗೆದ್ದಿದ್ದಾರೆ. 1999ರಿಂದಲೂ ಅವರು ಗೆಲ್ಲುತ್ತಾ ಬಂದಿದ್ದಾರೆ.

ನಾಮಪತ್ರ ಸಲ್ಲಿಕೆಗೂ ಮುನ್ನ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, ‘ರಾಜ್ಯದ ಬಿಜೆಪಿ ಸರ್ಕಾರ ಕಳೆದ ಏಳೂವರೆ ವರ್ಷಗಳಲ್ಲಿ ಮತ್ತು ಕೇಂದ್ರ ಸರ್ಕಾರವು ಕಳೆದ 10 ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸಗಳು ನಾಗಪುರದ ಚಹರೆಯನ್ನೇ ಬದಲಿಸಿದೆ’ ಎಂದರು.

ಬಾಂದ್ರಾ ಪೂರ್ವ: ಜೀಶನ್ ಸಿದ್ದೀಕಿ ಕಣಕ್ಕೆ

ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯು ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಶುಕ್ರವಾರ ಪ್ರಕಟಿಸಿದ್ದು, ಏಳು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ಈಚೆಗೆ ಹತ್ಯೆಯಾದ ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಅವರ ಪುತ್ರ, ಹಾಲಿ ಶಾಸಕ ಜೀಶನ್ ಸಿದ್ದೀಕಿ ಅವರನ್ನು ಬಾಂದ್ರಾ ಪೂರ್ವ ಕ್ಷೇತ್ರದಿಂದ ಕಣಕ್ಕಿಳಿಸಿದೆ. 2019ರಲ್ಲಿ ಇದೇ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಲ್ಲಿ ಗೆದ್ದಿದ್ದ ಜೀಶನ್ ಬಳಿಕ ಎನ್‌ಸಿಪಿ ಸೇರಿದ್ದರು. ಎನ್‌ಸಿಪಿ ತನ್ನ ಮೊದಲ ಪಟ್ಟಿಯಲ್ಲಿ 38 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿತ್ತು. ಈಚೆಗೆ ನಡೆದ ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ್ದಕ್ಕೆ, ಜೀಶನ್ ಅವರನ್ನು ಕಾಂಗ್ರೆಸ್ ಅಮಾನತು ಮಾಡಿತ್ತು.

‘ನನ್ನ ಕುಟುಂಬಕ್ಕೆ ಇದು (ಟಿಕೆಟ್ ಘೋಷಣೆ) ಭಾವನಾತ್ಮಕ ಕ್ಷಣವಾಗಿದೆ. ನನ್ನ ಜತೆಗಿದ್ದ ಕೆಲವು ಸ್ನೇಹಿತರೇ ಮೋಸ ಮಾಡಿದಾಗ, ಅಜಿತ್ ದಾದಾ ಅವರು ತಮ್ಮ ಮಾತನ್ನು ಉಳಿಸಿಕೊಂಡರು. ನನ್ನ ಮೇಲೆ ನಂಬಿಕೆಯನ್ನಿಟ್ಟು ಬಾಂದ್ರಾ ಪೂರ್ವ ಕ್ಷೇತ್ರದ ಟಿಕೆಟ್ ನೀಡಿದ್ದಾರೆ. ಚುನಾವಣೆಯಲ್ಲಿ ಗೆದ್ದು ತಂದೆಯ ಕನಸು ಈಡೇರಿಸುವೆ’ ಎಂದು ಜೀಶನ್ ಪ್ರತಿಕ್ರಿಯಿಸಿದರು.

> **ಜಾತಿ ಸಮೀಕ್ಷೆ ನಡೆಸಲು ಮಹಾಯುತಿ ಸರ್ಕಾರ ಮುಂದಾಗದೇ ಇರುವುದರಿಂದ ಮಹಾರಾಷ್ಟ್ರದ ಹಲವಾರು ಹಿಂದುಳಿದ ಸಮುದಾಯಗಳಿಗೆ ಅನ್ಯಾಯ ಆಗಿದೆ**
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಉಗ್ರರ ಹಸ್ತಾಂತರ; ಕೆನಡಾ ನಿಷ್ಕ್ರಿಯ’

ಐವರ ಹಸ್ತಾಂತರ ಮನವಿಗಷ್ಟೆ ಕೆನಡಾದಿಂದ ಪರಿಹಾರ: ಭಾರತದ ರಾಯಭಾರಿ ಆರೋಪ

ನವದೆಹಲಿ (ಪಿಟಿಐ): ‘26 ಮಂದಿ ಖಾಲಿಸ್ತಾನಿ ಉಗ್ರರನ್ನು ಹಸ್ತಾಂತರಿಸುವಂತೆ ಭಾರತ ಮನವಿ ಮಾಡಿದ್ದು, ಇದರಲ್ಲಿ ಐದು ಮಂದಿಯ ವಿಚಾರವನ್ನು ಕೆನಡಾವು ಇತ್ಯರ್ಥಗೊಳಿಸಿದೆ. ಉಳಿದವರ ವಿಚಾರ ತಿಳಿದುಬಂದಿಲ್ಲ. ಕೆನಡಾವು ಈ ವಿಚಾರದಲ್ಲಿ ನಿಷ್ಕ್ರಿಯವಾಗಿದೆ’ ಎಂದು ಕೆನಡಾದಲ್ಲಿ ಭಾರತದ ಹೈ ಕಮಿಷನರ್ ಆಗಿದ್ದ ಸಂಜಯ್ ವರ್ಮಾ ತಿಳಿಸಿದ್ದಾರೆ.

ನವದೆಹಲಿಗೆ ಬಂದಿಳಿದ ಎರಡು ದಿನಗಳ ಬಳಿಕ ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ‘ಐದು ಮಂದಿ ಉಗ್ರರನ್ನು ಹಸ್ತಾಂತರಿಸಲಾಗಿದೆ. ಅವರ ಹೆಸರು ಹಾಗೂ ಉಳಿದ ವಿವರಗಳನ್ನು ನೀಡಲು ನನಗೆ ಯಾವುದೇ ಅಧಿಕಾರವಿಲ್ಲ’ ಎಂದು ಅವರು ಸ್ಪಷ್ಟಪಡಿಸಿದರು.

‘ನನಗೆ ಸಿಕ್ಕ ಕೊನೆಯ ಮಾಹಿತಿಯ ಪ್ರಕಾರ, ಐದು ಮಂದಿ ವಿಚಾರವನ್ನು ಮಾತ್ರ ಇತ್ಯರ್ಥಪಡಿಸಲಾಗಿದೆ. 21 ಮಂದಿಯ ಹಸ್ತಾಂತರ ಪ್ರಕ್ರಿಯೆ ಇತ್ಯರ್ಥವಾಗಿಲ್ಲ. ದಶಕಗಳಿಂದ ಇದು ಹಾಗೆಯೇ ಉಳಿದಿದೆ. ಸಮಾಲೋಚನೆ ನಡೆಸುತ್ತಿದೆ ಎಂದು ಕೆನಡಾ ಹೇಳುತ್ತಿರುವುದು ಅದು ನಿಷ್ಕ್ರಿಯವಾಗಿದೆ ಎನ್ನುವುದನ್ನೇ ಹೇಳುತ್ತದೆ. ಈ ವಿಚಾರ ನ್ಯಾಯಾಲಯದ ವ್ಯಾಪ್ತಿಗೂ ಒಳಪಡುತ್ತದೆ. ಎರಡೂ ದೇಶಗಳ ನ್ಯಾಯಾಂಗ ವ್ಯವಸ್ಥೆ ಭಿನ್ನವಾಗಿರುವ ಕಾರಣ, ಕೆಲವೊಮ್ಮೆ ಸಮಾಲೋಚನೆ ನಡೆಸುವ ಅಗತ್ಯವಿದೆ’ ಎಂದು ಸಂಜಯ್ ವರ್ಮಾ ಹೇಳಿದರು.

> ಎರಡು ರಾಷ್ಟ್ರಗಳ ನಡುವಿನ ಸಂಬಂಧ ಸುಧಾರಣೆಯಾಗಬೇಕು. ಪರಸ್ಪರ ಗೌರವ, ಕಾಳಜಿಯ ವಿಚಾರದಲ್ಲಿ ಒಮ್ಮತ ಮೂಡಿದರಷ್ಟೇ ಇದು ಸಾಧ್ಯ
> **ಸಂಜಯ್ ವರ್ಮಾ**
> ಕೆನಡಾದಲ್ಲಿ ಭಾರತದ ಹೈ ಕಮಿಷನರ್

ಭಯೋತ್ಪಾದನೆ ಹಾಗೂ ಇನ್ನಿತರ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ, 26 ಮಂದಿಯ ಹಸ್ತಾಂತರ ಪ್ರಕ್ರಿಯೆ ನಡೆಸುವಂತೆ ವಿದೇಶಾಂಗ ಸಚಿವಾಲಯವು ಕೆನಡಾಕ್ಕೆ ಮನವಿ ಮಾಡಿತ್ತು. ಪರಸ್ಪರ ಕಾನೂನು ನೆರವು ಒಪ್ಪಂದದ ಅಡಿಯಲ್ಲಿ ಹಲವು ಆರೋಪಿಗಳನ್ನು ‘ತಾತ್ಕಾಲಿಕವಾಗಿ ಬಂಧನ’ಕ್ಕೆ ಒಳಪಡಿಸುವಂತೆ ಒತ್ತಾಯಿಸಿತ್ತು.

ಇದರಲ್ಲಿ ಗುರ್ಜೀತ್ ಸಿಂಗ್, ಗುರ್ಜೀಂದರ್ ಸಿಂಗ್, ಗುರ್ಪೀತ್ ಸಿಂಗ್, ಲಖ್ಬೀರ್ ಸಿಂಗ್ ಲಂಡಾ, ಅರ್ಶ್‌ದೀಪ್ ಸಿಂಗ್ ಗಿಲ್ ಹೆಸರುಗಳೂ ಸೇರಿದ್ದವು. ನಿಜ್ಜರ್‌ನನ್ನು ‘ಘೋಷಿತ ಭಯೋತ್ಪಾದಕ’ ಎಂದು ಭಾರತ ತಿಳಿಸಿತ್ತು. 2023ರ ಜೂನ್ 18ರಂದು ಸರ್ರೆ ಪಟ್ಟಣದ ಗುರುದ್ವಾರದ ಹೊರಭಾಗದಲ್ಲಿ ನಿಜ್ಜರ್‌ನನ್ನು ಗುಂಡು ಹೊಡೆದು ಹತ್ಯೆ ಮಾಡಲಾಗಿತ್ತು.

ನಿಲುವು ಸ್ಪಷ್ಟ: ‘ಕೆನಡಾದ ವಿಚಾರದಲ್ಲಿ ಭಾರತದ ನಿಲುವು ಸ್ಪಷ್ಟವಾಗಿದೆ. ಖಾಲಿಸ್ತಾನಿ ಭಯೋತ್ಪಾದಕರು ಹಾಗೂ ಇತರೆ ಭಯೋತ್ಪಾದಕರು ಕೆನಡಾದಲ್ಲಿ ಸಕ್ರಿಯವಾಗಿರುವ ಕುರಿತು ಹಲವು ಸಲ ಗಮನಕ್ಕೆ ತರಲಾಗಿದೆ. ಅವರು ಭಾರತದ ಸಾರ್ವಭೌಮತೆ ಹಾಗೂ ದೇಶದ ಸಮಗ್ರತೆಗೆ ಸವಾಲು ಹಾಕುತ್ತಿದ್ದಾರೆ’ ಎಂದು ತಿಳಿಸಿದರು.

‘ಕೆನಡಾದಲ್ಲಿರುವ ಖಾಲಿಸ್ತಾನಿಗಳು ಕೆನಡಾದ ನಾಗರಿಕರು, ಅವರು ಭಾರತದ ಪ್ರಜೆಗಳಲ್ಲ. ಹಾಗಿದ್ದರೆ ಭಾರತದ ಭವಿಷ್ಯವೇನು ಎಂಬುದನ್ನು ನಮ್ಮ ದೇಶವೇ ನಿರ್ಧರಿಸಬೇಕು. ವಿದೇಶಿಯರು ಇದನ್ನು ನಿಯಂತ್ರಿಸುವಂತಿಲ್ಲ. ನಮ್ಮ ಆಂತರಿಕ ವಿಚಾರದಲ್ಲಿ ಯಾರೂ ಕೂಡ ಮಧ್ಯ ಪ್ರವೇಶಿಸಬಾರದು’ ಎಂದು ವರ್ಮಾ ಸ್ಪಷ್ಟಪಡಿಸಿದರು.

ಕೆನಡಾಕ್ಕೆ ಮಕ್ಕಳನ್ನು ಕಳುಹಿಸುವ ಮುನ್ನ ಯೋಚಿಸಿ: ಸಂಜಯ್ ವರ್ಮಾ



ನವದೆಹಲಿ (ಪಿಟಿಐ): ‘ಭಾರತೀಯರೇ.. ನಿಮ್ಮ ಮಕ್ಕಳನ್ನು ಕೆನಡಾಕ್ಕೆ –ಓದಲು ಕಳುಹಿಸುವ ಮುನ್ನ ಎರಡು ಬಾರಿ ಆಲೋಚಿಸಿ. ಲಕ್ಷಾಂತರ ರೂಪಾಯಿ ವ್ಯಯಿಸಿದರೂ, ಉದ್ಯೋಗದ ಖಾತ್ರಿ ಇಲ್ಲದ ಕೆಳದರ್ಜೆಯ ಕಾಲೇಜಿಗೆ ಸೇರುವ ಮಕ್ಕಳು ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆಗಳು ಹೆಚ್ಚಿರುತ್ತದೆ..’ ಕೆನಡಾದಲ್ಲಿ ಭಾರತದ ಹೈ ಕಮಿಷನರ್ ಆಗಿದ್ದ ಸಂಜಯ್ ವರ್ಮಾ ನೀಡಿದ ಎಚ್ಚರಿಕೆಯಿದು.

‘ಒಂದು ಸಮಯದಲ್ಲಿ ಪ್ರತಿ ವಾರ ಇಬ್ಬರು ಭಾರತೀಯ ವಿದ್ಯಾರ್ಥಿಗಳ ಮೃತದೇಹವನ್ನು ಭಾರತಕ್ಕೆ ಕಳುಹಿಸಲಾಗುತ್ತಿತ್ತು. ವೈಫಲ್ಯಕ್ಕೊಳಗಾಗುವ ಮಕ್ಕಳು ಬಳಿಕ ತವರಿಗೆ ಬಂದು ಪರಿಸ್ಥಿತಿಯನ್ನು ಎದುರಿಸುವ ಬದಲು, ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ’ ಎಂದು ತಿಳಿಸಿದ್ದಾರೆ.

2022ರಿಂದಲೂ ರಾಯಭಾರಿಯಾಗಿದ್ದ ವರ್ಮಾ ಅವರನ್ನು ಖಾಲಿಸ್ತಾನಿ ವಿವಾದದ ಬಳಿಕ ಈ ತಿಂಗಳ ಆರಂಭದಲ್ಲಿ ಕೆನಡಾವು ಭಾರತಕ್ಕೆ ಕಳುಹಿಸಿತ್ತು.

‘ಕೆನಡಾ–ಭಾರತದ ಸಂಬಂಧ ಸುಧಾರಣೆಯಾದರೂ, ಒಬ್ಬ ತಂದೆಯಾಗಿ ನೀಡುವ ಸಲಹೆ ಏನೆಂದರೆ, ತಮ್ಮ ಕನಸುಗಳ ಸಾಕಾರಕ್ಕಾಗಿ ಮಕ್ಕಳು ಅಲ್ಲಿಗೆ ತೆರಳಿದರೆ, ಬ್ಯಾಗ್‌ನಲ್ಲಿ ಮೃತದೇಹವಾಗಿ ಸ್ವದೇಶಕ್ಕೆ ಮರಳುತ್ತಾರೆ. ಹೀಗಾಗಿ ಅಲ್ಲಿಗೆ ಕಳುಹಿಸುವ ಮುನ್ನ, ಹೆತ್ತವರು ಅಲ್ಲಿನ ಕಾಲೇಜುಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಬೇಕು’ ಎಂದು ಸಲಹೆ ನೀಡಿದ್ದಾರೆ.

ಸಂಸತ್ತಿನಲ್ಲಿ ಭಾರತ ಸರ್ಕಾರವು ಬಹಿರಂಗಪಡಿಸಿದ ಅಂಕಿಅಂಶದ ಪ್ರಕಾರ, ಕೆನಡಾದಲ್ಲಿ ಈ ವರ್ಷ 4.27 ಲಕ್ಷ ಮಂದಿ ಭಾರತೀಯ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ.

ಇಸ್ರೇಲ್ ಸೇನೆಯಿಂದ ಮುಂದುವರಿದ ದಾಳಿ
ಗಾಜಾ, ಲೆಬನಾನ್‌ನಲ್ಲಿ 38 ಸಾವು

ಬೈರೂತ್ (ಎ.ಪಿ): ದಕ್ಷಿಣ ಗಾಜಾ ವ್ಯಾಪ್ತಿಯಲ್ಲಿರುವ ಖಾನ್ ಯೂನಿಸ್ ನಗರವನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಸತತ ದಾಳಿ ನಡೆಸಿದ್ದು, 38 ಜನರು ಅಸುನೀಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ..

ಗಾಜಾಪಟ್ಟಿಯಲ್ಲಿ ಕದನ ವಿರಾಮವನ್ನು ಘೋಷಿಸಬೇಕು ಎಂದು ಅಂತರ ರಾಷ್ಟ್ರೀಯ ವಲಯದಲ್ಲಿ ಒತ್ತಡ ಹೆಚ್ಚುತ್ತಿರುವಂತೆಯೂ, ಇಸ್ರೇಲ್ ಸೇನೆ ವಾಯುದಾಳಿಯನ್ನು ತೀವ್ರಗೊಳಿಸಿದೆ.

ಇನ್ನೊಂದೆಡೆ, ಲೆಬನಾನ್‌ನಲ್ಲಿ ಮಾಧ್ಯಮ ಪ್ರತಿನಿಧಿಗಳು ನೆಲಸಿದ್ದ ಕಟ್ಟಡದ ಬಳಿಯೇ ವಾಯುದಾಳಿ ನಡೆದಿದ್ದು, ಲೆಬನಾನ್ ರಾಷ್ಟ್ರೀಯ ಸುದ್ದಿ ಸಂಸ್ಥೆಯ ಮೂವರು ಸಿಬ್ಬಂದಿ ಮೃತಪಟ್ಟಿದ್ದಾರೆ.

ಬೈರೂತ್ ಮೂಲದ ‘ಅಲ್ ಮಯದೀನ್ ಟಿ.ವಿ’ ಸಂಸ್ಥೆಯು, ತನ್ನ ಇಬ್ಬರು ಸಿಬ್ಬಂದಿಯೂ ಸೇರಿದಂತೆ ಮೂವರು ಮೃತಪಟ್ಟರು ಎಂದು ವರದಿ ಮಾಡಿದೆ. ಅಲ್ಲದೆ, ವಾಯುದಾಳಿಯಲ್ಲಿ ಮಕ್ಕಳು ಮಹಿಳೆಯರು ಸೇರಿದಂತೆ ಹಲವರು ಗಾಯಗೊಂಡಿದ್ದಾರೆ ಎಂದೂ ಪ್ಯಾಲೆಸ್ಟೀನ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ಸೇನೆಯೂ ಈ ಕುರಿತು ಹೇಳಿಕೆ ನೀಡಿದೆ. ಹಮಾಸ್‌ನ ಸೇನಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಪ್ಯಾಲೆಸ್ಟೀನ್‌ನ ಹಲವು ಯೋಧರ ಹತ್ಯೆ ಮಾಡಲಾಗಿದೆ ಎಂದು ತಿಳಿಸಿದೆ.

ದಕ್ಷಿಣ ಗಾಜಾದ ಜಬಾಲಿಯಾ ಪಟ್ಟಣದಲ್ಲಿ ಕಮಾಲ್ ಅದ್ವಾನ್ ಆಸ್ಪತ್ರೆಯ ಮೇಲೂ ದಾಳಿ ನಡೆದಿದೆ. ಹಲವು ಮಕ್ಕಳು ಗಾಯಗೊಂಡಿದ್ದಾರೆ ಎಂದು ಆಸ್ಪತ್ರೆಯ ನಿರ್ದೇಶಕ ಈದ್ ಸಬಾ ಹೇಳಿದ್ದಾರೆ.

ದಾಳಿಯಿಂದ ಆಸ್ಪತ್ರೆಯ ಆಮ್ಲಜನಕ ಪೂರೈಕೆ ವ್ಯವಸ್ಥೆ ಹಾನಿಗೊಂಡಿದೆ. ಸುಮಾರು 40 ರೋಗಿಗಳನ್ನು ಬೇರೆಡೆ ಸ್ಥಳಾಂತರಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯು ಈ ದಾಳಿಯನ್ನು ದೃಢಪಡಿಸಿದೆ.



ಬೈರೂತ್‌ನ ದಕ್ಷಿಣ ಭಾಗದಲ್ಲಿ ಇಸ್ರೇಲ್ ಸೇನೆ ಗುರುವಾರ ರಾತ್ರಿ ನಡೆಸಿದ ವಾಯುದಾಳಿಯಲ್ಲಿ ಹಾನಿಗೊಂಡಿರುವ ಕಟ್ಟಡ ಎಎಫ್‌ಪಿ ಚಿತ್ರ

ಕದನ ವಿರಾಮ: ವಾರಾಂತ್ಯ ಚರ್ಚೆ?


ದೋಹಾ, ಕತಾರ್: ಇಸ್ರೇಲ್ ಮತ್ತು ಅಮೆರಿಕದ ಮಧ್ಯಸ್ಥಿಕೆದಾರರು ಕದನ ವಿರಾಮ ಮಾತುಕತೆ ಕುರಿತು ಚರ್ಚಿಸಲು ಈ ವಾರಾಂತ್ಯ ಸೇರುವ ಸಾಧ್ಯತೆಗಳಿವೆ. ಆದರೆ, ಲೆಬನಾನ್ ಮತ್ತು ಗಾಜಾ ಪಟ್ಟಿ ಮೇಲೆ ಇಸ್ರೇಲ್ ನಡೆಸಿರುವ ಇತ್ತೀಚಿನ ದಾಳಿಯಿಂದಾಗಿ ಚರ್ಚೆಯಲ್ಲಿ ಭಗವಹಿಸುವ ಕುರಿತು ಹಮಾಸ್ ಸುಳಿವು ನೀಡಿಲ್ಲ.

ಹಮಾಸ್ ಭಾಗವಹಿಸುವುದೇ ಎಂದು ಇನ್ನಷ್ಟೇ ಗೊತ್ತಾಗಬೇಕಿದೆ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಇಲ್ಲಿ ತಿಳಿಸಿದರು.

ಕತಾರ್‌ನ ಪ್ರಧಾನಿ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಅಲ್ ತಾನಿ ಅವರ ಜೊತೆಗೂ ಕದನ ವಿರಾಮ ಘೋಷಣೆ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು.

ಚರ್ಚೆಯಲ್ಲಿ ಭಾಗವಹಿಸಲು ದೇಶದ ಗುಪ್ತದಳ ಮುಖ್ಯಸ್ಥ ಡೇವಿಡ್ ಬರ್ನಿಯಾ ದೋಹಾಗೆ ತೆರಳುವರು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಕಚೇರಿ ಪ್ರಕಟಿಸಿದೆ.

ಆರ್‌ಎಸ್‌ಎಸ್ ಕಾರ್ಯಕಾರಿಣಿ ಸಭೆ ಆರಂಭ



ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಮಥುರಾದಲ್ಲಿ ಪ್ರಾರಂಭವಾದ ಸಂಘದ ಸಭೆಯಲ್ಲಿ ಭಾಗವಹಿಸಿದ್ದರು

ಮಥುರಾ (ಯುಪಿ) (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯು ಉತ್ತರ ಪ್ರದೇಶದ ಮಥುರಾ ಜಿಲ್ಲೆಯಲ್ಲಿ ಶುಕ್ರವಾರ ಆರಂಭವಾಯಿತು.

ಪಾರ್ಖಮ್‌ನಲ್ಲಿರುವ ದೀನ ದಯಾಳು ಗೋ ವಿಜ್ಞಾನ ಸಂಶೋಧನಾ ಮತ್ತು ತರಬೇತಿ ಕೇಂದ್ರದಲ್ಲಿ ಸಭೆ ಪ್ರಾರಂಭವಾಯಿತು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಅವರು ಭಾರತ ಮಾತೆ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು.

ಇತ್ತೀಚೆಗೆ ನಿಧನರಾದ ಉದ್ಯಮಿ ರತನ್ ಟಾಟಾ, ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ, ಜೈಪುರದ ರಾಘವಾಚಾರ್ಯ ಮಹಾರಾಜ, ಸಿಪಿಐ–ಎಂ ನಾಯಕ ಸೀತಾರಾಮ ಯೆಚೂರಿ, ಕೇಂದ್ರದ ಮಾಜಿ ಸಚಿವ ಕೆ.ನಟ್ವರ್ ಸಿಂಗ್, ಬಿಜೆಪಿ ನಾಯಕ ಸುಶೀಲ್ ಮೋದಿ, ನೌಕಾಪಡೆಯ ನಿವೃತ್ತ ಮುಖ್ಯಸ್ಥ ಅಡ್ಮಿರಲ್ ಎಲ್.ರಾಮದಾಸ್ ಮತ್ತು ಮಾಧ್ಯಮ ದಿಗ್ಗಜ ರಾಮೋಜಿ ರಾವ್ ಸೇರಿ ಹಲವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಂಘದ ಅಖಿಲ ಭಾರತ ಸಹ ಪ್ರಚಾರ ಮುಖ್ಯಸ್ಥ ನರೇಂದ್ರ ಠಾಕೂರ್ ಈ ವೇಳೆ ಮಾತನಾಡಿ, ‘2025ರ ವಿಜಯ ದಶಮಿ ವೇಳೆಗೆ ಆರ್‌ಎಸ್‌ಎಸ್ ನೂರು ವರ್ಷಗಳನ್ನು ಪೂರೈಸಲಿದ್ದು, ಈ ಅವಧಿಯ ಯೋಜನೆಗಳ ಪರಾಮರ್ಶೆಯು ಎರಡು ದಿನಗಳ ಸಭೆಯಲ್ಲಿ ನಡೆಯಲಿದೆ. ವಿಜಯ ದಶಮಿಯ ತಮ್ಮ ಭಾಷಣದಲ್ಲಿ ಭಾಗವತ್ ಅವರು ಪ್ರಸ್ತಾಪಿಸಿದ ಪರಿಕಲ್ಪನೆಗಳ ಕುರಿತು ಸಮಗ್ರ ಚರ್ಚೆ ನಡೆಯಲಿದೆ’ ಎಂದರು.

‘ಸಭೆಯಲ್ಲಿ ಈವರೆಗೆ ಕೈಗೊಂಡಿರುವ ಕೆಲಸಗಳ ಪರಾಮರ್ಶೆ ನಡೆಯಲಿದೆ. ಸಂಘದ ಶತಮಾನೋತ್ಸವ ವರ್ಷದಲ್ಲಿ ಕರ್ತವ್ಯದ ವಿಸ್ತರಣೆ ಮತ್ತು ಪಂಚ ಪರಿವರ್ತನೆ- ಸಾಮಾಜಿಕ ಸಾಮರಸ್ಯ, ಕೌಟುಂಬಿಕ ಅರಿವು, ಪರಿಸರ, ಸ್ವಾವಲಂಬಿ ಜೀವನಶೈಲಿ ಮತ್ತು ನಾಗರಿಕ ಕರ್ತವ್ಯ ಕುರಿತು ಸಮಾಜಕ್ಕೆ ಅರಿವು ಮೂಡಿಸುವ ಚರ್ಚೆಗಳು ನಡೆಯಲಿವೆ’ ಎಂದು ಪ್ರಕಟಣೆ ತಿಳಿಸಿದೆ.

ಆರ್‌ಎಸ್‌ಎಸ್‌ನ ಎಲ್ಲಾ ಪದಾಧಿಕಾರಿಗಳು ಮತ್ತು ಸಂಘದ ವಿವಿಧ ರಾಜ್ಯಗಳ 393 ಸದಸ್ಯರು, ಎಲ್ಲಾ 11 ಪ್ರದೇಶಗಳ ಮತ್ತು 46 ಪ್ರಾಂತ್ಯಗಳ ಕಾರ್ಯವಾಹಕರು ಮತ್ತು ಪ್ರಚಾರಕರು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ.

ಟೊರಾಂಟೊ: ಹೊತ್ತಿ ಉರಿದ ಟೆಸ್ಲಾ ಕಾರು; ನಾಲ್ವರು ಭಾರತೀಯರ ಸಾವು

ಟೊರಾಂಟೊ: ಕೆನಡಾದ ಟೊರಾಂಟೊದಲ್ಲಿ ಗುರುವಾರ ರಾತ್ರಿ ಭಾರತೀಯರು ಪ್ರಯಾಣಿಸುತ್ತಿದ್ದ ಟೆಸ್ಲಾ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಾಲ್ವರು ಮೃತಪಟ್ಟಿದ್ದಾರೆ ಎಂದು ‘ಇಂಡಿಯಾ ಟುಡೇ’ ವರದಿ ಮಾಡಿದೆ.

ಮೃತರನ್ನು ಗುಜರಾತ್‌ನ ಗೋಧ್ರಾದ 30 ವರ್ಷದ ಕೇತಾ ಗೊಹಿಲ್, 26 ವರ್ಷದ ನೀಲ್ ಗೊಹಿಲ್ ಎಂದು ಗುರುತಿಸಿದ್ದು, ಇನ್ನಿಬ್ಬರ ಗುರುತು ತಿಳಿಯಬೇಕಿದೆ. ಅಪಘಾತದ ವೇಳೆ ರಸ್ತೆಯಲ್ಲಿ ಸಾಗುತ್ತಿದ್ದ ದ್ವಿಚಕ್ರ ವಾಹನ ಸವಾರರೊಬ್ಬರು ಮಹಿಳೆಯೊಬ್ಬರನ್ನು ರಕ್ಷಿಸಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಹಿಳೆಯು ತೀವ್ರವಾಗಿ ಗಾಯಗೊಂಡಿದ್ದರೂ ಜೀವಕ್ಕೆ ಅಪಾಯವಿಲ್ಲ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಬ್ಯಾಟರಿಯಲ್ಲಿ ಬೆಂಕಿ ಕಾಣಿಸಿಕೊಂಡು, ನಂತರ ವಿಭಜಕಕ್ಕೆ ಡಿಕ್ಕಿ ಹೊಡೆದು ಬೆಂಕಿ ಹತ್ತಿಕೊಂಡಿತು. ಆದರೆ, ಅಪಘಾತಕ್ಕೀಡಾದ ಕಾರು ಸ್ವಯಂಚಾಲಿತವೇ ಎಂಬುದು ಖಚಿತವಾಗಿಲ್ಲ.

ಭಾರತ– ಬಾಂಗ್ಲಾದೇಶ ಗಡಿ ಮಾತುಕತೆ ಮುಂದೂಡಿಕೆ



ನವದೆಹಲಿ (ಪಿಟಿಐ): ಭಾರತ ಹಾಗೂ ಬಾಂಗ್ಲಾದೇಶದ ಗಡಿ ವಿಚಾರಕ್ಕೆ ಸಂಬಂಧಿಸಿದಂತೆ, ನವದೆಹಲಿಯಲ್ಲಿ ಮುಂದಿನ ತಿಂಗಳು ಡಿಜಿ ಹಂತದ ಅಧಿಕಾರಿಗಳ ನಡುವೆ ನಿಗದಿಯಾಗಿದ್ದ ಸಭೆಯನ್ನು ಮುಂದೂಡಲಾಗಿದೆ. ನೆರೆರಾಷ್ಟ್ರವು ಮಾತುಕತೆ ಯೋಜನೆಯಲ್ಲಿ ಬದಲಾವಣೆ ಮಾಡಿರುವುದೇ ಇದಕ್ಕೆ ಕಾರಣ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಭಾರತದ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹಾಗೂ ಬಾಂಗ್ಲಾದೇಶ ಗಡಿ ಭದ್ರತಾ ಪಡೆ (ಬಿಜಿಬಿ) ಅಧಿಕಾರಿಗಳ ಜತೆ ಎರಡು ವರ್ಷಗಳಿಗೊಮ್ಮೆ ನಡೆಯುವ ಸಭೆಯು ಇದೇ ನವೆಂಬರ್ 18ರಿಂದ 22ರವರೆಗೆ ನವದೆಹಲಿಯಲ್ಲಿ ನಿಗದಿಯಾಗಿತ್ತು. ಆಗಸ್ಟ್ 5ರಂದು ಶೇಕ್ ಹಸೀನಾ ಸರ್ಕಾರ ಪತನಗೊಂಡ ಬಳಿಕ ಇದೇ ಮೊದಲ ಬಾರಿಗೆ ನಿಗದಿತ ಸಭೆಯೂ ರದ್ದುಗೊಂಡಿದೆ.

ಹೊಸ ದಿನಾಂಕ ನಿಗದಿ ಕುರಿತಂತೆ ಆದಷ್ಟು ಬೇಗ ನಿರ್ಧರಿಸಲಾಗುವುದು ಎಂದು ಬಾಂಗ್ಲಾದೇಶದ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎರಡು ದೇಶಗಳ ಗಡಿ ಭದ್ರತಾ ಪಡೆಗಳ ಡಿ.ಜಿ ಹಂತದ ಸಭೆಯಲ್ಲಿ ಗೃಹ ಇಲಾಖೆ, ವಿದೇಶಾಂಗ ಇಲಾಖೆ, ಮಾದಕ ವಸ್ತು ನಿರೋಧಕ ಘಟಕ ಹಾಗೂ ವಿವಿಧ ತನಿಖಾ ಸಂಸ್ಥೆಗಳ ಮುಖ್ಯಸ್ಥರು ಸಭೆ ಸೇರಿ ಗಡಿ ನಿಯಂತ್ರಣ ಕುರಿತು ಸಮಾಲೋಚನೆ ನಡೆಸುತ್ತಾರೆ. ಈ ಹಿಂದಿನ ಸಭೆಯು ಢಾಕಾದಲ್ಲಿ ನಡೆದಿತ್ತು.

ಭಾರತದ ಪೂರ್ವ ಭಾಗದಲ್ಲಿ ಬಾಂಗ್ಲಾದೇಶಕ್ಕೆ ಹೊಂದಿಕೊಂಡು 4,096 ಕಿ.ಮೀ ಗಡಿ ಹಂಚಿಕೊಂಡಿದ್ದು, ಬಿಎಸ್‌ಎಫ್ ರಕ್ಷಣೆಯ ಜವಾಬ್ದಾರಿ ಹೊಂದಿದೆ.

ಎಕ್ಸ್‌ಪ್ರೆಸ್ ರೈಲಿನಿಂದ ಬೇರ್ಪಟ್ಟ ಎಂಜಿನ್

ಚೆನ್ನೈ: ಇಲ್ಲಿನ ಕಟಪಾಡಿ ಜಂಕ್ಷನ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಚಲಿಸುತ್ತಿದ್ದ ಎಕ್ಸ್‌ಪ್ರೆಸ್ ರೈಲಿನಿಂದ ಎಂಜಿನ್ ಬೇರ್ಪಟ್ಟ ಘಟನೆ ನಡೆದಿದೆ.

ದಿಬ್ರೂಗಢ– ಕನ್ಯಾಕುಮಾರಿ ರೈಲು ಕಟಪಾಡಿ ರೈಲು ನಿಲ್ದಾಣಕ್ಕೆ ಬರುತ್ತಿದ್ದ ವೇಳೆ ಬೆಳಿಗ್ಗೆ 8.50ರ ಸುಮಾರಿಗೆ ವೆಲ್ಲೂರು ಜಿಲ್ಲೆಯ ತಿರುವಲಾಂ ರೈಲ್ವೆ ನಿಲ್ದಾಣದಲ್ಲಿ ಉಳಿದ 22 ಬೋಗಿಗಳಿಂದ ಎಂಜಿನ್ ಬೇರ್ಪಟ್ಟಿದೆ. 500 ಮೀಟರ್ ತನಕ ಎಂಜಿನ್ ಚಲಿಸಿದ ಬಳಿಕ ನಂತರ ತಕ್ಷಣವೇ ನಿಲ್ಲಿಸಲಾಯಿತು.

ರೈಲು ಗಾಲಿ ಕಾರ್ಖಾನೆ

ವೆಬ್‌ಸೈಟ್: www.rwf.indianrailways.gov.in

ಪಿಂಚಣಿ ಅದಾಲತ್

ರೈಲು ಗಾಲಿ ಕಾರ್ಖಾನೆಯ ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರ ''ಪಿಂಚಣಿ ಸವಲತ್ತು'' ಗಳಿಗೆ ಮಾತ್ರವೇ ಸಂಬಂಧಿಸಿದಂತೆ ಕುಂದುಕೊರತೆಗಳನ್ನು ಬಗೆಹರಿಸಲು ಪಿಂಚಣಿ ಅದಾಲತ್‌ನ್ನು **16.12.2024 (ಸೋಮವಾರ) ಬೆಳಗ್ಗೆ 11.00 ಗಂಟೆಗೆ** ರೈಲು ಗಾಲಿ ಕಾರ್ಖಾನೆಯ ಆಡಳಿತ ಕಟ್ಟಡದ ಸಭಾಭವನದಲ್ಲಿ ನಡೆಸಲಾಗುತ್ತದೆ.

ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರು ತಮ್ಮ ದೂರುಗಳನ್ನು ಸಂಪೂರ್ಣ ವಿವರಗಳೊಂದಿಗೆ ''ಪಿಂಚಣಿ ಅದಾಲತ್''–2024 ಎಂಬ ಮೇಲ್ಬರಹವಿರುವ ಲಕೋಟೆಯಲ್ಲಿ ಸಹಾಯಕ ಕಾರ್ಮಿಕ ಅಧಿಕಾರಿ, ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–560 064 ಇವರಿಗೆ **11.11.2024** ರೊಳಗೆ ತಲುಪುವಂತೆ ಕಳುಹಿಸಬಹುದು ಅಥವಾ ಅವರ ಕುಂದುಕೊರತೆಗಳನ್ನು **ks.poornima@gov.in** ಗೆ ಇ–ಮೇಲ್ ಮಾಡಬಹುದು.

ಸಂಪೂರ್ಣ ಕಾನೂನು ಪ್ರಕ್ರಿಯೆಯ ಅಥವಾ ನಿಯಮಾವಳಿಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಪಿಂಚಣಿ ಅದಾಲತ್‌ನಲ್ಲಿ ಪರಿಗಣಿಸಲಾಗುವುದಿಲ್ಲ.

ಪ್ರಧಾನ ಮುಖ್ಯ ಕಾರ್ಮಿಕ ಅಧಿಕಾರಿ

INDIAN ACADEMY OF SCIENCES
P.B. 8005, C.V.Raman Avenue, Sadashivanagar, Bengaluru - 560 080.

Invites sealed bids in two bid format for Construction of
SEWAGE TREATMENT PLANT (STP)
at Fellows Residency of IASc, at Jalahalli, Bengaluru.

Full details about issue of bid is available in the academy website **https://ww.ias.ac.in/About_IAsc/Tender_notices/**

Last date for receipt of bids: **18th November 2024 (1500 Hrs)**

Place: **Bengaluru**
Date: **23/10/2024** **Executive Secretary**

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂ.: 08472 – 278604, ಇಮೇಲ್ ವಿಳಾಸ: dudc.glb@gmail.com & itstaff_dudc_gulbarga@yahoo.com

ಸಂ:ಜಿನಕೋ/ಅಮೃತ ನಗರೋತ್ಥಾನ(ಮುನಿಸಿಪಾಲಿಟಿ)–4/ಶಹಬಾದ/78/2022–23 ದಿ:25.10.2024

:: ಟೆಂಡರ್ ಅಧಿಸೂಚನೆ ::

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ ಜಿಲ್ಲೆ, ಕಲಬುರಗಿರವರು **ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4)**ಯಡಿ ತೆಗೆದುಕೊಂಡ ಈ ಕೆಳಕಂಡ ವಿವಿಧ ಕಾಮಗಾರಿಗಳ ಸಮರ್ಪಕ ಅನುಷ್ಠಾನಕ್ಕಾಗಿ ಕೆ.ಟಿ.ಪಿ.ಪಿ. ಕಾಯ್ದೆ 1999 ನಿಯಮ 2000ರನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2 ಕವರ್ ಸಿಸ್ಟಮ್ ಕೆ.ಡಬ್ಲ್ಯೂ–4ರ ದಾಖಲಾತಿಯಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಪ್ರಥಮ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ : ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನದಡಿ ಕಲಬುರಗಿ ಜಿಲ್ಲೆಯ ಶಹಬಾದ ಪಟ್ಟಣ ವ್ಯಾಪ್ತಿಯಲ್ಲಿ ನಗರಸಭೆ ಕಛೇರಿ ಮತ್ತು ಡಾ. ಬಿ.ಆರ್ ಅಂಬೇಡ್ಕರ್ ಸಮುದಾಯ ಭವನ ಭೋವಿ, ಮಾದಿಗ ಮತ್ತು ಲಂಬಾಣಿ ಸಮಾಜ, ಕೊರವ ಮತ್ತು ಪರಿಶಿಷ್ಟ ಜಾತಿ ಸಮುದಾಯದ ಸ್ಮಶಾನ, ಸಾರ್ವಜನಿಕ ಶೌಚಾಲಯ, ಹೈಟೆಕ್ ಗಾರ್ಡನ್ ಬಂಜಾ ಸಮಾಜ ಕುಡಿಯುವ ನೀರಿನ ಘಟಕ ಹಾಗೂ ಬೀದಿ ದೀಪ ಅಳವಡಿಸುವ ಕಾಮಗಾರಿಗಳು **TENDER NO:- DMA/2024-25/OW/ WORK_INDENT 26512**, 2) ನಿಗಧಿಪಡಿಸಿದ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) : **597.21**, 3) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ): **8.96**, 4) ಗುತ್ತೇದಾರರ ದರ್ಜೆ : Eligible PWD Contractor 5) ಕಾಲಾವಕಾಶ : ಕಾರ್ಯಾದೇಶ ನೀಡಿದ ನಂತರದ 12 ತಿಂಗಳು

ಗುತ್ತಿಗೆದಾರರು ಸದರಿ ಕಾಮಗಾರಿಯ ಕುರಿತು ಸಮಗ್ರ ಮಾಹಿತಿಯನ್ನು ದಿನಾಂಕ: **25.10.2024** ರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ www.eproc.karnataka.gov.inರ ಮುಖಾಂತರ ಪಡೆದುಕೊಂಡು ಇ.ಎಂ.ಡಿ. ಮತ್ತು ಟೆಂಡರ್‌ಗಾಗಿ ತಗಲುವ ವೆಚ್ಚವನ್ನು ಸಹ ವಿದ್ಯುನ್ಮಾನ ರೀತಿಯಲ್ಲಿ ಭರಿಸತಕ್ಕದ್ದು. ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.
1) Pree Bid Meeting: **14.11.2024 at 11.30 AM,** 2) Last date & Time for Tender Queries/ Clarifications: **25.11.2024 upto 5.00 PM,** 3) Last Date of bid Submission: **27.11.2024 upto 5.30 PM**, 4) Date of Opening of Tenders (Technical Bids): **29.11.2024 at 11.30 AM,** 5) Date of Opening of Financial Bids: **09.12.2024 at 11.30 AM**

ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಇ–ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/564/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಒಂದು ಉದ್ದಿಮೆ)
ನಂ. 8 "ಸಂಪರ್ಕ ಸೌಧ" ಡಾ॥ ರಾಜ್‌ಕುಮಾರ್ ರಸ್ತೆ ರಾಜಾಜಿನಗರ 1ನೇ ಬ್ಲಾಕ್ ಬೆಂಗಳೂರು–560010
ಟೆಲೀಫ್ಯಾಕ್ಸ್ : 080–22024000 ಇ–ಮೇಲ್: cekrdcl@gmail.com : ವೆಬ್‌ಸೈಟ್ : www.krdcl.in

ನಂ. ಕೆಆರ್‌ಡಿಸಿಎಲ್/ಐಎಫ್‌ಬಿ/ಆರ್‌ಎಫ್‌ಪಿ/2024–25/12 ದಿನಾಂಕ: 25.10.2024

ಪ್ರಸ್ತಾವನೆ ಕೋರಿಕೆಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ **(KRDCL)** ದಲ್ಲಿ ಗುತ್ತಿಗೆ ಮತ್ತು ವಿವಾದ ನಿರ್ವಹಣೆಗಾಗಿ ಸಲಹಾ ಸೇವೆಗಳ ಆಯ್ಕೆಯನ್ನು ಒದಗಿಸಲು ಪ್ರತಿಷ್ಠಿತ ಸಲಹಾ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ.
ಸೇವೆಯ ಹೆಸರು : ಕೆಆರ್‌ಡಿಸಿಎಲ್‌ನ ಅನುಷ್ಠಾನ ಮತ್ತು ಪ್ರಸ್ತಾವಿತ ಗುತ್ತಿಗೆಗಳಲ್ಲಿ ಸಲಹಾ ಸೇವೆಯನ್ನು ಒದಗಿಸುವುದು ಮತ್ತು ಪಿಪಿಪಿ–ವಿಜಿಎಫ್/ವರ್ಷಾಶನ/ಹೆಚ್‌ಎಎಂ ಗುತ್ತಿಗೆ, ವಿವಾದ ನಿರ್ವಹಣೆ ಮತ್ತು ವಿಷಯಗಳನ್ನು ಇತ್ಯರ್ಥಗೊಳಿಸುವುದು.
ಸೇವೆಯ ಅವಧಿ: 30 ತಿಂಗಳು
2. ಆಸಕ್ತ ಅರ್ಜಿದಾರರು ಬಿಡ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **www.kppp.karnataka.gov.in** ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಬಿಡ್‌ಗಳನ್ನು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಸಲ್ಲಿಸಬೇಕು.
3. ಗುಣಮಟ್ಟ ಮತ್ತು ದರ ಆಧಾರಿತ ವಿಧಾನದ (ಕ್ಯುಸಿಬಿಎಸ್) ಮೂಲಕ ಆಯ್ಕೆ ನಡೆಸಲಾಗುವುದು.
4. ಪೂರ್ವಭಾವಿ ಆಕ್ಷೇಪಣೆಗಳಿದ್ದಲ್ಲಿ **ದಿನಾಂಕ: 04.11.2024ರಂದು ಸಂಜೆ 5:00 ಗಂಟೆಗೆ ಅಥವಾ ಮುಂಚಿತವಾಗಿ** ಕೆಪಿಪಿ ಪೋರ್ಟಲ್ / ಇಮೇಲ್ : **cekrdcl@gmail.com** ಮೂಲಕ ಸಲ್ಲಿಸಬೇಕು.
5. ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವ ದಿನಾಂಕ **:12.11.2024ರ ಸಂಜೆ 5.30 ಗಂಟೆಗೆ ಅಥವಾ ಮುಂಚಿತವಾಗಿ.**
6. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **14.11.2024ರಂದು ಬೆಳಿಗ್ಗೆ 11.30 ಗಂಟೆಗೆ.**

*ಇನ್ನು ಮುಂದೆ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ, ಅದನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕೆಪಿಪಿ ಪೋರ್ಟಲ್ ಮತ್ತು ವೆಬ್‌ಸೈಟ್ **http://www.krdcl.in** ರಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ಮುಖ್ಯ ಅಭಿಯಂತರರು
ಕೆ.ಆರ್.ಡಿ.ಸಿ.ಎಲ್, ಬೆಂಗಳೂರು
DIPR/CP/YC/2775/2024-25

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು
(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು)
E-mail: dudc_burban@yahoo.com Ph: 080-22211372/352

ಸಂ.: ಜಿನಕೋ/ತಾಂತ್ರಿಕ/ಇಂದಿರಾಕ್ಯಾಂಟೀನ್/ಸಿಆರ್/01/2020–21/22 ದಿ: 23.10.2024

ಟೆಂಡರ್ ಪ್ರಕಟಣೆ

ಬೆಂಗಳೂರು ನಗರ ಜಿಲ್ಲಾಧಿಕಾರಿಯವರ ಕಾರ್ಯಾಲಯದ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆರವರು ಅರ್ಹ ಕ್ಯಾಟರಿಂಗ್ ಸರ್ವಿಸ್ ಗುತ್ತಿಗೆದಾರರಿಂದ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
Providing Catering Services for Indira Canteen in Anekal TMC, Attibele TMC, Bommasandra TMC of Bengaluru Urban District in Karnataka State for One Year. (ಇಂಡೆಂಟ್ ಸಂಖ್ಯೆ: DMA/2024-25/IND3746). **1.** ಟೆಂಡರ್ ದಾಖಲಾತಿಗಳನ್ನು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ. **2.** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 09–12–2024 ವೇಳೆ:17.00 ಗಂಟೆ. **3.** ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 10–12–2024 ವೇಳೆ: 17.00 ಗಂಟೆ. **4.** ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 20–12–2024 ವೇಳೆ: 15.00 ಗಂಟೆ.
ಟೆಂಡರ್ ಮೊತ್ತ: ರೂ. 319.08 ಲಕ್ಷ, **ಇ.ಎಂ.ಡಿ ಮೊತ್ತ:** ರೂ. 4,78,625, **ಅವಧಿ:** 01 ವರ್ಷ
ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in, Email: dudc_burban@yahoo.com Phone No.: 080–22211352 / 372 ಗೆ ಸಂಪರ್ಕಿಸಿ.

ಸಹಿ/–
ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬೆಂಗಳೂರು ನಗರ ಜಿಲ್ಲೆ
ವಾಸಸಂಇ/ಸಿಪಿ/ಎಎಎ/2751/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಿಜಯಪುರ ಜಿಲ್ಲೆ.
ಸಂಖ್ಯೆ: ಅಕಇ/ಹೊ.ಗು/ಸಿಬ್ಬಂದಿ/ಸಿ.ಆರ್–02/2024–25 ದಿನಾಂಕ:23.10.2024

ಟೆಂಡರ್ ಪ್ರಕಟಣೆ

2024–25 ನೇ ಸಾಲಿಗೆ ವಿಜಯಪುರ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ ಜಿಲ್ಲಾ ಕಛೇರಿ/ ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರು, ಗಣಕಯಂತ್ರ ಜ್ಞಾನವುಳ್ಳ ಪ್ರಥಮ ದರ್ಜೆ ಸಹಾಯಕರು, ಮಹಿಳಾ ಶುಶ್ರೂಷಕಿಯರು, ಸ್ವಚ್ಛತಾ ಸಿಬ್ಬಂದಿ, ಜವಾನರು ಹಾಗೂ ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಮಾಹಿತಿ ಕೇಂದ್ರಗಳು ಖಾಲಿ ಇರುವ ಜವಾನ/ಗ್ರೂಪ್ 'ಡಿ', ವಾಹನ ಚಾಲಕ ಹಾಗೂ ಡಾಟಾ ಎಂಟ್ರಿ ಆಪರೇಟರ್‌ಗಳ/ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿ ಮುಖಾಂತರ ಪಡೆದುಕೊಳ್ಳಲು ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆಯ ವಿವರ ಈ ಕೆಳಗಿನಂತಿದೆ.
1) **ಟೆಂಡರ್ ಪ್ರಕಟಣೆ ಸಂಖ್ಯೆ:** ಅಕಇ/ಹೊ.ಗು/ಸಿಬ್ಬಂದಿ/ಸಿ.ಆರ್–02/2024–25 ದಿನಾಂಕ: 23.10.2024
2) **ಟೆಂಡರ್ ಉಲ್ಲೇಖ ಸಂಖ್ಯೆ:** MWD/2024-25/SE0058
3) **ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ.436.00 ಲಕ್ಷಗಳ ಮತ್ತು ಇ.ಎಂ.ಡಿ ರೂ. 6.54 ಲಕ್ಷ.**
4) ಟೆಂಡರ್ ಸಲ್ಲಿಸಲು ನಿಗದಿಪಡಿಸಿದ ಕೊನೆಯ **ದಿನಾಂಕ: 25.11.2024 ಸಮಯ ಸಾಯಂಕಾಲ 5.00 ಗಂಟೆಗೆ.**
5) ಸಂಭಾವ್ಯ ಬಿಡ್‌ದಾರರೊಂದಿಗೆ ಪೂರ್ವಭಾವಿ ಸಭೆ (Pre Bid Meeting) **ದಿನಾಂಕ: 04.11.2024 ಬೆಳಿಗ್ಗೆ 11.00 ಗಂಟೆಗೆ. ಸ್ಥಳ: ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ಜಿಪಂ ರೋಡ, ವಿಜಯಪುರ – 586 109.**
6) ತಾಂತ್ರಿಕ್ ಬಿಡ್ ತೆರೆಯುವ **ದಿನಾಂಕ: 02.12.2024 ಬೆಳಿಗ್ಗೆ 11.00 ಗಂಟೆಗೆ. ಸ್ಥಳ: ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ಜಿಪಂ ರೋಡ, ವಿಜಯಪುರ – 586 109.**
7) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 10.12.2024 ಬೆಳಿಗ್ಗೆ 11.00 ಗಂಟೆಗೆ (ಬದಲಾವಣೆಗೆ ಒಳಪಟ್ಟಿರುತ್ತದೆ) ಸ್ಥಳ: ಜಿಲ್ಲಾ ಅಧಿಕಾರಿಗಳ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ಜಿಪಂ ರೋಡ, ವಿಜಯಪುರ – 586 109.**
8) **ಪ್ರೀ–ಬಿಡ್ ಸಭೆ ನಡೆಯುವ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಸ್ಥಳ:** ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ. ಕನಕದಾಸ ಬಡಾವಣೆ, ಜಿಲ್ಲಾ ಜಿಲ್ಲಾ ಪಂಚಾಯತ ರೋಡ್, ವಿಜಯಪುರ – 586109. ದೂರವಾಣಿ ಸಂಖ್ಯೆ: 08352–276523

ಆಸಕ್ತಿ ಹೊಂದಿರುವ ಬಿಡ್‌ದಾರರು ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ
ವಾಸಾಸಂಇ/ವಿಜಯಪುರ/353/ಕೆಎಸ್ಎಂಸಿಎ/2024–25

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು
ಹಣಕಾಸು ನಿಗಮ ನಿಯಮಿತ
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ,
ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/37/ಟೆಂ.ಪ್ರ/2024–25/10 ದಿನಾಂಕ: 24.10.2024

ಇ–ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ ಅಭಿಯಾನ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ ಸಂ.	ಕಾಮಗಾರಿ ಹೆಸರು	ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ. ಲಕ್ಷಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Providing and laying missing links in UGD network along with restoration, rehabilitation and connecting missing links of sewer network in **Kalaburagi City** under NGT Environmental Compensation fund. **(Call-3)**	3054	31.00
2	Construction of trunk sewer line in D cross road in **Doddaballapur City** under NGT Compensation Fundon DBOT model.	486	5.00
3	Construction of upgradation of sewerage system for the **Belagavi city** under NGT Environmental Compensation fund.	3626	36.50
4	Construction of upgradation of sewerage system for the **Saundatti city** under NGT Environmental Compensation fund.	3283	33.00
5	Providing and laying balance 10.63 KM UGD System in **Sagara CMC** limit (Land Acquisition Stretch) and Construction of 0.62 MLD Capacity Sequence batch reactor SBR technology STP at LB Nagara (Zone 5)- **Call-3**	1664	17.00

1) ಟೆಂಡರ್ ಆಹ್ವಾನಿಸುವ ದಿನಾಂಕ: **28.10.2024.** 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **12.11.2024 ಸಮಯ: 11.30 ಪೂರ್ವಾಹ್ನ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **28.11.2024 ಸಮಯ: 5.30 ಅಪರಾಹ್ನ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **30.11.2024 ಸಮಯ: 11.30 ಪೂರ್ವಾಹ್ನ.** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **07.12.2024 ಸಮಯ: 11.30 ಪೂರ್ವಾಹ್ನ.**
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/2762/ಎಂಎಎ/2024–25

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A++' Grade
Accredited by NAAC with A++
ಜ್ಞಾನಭಾರತಿ, ಬೆಂಗಳೂರು – 560 056. ಫೋನ್: 080–22961039

ಸಂಖ್ಯೆ: ಎಸಿಎ–3/ಸಂ.ನ/2025–26 ದಿನಾಂಕ: 24.10.2024

ಜಾಹೀರಾತು

ಬೆಂಗಳೂರು ವಿಶ್ವವಿದ್ಯಾಲಯವು, 2025–26ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಮಯ (ತಿದ್ದುಪಡಿ) 2015ರಲ್ಲಿ ನಿಗಧಿಪಡಿಸಿರುವಂತೆ, ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ, ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮೀಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿವಿಧ ರೀತಿಯ ಸಂಯೋಜನೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ, ಅರ್ಜಿಗಳನ್ನು ಅಧಿಸೂಚನೆ ಸಂಖ್ಯೆ: ಎಸಿಎ–3/ಸಂನ/2025–26, **ದಿನಾಂಕ: 24.10.2024ರ** ಮೂಲಕ ಆಹ್ವಾನಿಸಿದೆ. ಈ ಅಧಿಸೂಚನೆಯ ವಿಶ್ವವಿದ್ಯಾಲಯದ ವೆಬ್‌ಸೈಟ್: **www.bangaloreuniversity.karnataka.gov.in** ನಲ್ಲಿ ಲಭ್ಯವಿರುತ್ತದೆ.

ಈ ಅಧಿಸೂಚನೆಯನ್ನು ಪರಾಮರ್ಶಿಸಿದ ನಂತರವೇ ಕಾಲೇಜುಗಳು/ಸಂಸ್ಥೆಗಳು ಸಂಯೋಜನಾ ಅರ್ಜಿಗಳನ್ನು ಸರ್ಕಾರದ ಆನ್–ಲೈನ್ ವೆಬ್‌ಸೈಟ್ **https://uucms.karnataka.gov.in** ಮೂಲಕ ಮಾತ್ರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಅರ್ಜಿಗಳನ್ನು ದಂಡ ಶುಲ್ಕ ರಹಿತವಾಗಿ **ದಿನಾಂಕ: 12.11.2024 ಮತ್ತು ದಿನಾಂಕ: 15.11.2024 ರವರೆಗೆ ರೂ.1000/– ದಂಡ** ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಯನ್ನು ವಿದ್ಯಾಕಾರ್ಯ ಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–56 (ದೂರವಾಣಿ : 080–22961039) ಇಲ್ಲಿ ಪಡೆಯಬಹುದಾಗಿದೆ.

ಸಹಿ/–
ಕುಲಸಚಿವರು
DIPR/CP/RO2772/AAPL/2024-25

ಬಾಬಾ ಸಿದ್ದೀಕಿ ಹತ್ಯೆ: ಪಿಸ್ತೂಲ್ ವಶ

ಮುಂಬೈ (ಪಿಟಿಐ): ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಹತ್ಯೆ ಪ್ರಕರಣದಲ್ಲಿ ಬಂಧಿತ ಆರೋಪಿಗಳ ಪೈಕಿ ಒಬ್ಬನಾದ ರಾಮ್ ಕನೂಜಿಯಾ (43) ಅವರ ಬಾಡಿಗೆ ಮನೆಯಿಂದ ಪೊಲೀಸರು ಪಿಸ್ತೂಲ್ ಮತ್ತು ಮೂರು ಬುಲೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ಹೇಳಿದ್ದಾರೆ.

ಮುಂಬೈ ಹೊರವಲಯದಲ್ಲಿನ ರಾಯಗಢ ಜಿಲ್ಲೆಯ ಪನ್ವೆಲ್ ಪಟ್ಟಣದ ಬಾಡಿಗೆ ಮನೆಯಲ್ಲಿ ಕನೂಜಿಯಾ ವರ್ಷದಿಂದ ವಾಸಿಸುತ್ತಿದ್ದ ಎಂದು ಅವರು ತಿಳಿಸಿದ್ದಾರೆ.

ಸಿದ್ದೀಕಿ ಹತ್ಯೆ ಪ್ರಕರಣದಲ್ಲಿ ಕನೂಜಿಯಾ ಶೂಟರ್‌ಗಳಿಗೆ ಬಂದೂಕು ಮತ್ತು ಇತರ ಸಾಮಗ್ರಿಗಳನ್ನು ಪೂರೈಸಿದ ಗುಂಪಿನ ಭಾಗವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಲ್ಲಿಯವರೆಗೆ 14 ಜನರನ್ನು ಬಂಧಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಗಾಯತ್ರಿ ಶೇಖರ್
ಜನನ: 17.03.1950 – ನಿಧನ: 26.10.2019
ಸದಾ ನಿಮ್ಮ ನೆನಪಿನಲ್ಲಿರುವ:
ಬಿ.ಹೆಚ್.ಚಂದ್ರಶೇಖರ್ ಮತ್ತು ಕುಟುಂಬವರ್ಗದವರು

ಅಬ್ಬರಿಸಿದ ಚಂಡಮಾರುತ • ಒಡಿಶಾದಲ್ಲಿ ಪ್ರಾಣಹಾನಿ ಇಲ್ಲ • ತೆರವು ಕಾರ್ಯ ಆರಂಭ

ಡಾನಾ: ಭಾರಿ ಮಳೆ, 2 ಸಾವು

ಕೋಲ್ಕತ್ತ/ ಭುವನೇಶ್ವರ (ಪಿಟಿಐ): 'ಡಾನಾ' ಚಂಡಮಾರುತದ ಪರಿಣಾಮ ಪಶ್ಚಿಮ ಬಂಗಾಳದಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಿಳಿಸಿದರು.

ಒಡಿಶಾದಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಸ್ಪಷ್ಟಪಡಿಸಿದರು.

ಪರಿಶೀಲನಾ ಸಭೆ ನಡೆಸಿದ ಮಮತಾ: ರಾಜ್ಯದ ಪರಿಸ್ಥಿತಿಯನ್ನು ಅವಲೋಕಿಸಲು ಸಿಬ್ಬಂದಿ ಸಚಿವಾಲಯದಲ್ಲಿಯೇ ಗುರುವಾರ ರಾತ್ರಿ ಕಳೆದ ಮಮತಾ ಅವರು, ಶುಕ್ರವಾರ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು.

ನಂತರ ಚಂಡಮಾರುತದ ಅಬ್ಬರದಿಂದ ಸಂಕಷ್ಟದಲ್ಲಿರುವ ಜನರಿಗೆ ಪರಿಹಾರ ಸಾಮಗ್ರಿಗಳು ತಲುಪುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

'ಕೇಬಲ್‌ಗೆ ಸಂಬಂಧಿಸಿದ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ವ್ಯಕ್ತಿಯೊಬ್ಬರು ತಮ್ಮ ಮನೆಯಲ್ಲಿ ಮೃತಪಟ್ಟಿದ್ದಾರೆ. ಅಗತ್ಯಬಿದ್ದರೆ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರವು ನೆರವು ನೀಡಲಿದೆ' ಎಂದು ಅವರು ತಿಳಿಸಿದರು.

ಚುರುಕು ಪರಿಹಾರ ಕಾರ್ಯ– ಮಾಝಿ

ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರು ಭುವನೇಶ್ವರದಲ್ಲಿ ಶುಕ್ರವಾರ ಪರಿಸ್ಥಿತಿಯನ್ನು ಪರಿಶೀಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮರಗಳು ಧರೆಗುರುಳಿದ ಪರಿಣಾಮ ರಸ್ತೆಗಳು ಬಂದ್ ಆಗಿವೆ. ರಕ್ಷಣಾ ಪಡೆಯ ಸಿಬ್ಬಂದಿ ಈಗಾಗಲೇ ತೆರವು ಕಾರ್ಯ ಆರಂಭಿಸಿದ್ದಾರೆ' ಎಂದರು.

'ವಿದ್ಯುತ್ ಕಂಬಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದ್ದು, ಸರಿಪಡಿಸುವ ಕಾರ್ಯ ಭರದಿಂದ ಸಾಗಿದೆ. ಶುಕ್ರವಾರ ಸಂಜೆ ವೇಳೆಗೆ ವಿದ್ಯುತ್ ಸೇವೆಯನ್ನು ಮರಳಿ ನೀಡಲಾಗುವುದು' ಎಂದರು.



ಕೋಲ್ಕತ್ತದಲ್ಲಿ ಶುಕ್ರವಾರ ಸುರಿದ ಭಾರಿ ಮಳೆಗೆ ರಸ್ತೆಗಳು ಜಲಾವೃತವಾಗಿದ್ದವು ಪಿಟಿಐ ಚಿತ್ರ

ಭೂಮಿಗೆ ಪೂರ್ಣ ಅಪ್ಪಳಿಸಲು ಎಂಟೂವರೆ ತಾಸು

'ಡಾನಾ' ಚಂಡಮಾರುತವು ಒಡಿಶಾದ ಧಾಮರ ಮತ್ತು ಭಿತರ್‌ಕನಿಕಾ ಪ್ರದೇಶಗಳ ನಡುವೆ ಭೂಮಿಗೆ ಅಪ್ಪಳಿಸಿದೆ. ಇದು ಭೂಮಿಗೆ ಅಪ್ಪಳಿಸುವ ಪ್ರಕ್ರಿಯೆಯು ಶುಕ್ರವಾರ ಮಧ್ಯರಾತ್ರಿ 12.05ಕ್ಕೆ ಆರಂಭವಾಗಿತ್ತು. ಎಂಟೂವರೆ ತಾಸುಗಳ ನಂತರ ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅದು ಪೂರ್ಣಗೊಂಡಿತು ಎಂದು ಐಎಂಡಿ ತಿಳಿಸಿದೆ.

ಗಂಟೆಗೆ 110 ಕಿ.ಮೀ ವೇಗದಲ್ಲಿ ಅಪ್ಪಳಿಸಿದ್ದ 'ಡಾನಾ' ಸದ್ಯ ದುರ್ಬಲಗೊಳ್ಳುತ್ತಿದೆ. ಚಂಡಮಾರುತವು ಒಡಿಶಾದ ವಾಯವ್ಯದತ್ತ ಸಾಗುತ್ತಿದ್ದು, ಮುಂದಿನ ಆರು ತಾಸುಗಳಲ್ಲಿ ದುರ್ಬಲಗೊಳ್ಳುವ ಸಾಧ್ಯತೆ ಇದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ವಿಮಾನ, ರೈಲು ಸೇವೆ ಪುನರಾರಂಭ: 'ಡಾನಾ' ಆರ್ಭಟದಿಂದಾಗಿ ಭುವನೇಶ್ವರ ಮತ್ತು ಕೋಲ್ಕತ್ತದಲ್ಲಿ ಸ್ಥಗಿತಗೊಂಡಿದ್ದ ವಿಮಾನ ಮತ್ತು ರೈಲುಗಳ ಸೇವೆಯು ಶುಕ್ರವಾರ ಬೆಳಿಗ್ಗೆಯಿಂದ ಪುನಃ ಆರಂಭವಾಯಿತು.

ಬಿಜು ಪಟ್ನಾಯಕ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಳಿಗ್ಗೆ 9 ಗಂಟೆಗೆ ವಿಮಾನವೊಂದು ಬಂದಿಳಿಯುವ ಮೂಲಕ ಸೇವೆಯನ್ನು ಪುನರ್ ಆರಂಭಿಸಲಾಯಿತು ಎಂದು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತಿಳಿಸಿದರು.

ಅಕ್ಟೋಬರ್ 24ರ ಸಂಜೆ 5 ಗಂಟೆಯಿಂದ ವಿಮಾನಯಾನ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ರೈಲುಗಳ ಸೇವೆಯನ್ನು ಪುನರಾರಂಭಿಸಲಾಗಿದೆ ಎಂದು ಪೂರ್ವ ಕರಾವಳಿ ರೈಲ್ವೆ ಹೇಳಿಕೆ ಮೂಲಕ ತಿಳಿಸಿದೆ.

ಪೂರ್ವ ಕರಾವಳಿ ರೈಲ್ವೆಯು ಮುಂಜಾಗ್ರತಾ ಕ್ರಮವಾಗಿ ಸುಮಾರು 203 ರೈಲುಗಳ ಸೇವೆಯನ್ನು ಸ್ಥಗಿತಗೊಳಿಸಿತ್ತು.

ಒಡಿಶಾದಲ್ಲಿ ಭಾರಿ ಮಳೆ: ಚಂಡಮಾರುತದಿಂದಾಗಿ ಒಡಿಶಾದ ಕರಾವಳಿ ಪ್ರದೇಶಗಳಲ್ಲಿ ಶುಕ್ರವಾರ ಭಾರಿ ಮಳೆಯಾಯಿತು.

ಪ್ರಾದೇಶಿಕ ಹವಾಮಾನ ಕೇಂದ್ರದ ಪ್ರಕಾರ, ಭದ್ರಕ್ ಜಿಲ್ಲೆಯ ಚಾಂದ್‌ಬಾಲಿಯಲ್ಲಿ 24 ತಾಸುಗಳಲ್ಲಿ (ಗುರುವಾರ ಬೆಳಿಗ್ಗೆ 8.30ರಿಂದ ಶುಕ್ರವಾರದವರೆಗೆ) ಗರಿಷ್ಠ 158 ಎಂ.ಎಂ ಮಳೆಯಾಗಿದೆ. ರಾಜ್‌ಕನಿಕಾದಲ್ಲಿ 156 ಎಂ.ಎಂ ಮಳೆಯಾಗಿದೆ.

ಬಾಸುದೇವಪುರ, ಔಪದ, ರಾಜ್‌ನಗರ ಮುಂತಾದ ಪ್ರದೇಶಗಳಲ್ಲಿ 100 ಎಂ.ಎಂಗೂ ಅಧಿಕ ಮಳೆಯಾಗಿದೆ ಎಂದು ತಿಳಿಸಿದೆ.

ಕೇಂದ್ರಪಡಾ ಜಿಲ್ಲೆಯಲ್ಲಿ 85 ಎಂ.ಎಂ, ಭದ್ರಕ್ ಜಿಲ್ಲೆಯಲ್ಲಿ 67.1 ಎಂ.ಎಂ ಮಳೆ ಸುರಿದಿದೆ ಎಂದು ಅದು ಹೇಳಿದೆ.

ಪಶ್ಚಿಮ ಬಂಗಾಳದ ಹಲವು ಭಾಗಗಳಲ್ಲಿಯೂ ಶುಕ್ರವಾರ ಭಾರಿ ಮಳೆಯಾಗಿದೆ. ಕೋಲ್ಕತ್ತದಲ್ಲಿ ಮಧ್ಯಾಹ್ನ 11.30ರವರೆಗೆ 100 ಎಂ.ಎಂ ಮಳೆಯಾಗಿದೆ. ಧರ್ಮತಲಾ, ಬೆಹಾಲಾ, ಹಜ್ರಾ, ನ್ಯೂ ಮಾರ್ಕೆಟ್ ಸೇರಿದಂತೆ ಹಲವೆಡೆ ಸಾಕಷ್ಟು ಮಳೆ ಸುರಿದಿದೆ.

ಮುಂಜಾಗ್ರತಾ ಕ್ರಮವಾಗಿ ತಗ್ಗು ಪ್ರದೇಶಗಳಿಂದ 2.16 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ಕೇರಳದಲ್ಲಿ 27ರವರೆಗೂ ಮಳೆ: ಐಎಂಡಿ

ತಿರುವನಂತಪುರ (ಪಿಟಿಐ): ಕೇರಳದ ಹಲವು ಪ್ರದೇಶಗಳಲ್ಲಿ ಶುಕ್ರವಾರ ಭಾರಿ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ರಸ್ತೆಗಳು ಜಲಾವೃತವಾಗಿ, ವಾಹನ ದಟ್ಟಣೆ ಉಂಟಾಗಿದೆ.

ತಿರುವನಂತಪುರ, ಕೊಟ್ಟಾಯಂ, ಎರ್ನಾಕುಲಂ, ಇಡುಕ್ಕಿ, ತ್ರಿಶ್ಯೂರ್, ಪತ್ತನತಿಟ್ಟಂ, ಕೊಲ್ಲಂ, ಅಲಪ್ಪುಳ ಜಿಲ್ಲೆಗಳಿಗೆ ಐಎಂಡಿ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ. ಇದಲ್ಲದೆ ಮತ್ತೆ ಮೂರು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಿದೆ.

ರಾಜ್ಯದಲ್ಲಿ ಅಕ್ಟೋಬರ್ 27ರವರೆಗೂ ಭಾರಿ ಮಳೆಯಾಗುವ ಸಾಧ್ಯತೆ ಎಂದು ಅದು ಮುನ್ಸೂಚನೆ ನೀಡಿದೆ.

ಸುದ್ದಿ 2 ನಿಮಿಷ

ಮೇಲ್ಮನವಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಬಾಲಿವುಡ್ ನಟಿ ರಿಯಾ ಚಕ್ರವರ್ತಿ ವಿರುದ್ಧದ ಲುಕ್‌ಔಟ್ ನೋಟಿಸ್ ರದ್ದುಗೊಳಿಸಿದ ಬಾಂಬೆ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ, ಸಿಬಿಐ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠವು, ತನಿಖಾ ಸಂಸ್ಥೆಯ ಮೇಲ್ಮನವಿಯನ್ನು 'ಕ್ಷುಲ್ಲಕ' ಎಂದಿದೆ.

ನಟ ಸುಶಾಂತ್ ಸಿಂಗ್ ರಜಪೂತ್ ಸಾವಿನ ಪ್ರಕರಣದಲ್ಲಿ ನಟಿ ರಿಯಾ ಚಕ್ರವರ್ತಿ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ಲುಕ್‌ಔಟ್ ನೋಟಿಸ್‌ಗಳನ್ನು 2020ರಲ್ಲಿ ಹೊರಡಿಸಲಾಗಿತ್ತು. ಫೆ. 22ರಂದು ಬಾಂಬೆ ಹೈಕೋರ್ಟ್ ಇವನ್ನು ರದ್ದುಗೊಳಿಸಿತ್ತು.

2020ರ ಜೂನ್ 14ರಂದು ಸುಶಾಂತ್ ಸಿಂಗ್, ಬಾಂದ್ರಾದ ಉಪನಗರದಲ್ಲಿನ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ಶವವಾಗಿ ಪತ್ತೆಯಾಗಿದ್ದರು. ಮುಂಬೈ ಪೊಲೀಸರು ಆಕಸ್ಮಿಕ ಸಾವು ಎಂದು ಪ್ರಕರಣ ದಾಖಲಿಸಿಕೊಂಡಿದ್ದರು.

ಸುಶಾಂತ್‌ನ ಗೆಳತಿ ಹಾಗೂ ನಟಿ ರಿಯಾ ಮತ್ತು ಅವರ ಕುಟುಂಬದ ಸದಸ್ಯರು ಆತನ ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ ಎಂದು ಆರೋಪಿಸಿ 2020ರ ಜುಲೈನಲ್ಲಿ ರಜಪೂತ್‌ನ ತಂದೆ ಬಿಹಾರ ಪೊಲೀಸರಿಗೆ ದೂರು ನೀಡಿದ್ದರು. ಈ ಪ್ರಕರಣ ಸಿಬಿಐಗೆ ವರ್ಗಾವಣೆಗೊಂಡಿತ್ತು.

'ಅನಿಶ್ಚಿತತೆಯಲ್ಲೂ ಪ್ರಬಲ ಸಹಭಾಗಿತ್ವ'



ನವದೆಹಲಿ (ಪಿಟಿಐ): 'ವಿಶ್ವವು ಉದ್ವಿಗ್ನತೆ, ಸಂಘರ್ಷ ಮತ್ತು ಅನಿಶ್ಚಿತತೆಯನ್ನು ಎದುರಿಸುತ್ತಿರುವ ಸಮಯದಲ್ಲೂ, ಭಾರತ ಮತ್ತು ಜರ್ಮನಿ ನಡುವಿನ ಕಾರ್ಯತಂತ್ರದ ಸಹಭಾಗಿತ್ವವು ಪ್ರಬಲವಾಗಿ ಹೊರಹೊಮ್ಮಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದ್ದಾರೆ.

ಜರ್ಮನಿಯ ಚಾನ್ಸಲರ್ ಒಲಾಫ್ ಶೋಲ್ಜ್ ಅವರೊಂದಿಗೆ ಸಮಾಲೋಚನೆ ನಡೆಸಿದ ಮೋದಿ, 'ಭಾರತ– ಜರ್ಮನಿ ನಡುವಿನದ್ದು ವಹಿವಾಟಿನ ಸಂಬಂಧವಲ್ಲ; ಎರಡು ಸಮರ್ಥ ಹಾಗೂ ಬಲಾಢ್ಯ ಪ್ರಜಾಪ್ರಭುತ್ವ ರಾಷ್ಟ್ರಗಳ ಪರಿವರ್ತನೆಯ ಪಾಲುದಾರಿಕೆ ಆಗಿದೆ' ಎಂದಿದ್ದಾರೆ.

'ರಕ್ಷಣೆ, ತಂತ್ರಜ್ಞಾನ, ಇಂಧನ, ಹಸಿರು ಮತ್ತು ಸುಸ್ಥಿರ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಸಹಕಾರ ಹೆಚ್ಚುತ್ತಿದೆ. ಇದು ಪರಸ್ಪರ ನಂಬಿಕೆಯ ಸಂಕೇತವಾಗಿದೆ' ಎಂದು ಹೇಳಿದರು.

ಜರ್ಮನಿಯು ಘೋಷಿಸಿರುವ 'ಫೋಕಸ್ ಆನ್ ಇಂಡಿಯಾ' ಕಾರ್ಯತಂತ್ರವನ್ನು ಪ್ರಧಾನಿ ಇದೇ ಸಂದರ್ಭದಲ್ಲಿ ಸ್ವಾಗತಿಸಿದರು.

ಮಣಿಪುರ: ಶಸ್ತ್ರಾಸ್ತ್ರ ವಶ

ಇಂಫಾಲ್ (ಪಿಟಿಐ): ಮಣಿಪುರದ ಪೂರ್ವ ಇಂಫಾಲ್, ಥೌಬಲ್, ಚಂದೇಲ್ ಜಿಲ್ಲೆಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿರುವ ಭದ್ರತಾ ಪಡೆಗಳು ಶಸ್ತ್ರಾಸ್ತ್ರ ಹಾಗೂ ಸ್ಫೋಟಕಗಳನ್ನು ವಶಪಡಿಸಿಕೊಂಡಿವೆ.

ಪತಿಯನ್ನು ಒತ್ತೆಯಾಳಾಗಿಸಿ ಕೃತ್ಯ • ಏಳು ಜನರ ಬಂಧನ

ನವ ವಿವಾಹಿತೆ ಮೇಲೆ ಅತ್ಯಾಚಾರ

ರೇವಾ (ಪಿಟಿಐ): ಪತಿ ಜತೆ ವಿಹಾರಕ್ಕೆ ಬಂದಿದ್ದ ನವ ವಿವಾಹಿತೆ ಮೇಲೆ ಐವರು ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆ ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ನಡೆದಿದೆ. ಈ ಪ್ರಕರಣದ ಸಂಬಂಧ ತನಿಖೆ ನಡೆಸುತ್ತಿರುವ ಪೊಲೀಸರು ಶುಕ್ರವಾರ ಏಳು ಜನರನ್ನು ಬಂಧಿಸಿದ್ದಾರೆ.

ಈ ಕೃತ್ಯ ಗುಢ್ ತಾಲ್ಲೂಕಿನಲ್ಲಿ ಸೋಮವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಏಳು ಜನರನ್ನು ಬಂಧಿಸಲಾಗಿದ್ದು, ಮತ್ತೊಬ್ಬ ಆರೋಪಿಗಾಗಿ ಶೋಧ ನಡೆಸಿದ್ದೇವೆ' ಎಂದು ರೇವಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿವೇಕ್ ಸಿಂಗ್ ಮಾಹಿತಿ ನೀಡಿದರು.

'ಸಂತ್ರಸ್ತೆಯ ಪತಿಯನ್ನು ಒತ್ತೆಯಾಗಿಸಿಕೊಂಡು ಆರೋಪಿಗಳು ಈ ದುಷ್ಕೃತ್ಯ ಎಸಗಿದ್ದಾರೆ' ಎಂದು ಅವರು ತಿಳಿಸಿದರು.

'ಮಹಿಳೆಯ ವಿವಾಹವು ಈಚೆಗಷ್ಟೇ ನಡೆದಿದೆ. ದಂಪತಿಯು 19– 20ರ ವಯೋಮಾನದವರಾಗಿದ್ದು, ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದಾರೆ' ಎಂದು ರೇವಾದ ಡಿಎಸ್‌ಪಿ ಹಿಮಾಲಿ ಪಾಠಕ್ ಹೇಳಿದರು.

ಆರೋಪಿಗಳು ಸಾಮೂಹಿಕ ಅತ್ಯಾಚಾರದ ವಿಡಿಯೊ ಮಾಡಿಕೊಂಡಿದ್ದಾರೆ ಎಂದೂ ಅವರು ತಿಳಿಸಿದರು.

ಮಧ್ಯಪ್ರದೇಶದಲ್ಲಿ ಜಂಗಲ್ ರಾಜ್: ಕಾಂಗ್ರೆಸ್ ಟೀಕೆ

ಘಟನೆ ಸಂಬಂಧ ರಾಜ್ಯದ ಬಿಜೆಪಿ ಸರ್ಕಾರವನ್ನು ಮಧ್ಯಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷ ಜಿತು ಪಟವಾರಿ ತರಾಟೆಗೆ ತೆಗೆದುಕೊಂಡಿದ್ದಾರೆ. 'ಘಟನೆ ನಡೆದು ಎರಡು ದಿನಗಳಾದರೂ ಆ ಕುರಿತ ಮಾಹಿತಿಯನ್ನು ಏಕೆ ಬಹಿರಂಗಪಡಿಸಲಿಲ್ಲ. ಹಾಗದರೇ ಇದೇನು ಜಂಗಲ್ ರಾಜ್ಯವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ಈ ಘಟನೆಯು ಗೃಹ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಗೃಹ ಇಲಾಖೆಯನ್ನು ಜಂಗಲ್ ರಾಜ್ ಇಲಾಖೆ ಎಂದು ಮರುನಾಮಕರಣ ಮಾಡಬೇಕು' ಎಂದು ಅವರು ಟೀಕಿಸಿದ್ದಾರೆ.

'ಸಂತ್ರಸ್ತೆಯ ಪತಿಯನ್ನು ಕಟ್ಟಿಹಾಕಿ, ಅವರ ಮುಂದೆಯೇ ದುಷ್ಕರ್ಮಿಗಳು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಅಪರಾಧ ಕೃತ್ಯಗಳು ನಡೆಯುತ್ತಿದ್ದು, ನಿತ್ಯ 18ರಿಂದ 20 ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಎಂದು ದೂರಿದ್ದಾರೆ.

ಒಬ್ಬನ ಕೈ, ಎದೆ ಮೇಲೆ ಹಚ್ಚೆ: ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಐವರು ಆರೋಪಿಗಳ ಪೈಕಿ ಒಬ್ಬನ ಕೈ ಮತ್ತು ಎದೆಯ ಮೇಲೆ ಹಚ್ಚೆಗಳಿದ್ದವು ಎಂದು ಸಂತ್ರಸ್ತೆ ತಿಳಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

'ಇದು ಸೂಕ್ಷ್ಮ ಪ್ರಕರಣವಾಗಿದ್ದು, ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸದೆ ತನಿಖೆ ನಡೆಸುತ್ತಿದ್ದೇವೆ. ತನಿಖೆಯ ಭಾಗವಾಗಿ 100ಕ್ಕೂ ಹೆಚ್ಚು ಜನರನ್ನು ವಿಚಾರಣೆಗೆ ಒಳಪಡಿಸಿದ್ದೇವೆ' ಎಂದು ಡಿಎಸ್‌ಪಿ ವಿವರಿಸಿದರು.

'ದಂಪತಿ ಮಂಗಳವಾರ ಮಧ್ಯಾಹ್ನ 1.30 ಗಂಟೆಗೆ ಗುಢ್ ಪೊಲೀಸ್ ಠಾಣೆಗೆ ಬಂದು ದೂರು ನೀಡಿದರು. ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ಸಿಬ್ಬಂದಿ ಮತ್ತು ನಾನು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆವು. ಸಂತ್ರಸ್ತೆಯನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ಬಳಿಕ, ಅದೇ ದಿನ ರಾತ್ರಿ 7 ಗಂಟೆಗೆ ಎಫ್‌ಐಆರ್ ದಾಖಲಿಸಲಾಯಿತು' ಎಂದು ಅವರು ಮಾಹಿತಿ ನೀಡಿದರು.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿಯಲ್ಲಿ ಸಾಮೂಹಿಕ ಅತ್ಯಾಚಾರ ಮತ್ತು ಇತರ ಆರೋಪಗಳಡಿ ಪ್ರಕರಣ ದಾಖಲಾಗಿದೆ.

ನಾಲ್ವರು ವೈದ್ಯರ ವಿರುದ್ಧ ಕ್ರಮ

ಬದಾಯು (ಉತ್ತರಪ್ರದೇಶ) (ಪಿಟಿಐ): ಜ್ವರದಿಂದ ಬಳಲುತ್ತಿದ್ದ ಐದು ವರ್ಷದ ಬಾಲಕಿಗೆ ಸಕಾಲದಲ್ಲಿ ಚಿಕಿತ್ಸೆ ಸಿಗದೆ, ಆಕೆ ಮೃತಪಟ್ಟ ಪ್ರಕರಣದ ಸಂಬಂಧ ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಇಬ್ಬರು ಗುತ್ತಿಗೆ ವೈದ್ಯರನ್ನು ಆರೋಗ್ಯ ಇಲಾಖೆಯು ಸೇವೆಯಿಂದ ವಜಾಗೊಳಿಸಿ, ಇನ್ನಿಬ್ಬರು ಕಾಯಂ ವೈದ್ಯರನ್ನು ಅಮಾನತುಗೊಳಿಸಿದೆ.

ಆಸ್ಪತ್ರೆಯ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ಕ್ರಿಕೆಟ್ ಆಟದಲ್ಲಿ ತೊಡಗಿದ್ದರಿಂದ ಚಿಕಿತ್ಸೆ ಸಿಗದೆ ಮಗು ಮೃತಪಟ್ಟಿತು ಎಂದು ಬಾಲಕಿಯ ಕುಟುಂಬದವರು ಆರೋಪಿಸಿದ್ದರು. ಈ ಘಟನೆ ಬಗ್ಗೆ ತನಿಖೆ ನಡೆಸಲು ವೈದ್ಯಕೀಯ ಕಾಲೇಜಿನ ಆಡಳಿತ ಮಂಡಳಿ ಬುಧವಾರ ಮೂವರು ಸದಸ್ಯರ ಸಮಿತಿ ರಚಿಸಿತ್ತು. ಸಮಿತಿಯು ಗುರುವಾರ ಸಂಜೆ ತನಿಖಾ ವರದಿ ಸಲ್ಲಿಸಿದೆ ಎಂದು ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಅರುಣ್ ಕುಮಾರ್ ತಿಳಿಸಿದ್ದಾರೆ.

ಗುತ್ತಿಗೆ ಆಧಾರದಲ್ಲಿ ನೇಮಕವಾಗಿದ್ದ, ಇಎನ್‌ಟಿ ವಿಭಾಗ ಮುಖ್ಯಸ್ಥ ಡಾ. ಶಲಭ್ ವೈಶ್ ಮತ್ತು ಇದೇ ವಿಭಾಗದ ಜೂನಿಯರ್ ರೆಸಿಡೆಂಟ್ (ನಾನ್-ಬಾಂಡ್) ಡಾ. ದಿವ್ಯಾಂಶಿ ಶರ್ಮಾ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಇಎನ್‌ಟಿ ವಿಭಾಗದ ಕಾಯಂ ವೈದ್ಯರಾದ ಡಾ.ಅಭಿಷೇಕ್ ಶರ್ಮಾ ಹಾಗೂ ಮಕ್ಕಳ ವಿಭಾಗದ ಡಾ.ಇಮ್ರಾನ್ ಅವರನ್ನು ತಲಾ ಒಂದು ತಿಂಗಳ ಕಾಲ ಸೇವೆಯಿಂದ ಅಮಾನತುಗೊಳಿಸಲಾಗಿದೆ ಎಂದು ಅವರು ತಿಳಿಸಿದರು.

ಗ್ಯಾನವಾಪಿ: ಅರ್ಜಿ ತಿರಸ್ಕಾರ

ವಾರಾಣಸಿ (ಪಿಟಿಐ): ಗ್ಯಾನವಾಪಿ ಮಸೀದಿ ಸಂಕೀರ್ಣದ ಇಡೀ ಆವರಣದ ಸಮೀಕ್ಷೆಯನ್ನು ಉತ್ಖನನ ಮಾಡಿ ನಡೆಸಬೇಕು ಎಂದು ಕೋರಿ ಹಿಂದೂ ಪರ ಗುಂಪು ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ.

ಹಿಂದೂ ಪರ ವಕೀಲರಾದ ಮದನ್ ಮೋಹನ್ ಯಾದವ್ ಅವರು ಈ ಮಾಹಿತಿ ನೀಡಿದ್ದಾರೆ. ಜಿಲ್ಲಾ ಕೋರ್ಟ್ ಜುಲೈ 2023ರಲ್ಲಿ ನೀಡಿದ್ದ ಆದೇಶದಂತೆ ಎಎಸ್‌ಐ ಸದ್ಯ ವೈಜ್ಞಾನಿಕ ಸಮೀಕ್ಷೆಯನ್ನು ಕೈಗೊಂಡಿದೆ.

ಎಎಸ್‌ಐ ಈ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಡಿ. 18ರಂದು ಜಿಲ್ಲಾ ಕೋರ್ಟ್‌ಗೆ ಸಲ್ಲಿಸಿದೆ. ಈ ಮೊದಲು ದೇಗುಲವಿದ್ದ ಸ್ಥಳದಲ್ಲೇ ಮಸೀದಿ ನಿರ್ಮಿಸಲಾಗಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಯಥಾಸ್ಥಿತಿಗೆ ಆದೇಶಿಸಲು ನಕಾರ

ನವದೆಹಲಿ (ಪಿಟಿಐ): ಗುಜರಾತ್‌ನ ಗಿರ್ ಸೋಮನಾಥ್‌ನಲ್ಲಿ ಕೈಗೊಂಡಿರುವ, ಮುಸ್ಲಿಮರಿಗೆ ಸೇರಿದ ಅನಧಿಕೃತ ಮಸೀದಿ ಮತ್ತು ಇತರೆ ಕಟ್ಟಡಗಳ ನೆಲಸಮ ಕಾರ್ಯಾಚರಣೆಯ ಕುರಿತಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕು ಎಂದು ನಿರ್ದೇಶಿಸಿ ಆದೇಶ ಹೊರಡಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

ಒಡಿಶಾದಲ್ಲಿ ನಕ್ಸಲ್ ಹತ್ಯೆ; ರೈಫಲ್ ವಶ

ಭುವನೇಶ್ವರ (ಪಿಟಿಐ): ಒಡಿಶಾದ ಕಂಧಮಾಲ್ ಜಿಲ್ಲೆಯ ಬುಡಾನ್ಯೆ ಮೀಸಲು ಅರಣ್ಯ ಪ್ರದೇಶದಲ್ಲಿ ಶುಕ್ರವಾರ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ಒಬ್ಬ ಮೃತಪಟ್ಟಿದ್ದಾನೆ.

ಭದ್ರತಾ ಪಡೆಗಳು, ನಕ್ಸಲರು ಅವಿತಿರುವ ಖಚಿತ ಮಾಹಿತಿ ಮೇರೆಗೆ ಅ.23ರ ಬುಧವಾರ ಶೋಧ ಕಾರ್ಯಾಚರಣೆ ಆರಂಭಿಸಿದವು.

ಶುಕ್ರವಾರ ಬೆಳಿಗ್ಗೆ 9 ಗಂಟೆಯ ಆಸುಪಾಸಿನಲ್ಲಿ ಅರಣ್ಯದೊಳಗೆ ವಿಶೇಷ ಕಾರ್ಯಾಚರಣೆ ಪಡೆಯ ಯೋಧರು ಮತ್ತು ನಕ್ಸಲರು ಮುಖಾಮುಖಿಯಾದರು. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ನಕ್ಸಲ್ ಒಬ್ಬ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಗುಂಡಿನ ಚಕಮಕಿ ಬಳಿಕ ಭದ್ರತಾ ಸಿಬ್ಬಂದಿ ತಮ್ಮ ಶೋಧವನ್ನು ಮುಂದುವರಿಸಿದರು. ಈ ವೇಳೆ ನಕ್ಸಲ್‌ನ ಮೃತದೇಹ ಪತ್ತೆಯಾಗಿದೆ. ಜೊತೆಗೆ ಎಕೆ–47 ರೈಫಲ್ ಸಿಕ್ಕಿದೆ ಎಂದಿದ್ದಾರೆ.

ಮೃತನು ಕಂಧಮಾಲ್–ಕಾಳಹಂಡಿ–ಬೌಧ್–ನಾಯಗರ್ ವಿಭಾಗದ ನಕ್ಸಲ್ ಸಂಘಟನೆಯ ಹಿರಿಯನಾಗಿದ್ದ ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಭದ್ರತಾ ಪಡೆಗಳು ಈ ಪ್ರದೇಶದಲ್ಲಿ ತಮ್ಮ ಶೋಧ ಮುಂದುವರಿಸಿವೆ.

ಛತ್ತೀಸಗಢ: ಆರು ನಕ್ಸಲರು ಶರಣು

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಶುಕ್ರವಾರ ಆರು ನಕ್ಸಲರು ಶರಣಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಮ್ಲು ಹೆಮ್ಲಾ ಅಲಿಯಾಸ್ ಪವನ್, ಇವರ ಪತ್ನಿ ಬಂಡಿ ದುಧಿ ಅಲಿಯಾಸ್ ಕಮ್ಲಾ ಮತ್ತು ಬಂಡಿ ಸೋಧಿ ಅಲಿಯಾಸ್ ಬಂಡು, ಮಧ್ವಿ/ನಗ್ಲು ಸುಶೀಲಾ, ಕುಂಜಮ್ ರೋಷನ್ ಅಲಿಯಾಸ್ ಮಹದೇವ್ ಮತ್ತು ಕೋಟೇಶ್ ಸೋಧಿ ಅಲಿಯಾಸ್ ದಶ್ರು ಶರಣಾದವರು.

ಕಮ್ಲು, ಬಂಡಿ, ಬಂಡು, ಸುಶೀಲಾ ಅವರ ತಲೆಗೆ ತಲಾ ₹5 ಲಕ್ಷ ಹಾಗೂ ಮಹದೇವ್ ಮತ್ತು ದಶ್ರು ತಲೆಗೆ ತಲಾ ₹2 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಶರಣಾದವರಿಗೆ ಸರ್ಕಾರದ ಪುನರ್‌ವಸತಿ ಪ್ಯಾಕೇಜ್ ಕಲ್ಪಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಸ್ಫೋಟಕ ವಶ

ಗೊಂದಿಯಾ (ಪಿಟಿಐ): ಮಹಾರಾಷ್ಟ್ರದ ಗೊಂದಿಯಾ ಜಿಲ್ಲೆಯಲ್ಲಿ ನಕ್ಸಲರ ಅಡಗುತಾಣದಿಂದ ಜಿಲೆಟಿನ್ ಕಡ್ಡಿಗಳು, ಸ್ಫೋಟಕಗಳು ಹಾಗೂ ನಕ್ಸಲ್ ಸಾಹಿತ್ಯವನ್ನು ಪೊಲೀಸರು ಗುರುವಾರ ವಶಪಡಿಸಿಕೊಂಡಿದ್ದಾರೆ.

ಸಾಲೆಕಸಾ ಪೊಲೀಸ್ ಠಾಣೆ ವ್ಯಾಪ್ತಿಯ ತಕೆಜಾರಿಯ ಬೆಟ್ಟಗಳಲ್ಲಿ ಅಡಗುತಾಣವನ್ನು ನಕ್ಸಲರು ಹೊಂದಿದ್ದರು ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ತಂತಿಯ ಬಂಡಲ್‌ಗಳು, ಬ್ಯಾಟರಿಗಳು, ಕುಕ್ಕರ್, ಕಬ್ಬಿಣದ ತುಂಡುಗಳು, ಮೊಳೆ ಹಾಗೂ ಇತರ ವಸ್ತುಗಳು ಪತ್ತೆಯಾಗಿವೆ ಎಂದಿದ್ದಾರೆ.

ಬಾರಾಮುಲ್ಲಾ ಜಿಲ್ಲೆಯಲ್ಲಿ ಭಯೋತ್ಪಾದಕರ ಅಟ್ಟಹಾಸ

ಸೇನಾ ವಾಹನದ ಮೇಲೆ ಉಗ್ರರ ದಾಳಿ: 4 ಸಾವು

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಸೇನಾ ವಾಹನದ ಮೇಲೆ ಉಗ್ರರು ನಡೆಸಿದ್ದ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ ನಾಲ್ಕಕ್ಕೆ ಏರಿದೆ. ಮೃತರಲ್ಲಿ ಇಬ್ಬರು ಯೋಧರೂ ಸೇರಿದ್ದಾರೆ.

ಪಾಕಿಸ್ತಾನ ಗಡಿಯಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣ ಗುಲ್ಮಾರ್ಗ್‌ನಿಂದ 6 ಕಿ.ಮೀ ದೂರದಲ್ಲಿರುವ ಬೋಟಾ ಪಥ್ರಿ ಎಂಬಲ್ಲಿ ಘಟನೆ ನಡೆದಿದೆ. ಸೇನಾ ವಾಹನವು ನಾಗಿನ್‌ಗೆ ತೆರಳುತ್ತಿದ್ದ ವೇಳೆ ಉಗ್ರರು ಸಂಚು ದಾಳಿ ನಡೆಸಿದ್ದಾರೆ. ಈ ವೇಳೆ ವಾಹನದಲ್ಲಿದ್ದ ಇಬ್ಬರು ಯೋಧರು ಹುತಾತ್ಮರಾಗಿದ್ದು, ಇಬ್ಬರು ಸೇನಾ ಸಿಬ್ಬಂದಿ ಸಾವಿಗೀಡಾಗಿದ್ದಾರೆ. ಒಬ್ಬ ಯೋಧ ಹಾಗೂ ಸಿಬ್ಬಂದಿ ಗಾಯಗೊಂಡಿದ್ದಾರೆ.

ಪೀಪಲ್ಸ್ ಆ್ಯಂಟಿ ಫ್ಯಾಸಿಸ್ಟ್ ಫ್ರಂಟ್ (ಪಿಎಎಫ್‌ಎಫ್) ಎಂಬ ಉಗ್ರಗಾಮಿ ಸಂಘಟನೆ ದಾಳಿಯ ಹೊಣೆ ಹೊತ್ತಿದೆ. ಈ ಸಂಘಟನೆಯು ಪಾಕಿಸ್ತಾನ ಮೂಲದ ಜೈಶ್–ಎ–ಮೊಹಮ್ಮದ್ ಗುಂಪಿನ ಭಾಗವೆಂದು ಅಧಿಕಾರಿಗಳು ತಿಳಿಸಿದ್ದಾರೆ.

ದಾಳಿಕೋರರಿಗಾಗಿ ಭಾರಿ ಶೋಧ ಕಾರ್ಯಾಚರಣೆ ಆರಂಭಿಸಲಾಗಿದ್ದು, ಇದಕ್ಕಾಗಿ ಸ್ಥಳದಲ್ಲಿ ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ಸೇನೆ ಮತ್ತು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳು ಕಾರ್ಯಾಚರಣೆಯ ಮೇಲ್ವಿಚಾರಣೆ ವಹಿಸಿದ್ದಾರೆ. ದಾಳಿ ನಡೆದಿರುವ ಸುತ್ತಲಿನ ಪ್ರದೇಶದಲ್ಲಿ ಎಲ್ಲ ಮಾರ್ಗಗಳನ್ನು ಸ್ಥಗಿತಗೊಳಿಸಲಾಗಿದ್ದು, ಡ್ರೋನ್ ಮತ್ತು ಹೆಲಿಕಾಪ್ಟರ್‌ಗಳ ಮೂಲಕ ಸ್ಥಳೀಯ ಅರಣ್ಯದಲ್ಲಿ ಶೋಧ ನಡೆಸಲಾಗುತ್ತಿದೆ. ಘಟನೆ ಬಳಿಕ ಸ್ಥಳದಿಂದ ಗುಲ್ಮಾರ್ಗ್‌ನಲ್ಲಿರುವ ಕೇಬಲ್ ಕಾರ್ ರೋಪ್ ವೇ ಸೇವೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಭದ್ರತಾ ಪರಿಶೀಲನೆ ಬಳಿಕ ಪುನರಾರಂಭಿಸಲಾಯಿತು ಎಂದು ಪೊಲೀಸ್ ಹಾಗೂ ಸೇನಾಧಿಕಾರಿಗಳು ಮಾಹಿತಿ ನೀಡಿದರು.

ಈ ಪ್ರದೇಶವು ಸಂಪೂರ್ಣವಾಗಿ ಸೇನಾ ಪ್ರಾಬಲ್ಯದಲ್ಲಿದೆ. ಆದರೆ ಬೇಸಿಗೆ ವೇಳೆ ಉಗ್ರರು ನುಗ್ಗಿದ್ದಾರೆ. ಅಪಹರವಾಟ್ ಶ್ರೇಣಿಯ ಎತ್ತರದ ಪ್ರದೇಶದಲ್ಲಿ ಅಡಗಿಕೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ. ಬೋಟಾ ಪಥ್ರಿ ಪ್ರದೇಶವನ್ನೂ ಇತ್ತೀಚೆಗೆ ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ.

> **ಉಗ್ರರು ನಡೆಸಿದ ದಾಳಿಯಲ್ಲಿ ಯೋಧರು ಹುತಾತ್ಮರಾದ ಸುದ್ದಿ ಅತ್ಯಂತ ದುಃಖಕರವಾಗಿದೆ. ಸಮಾಜದಲ್ಲಿ ಹಿಂಸಾಚಾರ ಮತ್ತು ಭಯೋತ್ಪಾದನೆ ಸ್ವೀಕಾರಾರ್ಹವಲ್ಲ**
> **ಪ್ರಿಯಾಂಕಾ ಗಾಂಧಿ,** ಕಾಂಗ್ರೆಸ್ ನಾಯಕಿ

ಮುಖ್ಯಾಂಶಗಳು
- ಗುಲ್ಮಾರ್ಗ್‌ನಿಂದ 6 ಕಿ.ಮೀ ದೂರದಲ್ಲಿ ಘಟನೆ
- ದಾಳಿಯ ಹೊಣೆ ಹೊತ್ತ ಪಿಎಎಫ್‌ಎಫ್ ಉಗ್ರ ಸಂಘಟನೆ
- ಸ್ಥಳದಲ್ಲಿ ಭಾರಿ ಶೋಧ ಕಾರ್ಯಾಚರಣೆ, ಡ್ರೋನ್ ಹೆಲಿಕಾಪ್ಟರ್ ನೆರವು



ಸೇನಾ ವಾಹನದ ಮೇಲೆ ಉಗ್ರರ ದಾಳಿ ನಡೆದ ಬಳಿಕ ಸ್ಥಳದಲ್ಲಿ ಯೋಧರು ಭದ್ರತಾ ಕಾರ್ಯಾಚರಣೆ ನಡೆಸಿದರು ಪಿಟಿಐ ಚಿತ್ರ

ಒಮರ್ ಆತಂಕ

ಘಟನೆ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಜಮ್ಮು–ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು, 'ಇತ್ತೀಚೆಗಿನ ದಾಳಿಗಳ ಸರಣಿಯು ಗಂಭೀರ ವಿಷಯವಾಗಿದೆ. ಪಾಕಿಸ್ತಾನವು ಇಂತಹ ಕೃತ್ಯವನ್ನು ನಿಲ್ಲಿಸಬೇಕು. ಭಾರತ ಹಾಗೂ ಪಾಕಿಸ್ತಾನ ಮಾತುಕತೆ ನಡೆಸುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸದ ಹೊರತು ಇಂತಹ ಪ್ರಕರಣಗಳು ಮರುಕಳಿಸಲಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
TATA



ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Vijayanagar
ಹೂವಿನಹಡಗಲಿ ತಾಲೂಕು ಶ್ರೀಕ್ಷೇತ್ರ ಮೈಲಾರದಲ್ಲಿ ನದಿ ದಂಡೆಯಲ್ಲಿರುವ 15 ರಿಂದ 20 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ: 9590088767

Chitradurga
ಚಿಕ್ಕೇನಹಳ್ಳಿ ಸಿರಿಗೆರೆಯಿಂದ ಭೀಮಸಮುದ್ರ ಹೋಗುವ ರೋಡ್ ಹತ್ತಿರ 5ಎಕರೆ ಅಡಿಕೆ ತೋಟ ಮಾರಾಟಕ್ಕಿದೆ, 3300 ಅಡಿಕೆಗಿಡಗಳು, 4ಬೋರ್‌ವೆಲ್‌ಗಳು. 9590045633

ಉದ್ಯೋಗಾವಕಾಶ
Drivers
ಯಲಹಂಕದ ವಿಶೇಷ ಮಕ್ಕಳ ಶಾಲೆಗೆ ಡ್ರೈವರ್ಸ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ. +91 9606272996

General
✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
REQUIRED SUPERVISOR for construction company near R T nagar freshers apply diploma in civil call 9986042303


ಭವಿಷ್ಯ
Astrology
ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಫೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

ಒಂದೇಗಂಟೆಯಲ್ಲಿ 100%ಗ್ಯಾರಂಟಿ ಶಾಶ್ವತಪರಿಹಾರ,ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಪಂಡಿತ್. ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ
Travel
04.01.2025 12.03.2025 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 13.01.2025 ದುಬೈ,ಅಬುದಾಬಿ 5 ದಿನಗಳು. 23.11.2024 ಭೂತಾನ್ 8 ದಿನಗಳು. 14.12.2024 11.01.2025 ಶ್ರೀಲಂಕಾ 6 ದಿನಗಳು. 30.11.2024 ಅಸ್ಸಾಂ,ಮೇಘಾಲಯ 9 ದಿನಗಳು. 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 18.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply



ಮಿಚೆಲ್ ಸ್ಯಾಂಟನರ್ 19.3-1-53-7

ಎಎಫ್‌ಪಿ ಚಿತ್ರಗಳು

ಪುಣೆ ಟೆಸ್ಟ್: ರೋಹಿತ್ ಪಡೆಯ ಕಳಪೆ ಬ್ಯಾಟಿಂಗ್ • 301 ರನ್ ಮುನ್ನಡೆಯಲ್ಲಿ ಕಿವೀಸ್

ಮಿಚೆಲ್ ಸ್ಯಾಂಟನರ್ ಸ್ಪಿನ್ ಆಟ

ಪ್ರಜಾವಾಣಿ ವಾರ್ತೆ

ಪುಣೆ: ಭಾರತ ತಂಡವು ಸ್ಪಿನ್ ಬೌಲಿಂಗ್‌ನಲ್ಲಿ ಉತ್ತಮವಾಗಿರಬಹುದು. ಆದರೂ ಸ್ಪಿನ್ ಎದುರು ಆಡಲು ಸಮರ್ಥವಾಗಿಲ್ಲ.

ಅವರಿಗೆ ಸ್ವಿಂಗ್ ಬೌಲಿಂಗ್ ಎದುರಿನ ಆಟ ನಿರ್ವಹಣೆ ಕೂಡ ಅಷ್ಟಕ್ಕಷ್ಟೇ ಎಂಬುದೂ ಖಚಿತ. ಈಚೆಗೆ ಬೆಂಗಳೂರಿನಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಅನುಭವಿಸಿದ ಸೋಲು ಇದಕ್ಕೆ ಸಾಕ್ಷಿ. ಉಪಖಂಡದಲ್ಲಿ ಚುರುಕಾದ ಪಾದಚಲನೆಯ ಪಾರಂಗತರೆನಿಸಿಕೊಂಡಿರುವ ತಂಡಕ್ಕೆ ಸ್ಪಿನ್ ಬೌಲಿಂಗ್ ಎಂಬುದು ಉಪಜೀವನವೇ ಆಗಿರಬೇಕಿತ್ತು.

ಒಂದೊಮ್ಮೆ ಈ ಮಾತೇ ಸತ್ಯವಾಗಿದ್ದರೆ, ಶುಕ್ರವಾರ ಅವರು ಎಡಗೈ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್‌ಗೆ ಏಳು ವಿಕೆಟ್ ಮತ್ತು ಸಾಂದರ್ಭಿಕ ಆಫ್‌ಸ್ಪಿನ್ನರ್ ಗ್ಲೆನ್ ಫಿಲಿಪ್ಸ್‌ಗೆ ಎರಡು ವಿಕೆಟ್‌ಗಳ ಕಾಣಿಕೆ ಕೊಡುತ್ತಿರಲಿಲ್ಲ. ಇದರಿಂದಾಗಿ 2012ರ ನಂತರ ತವರಿನಲ್ಲಿ ಒಂದೂ ಟೆಸ್ಟ್ ಸರಣಿ ಸೋಲದ ಭಾರತದ ದಾಖಲೆಗೆ ಈಗ ಕುತ್ತು ಬಂದಿದೆ.

ಕಳೆದ 13 ವರ್ಷಗಳಲ್ಲಿ ಕೆಲವು ಸರಣಿಗಳಲ್ಲಿ ಬ್ಯಾಟರ್‌ಗಳು ಮಿಂಚಿದರು. ಇನ್ನೂ ಕೆಲವು ಸರಣಿಗಳಲ್ಲಿ ಬೌಲರ್‌ಗಳು ಪಾರಮ್ಯ ಮೆರೆದರು. ಅದರಿಂದಾಗಿ ಭಾರತ ತಂಡವು ಸೋಲು ತಪ್ಪಿಸಿಕೊಳ್ಳುತ್ತಲೇ ಬಂದಿದೆ. ಆದರೆ ಇದೀಗ ಪ್ರವಾಸಿ ತಂಡದ ಸ್ಪಿನ್ನರ್‌ಗಳು ಚಾರಿತ್ರಿಕ ಸಾಧನೆಯ ಹೊಸ್ತಿಲಲ್ಲಿದ್ದಾರೆ. ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದ್ವಿತೀಯ ಟೆಸ್ಟ್ ಪಂದ್ಯದ ಎರಡನೇ ದಿನದಾಟದಲ್ಲಿ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 103 ರನ್‌ಗಳ ಭಾರಿ ಹಿನ್ನಡೆ ಅನುಭವಿಸಿದೆ.

ಗುರುವಾರ ನ್ಯೂಜಿಲೆಂಡ್ ತಂಡವನ್ನು 259 ರನ್‌ಗಳ ಮೊತ್ತಕ್ಕೆ ನಿಯಂತ್ರಿಸಲು ವಾಷಿಂಗ್ಟನ್ ಸುಂದರ್ (59ಕ್ಕೆ7) ಮಾಡಿದ್ದ ಕೆಲಸವನ್ನೇ ಎರಡನೇ ದಿನದಾಟದಲ್ಲಿ ಸ್ಯಾಂಟನರ್ ಮಾಡಿದರು. ಭಾರತ ತಂಡವು ಕೇವಲ 156 ರನ್‌ಗಳಿಗೆ ಕುಸಿಯಿತು. ಎರಡನೇ ಇನಿಂಗ್ಸ್ ಆರಂಭಿಸಿದ ಪ್ರವಾಸಿ ಬಳಗವು ನಾಯಕ ಟಾಮ್ ಲೇಥಮ್ (86; 133ಎ) ಅವರ ಆಟದ ಬಲದಿಂದ ದಿನದಾಟದ ಕೊನೆಗೆ 53 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 198 ರನ್ ಗಳಿಸಿತು. ಇದರೊಂದಿಗೆ ಒಟ್ಟು 301 ರನ್‌ಗಳ ಮುನ್ನಡೆ ಸಾಧಿಸಿದೆ. ಈ ಇನಿಂಗ್ಸ್‌ನಲ್ಲಿಯೂ ತಮಿಳುನಾಡಿನ ವಾಷಿಂಗ್ಟನ್ (56ಕ್ಕೆ4) ಮತ್ತು ಅಶ್ವಿನ್ (64ಕ್ಕೆ1) ವಿಕೆಟ್‌ಗಳನ್ನು ಗಳಿಸಿದರು.



ವಾಷಿಂಗ್ಟನ್ ಸುಂದರ್

ಪಂದ್ಯದಲ್ಲಿ ಇನ್ನೂ ಮೂರು ದಿನಗಳು ಬಾಕಿಯಿವೆ. ತ್ವರಿತವಾಗಿ ಕ್ಷೀಣಿಸುತ್ತಿರುವ ಪಿಚ್‌ನಲ್ಲಿ ಬ್ಯಾಟಿಂಗ್ ಸುಲಭವಲ್ಲ. ಆದ್ದರಿಂದ ಶನಿವಾರ ಸಂಜೆಯ ಹೊತ್ತಿಗೆ ಪಂದ್ಯ ಮುಗಿದರೂ ಅಚ್ಚರಿಯಿಲ್ಲ.

ಪಂದ್ಯದಲ್ಲಿ ಸೋಲು ತಪ್ಪಿಸಿಕೊಳ್ಳಬೇಕಾದರೆ ಆತಿಥೇಯರು ಅಪಾರ ಪರಿಶ್ರಮ ಮತ್ತು ತಾಳ್ಮೆಯಿಂದ ಬ್ಯಾಟಿಂಗ್ ಮಾಡಬೇಕು. ಆಗ ಮಾತ್ರ ಐದು ವರ್ಷಗಳ ನಂತರ ನ್ಯೂಜಿಲೆಂಡ್ ತಂಡವು ವಿದೇಶಿ ನೆಲದಲ್ಲಿ ಟೆಸ್ಟ್ ಸರಣಿ ಜಯಿಸುವುದನ್ನು ತಡೆಯಲು ಸಾಧ್ಯವಾಗುತ್ತದೆ.

ಆದರೆ, ಸ್ಯಾಂಟನರ್ ಅವರನ್ನು ಎದುರಿಸಿ ನಿಲ್ಲುವ ಸವಾಲು ಅವರ ಮುಂದಿದೆ. ಸದ್ಯ ನ್ಯೂಜಿಲೆಂಡ್ ತಂಡದ ಸೂಪರ್‌ಮ್ಯಾನ್ ಆಗಿರುವ ಸ್ಯಾಂಟನರ್ (28 ಟೆಸ್ಟ್‌ಗಳಲ್ಲಿ 42.16ರ ಸರಾಸರಿಯಲ್ಲಿ 54 ವಿಕೆಟ್ ಗಳಿಸಿದ್ದಾರೆ) ಅವರನ್ನು ಪ್ರಮುಖ ಸ್ಪಿನ್ನರ್ ಎಜಾಜ್ ಪಟೇಲ್ ಅವರಿಗೆ ಜೊತೆ ನೀಡಲು ಆಯ್ಕೆ ಮಾಡಲಾಗಿತ್ತು. ಆದರೆ ಭಾರತದ ಬೌಲರ್‌ಗಳು ಮೊದಲ ಇನಿಂಗ್ಸ್‌ನಲ್ಲಿ ಅನುಸರಿಸಿದ್ದ ತಂತ್ರಗಾರಿಕೆಯನ್ನು (ನ್ಯೂಜಿಲೆಂಡ್ ಬ್ಯಾಟಿಂಗ್ ಕೋಚ್ ಲೂಕ್ ರಾಂಚಿ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು) ಸ್ಯಾಂಟನರ್ ಅನುಸರಿಸಿದರು.

ಸ್ಯಾಂಟನರ್ ಅವರು ಪ್ರತಿ ಗಂಟೆಗೆ 75 ರಿಂದ 95 ಕಿಲೋಮೀಟರ್ಸ್ ವೇಗದ ಎಸೆತಗಳನ್ನು ಪ್ರಯೋಗಿಸಿದರು. ಲೆಂಗ್ತ್‌ನಲ್ಲಿ ತಾವೇ ಆಯ್ದ ಕೆಲವು ಪ್ಯಾಚ್‌ಗಳಲ್ಲಿ ಚೆಂಡು ಭೂಸ್ಪರ್ಷ ಮಾಡುವಂತೆ ನೋಡಿಕೊಂಡರು. ಅದು ಅವರಿಗೆ ಹೆಚ್ಚು ಲಾಭ ನೀಡಿತು. ಗುರುವಾರ ಸಂಜೆ ರೋಹಿತ್ ಶರ್ಮಾ ಅವರನ್ನು ಟಿಮ್ ಸೌಥಿ ಕ್ಲೀನ್‌ಬೌಲ್ಡ್ ಮಾಡಿದ್ದರು. ಉಳಿದ 9 ವಿಕೆಟ್‌ಗಳನ್ನು ಸ್ಯಾಂಟನರ್ ಮತ್ತು ಫಿಲಿಪ್ಸ್ ಹಂಚಿಕೊಂಡರು. ಅದರಲ್ಲಿ ಮೂರು ವಿಕೆಟ್‌ಗಳು (ವಿರಾಟ್ ಕೊಹ್ಲಿ, ರಿಷಭ್ ಪಂತ್ ಮತ್ತು ಸರ್ಫರಾಜ್ ಖಾನ್) ಉಡುಗೊರೆಯಂತೆ ಒಲಿದವು.

ರಾಹುಲ್ ದ್ರಾವಿಡ್ ಅವರು 2010ರಲ್ಲಿ ಇಂಗ್ಲೆಂಡ್‌ನ ಕೆವಿನ್ ಪೀಟರ್ಸನ್ ಅವರಿಗೆ ಸ್ಪಿನ್ ಎದುರಿಸುವ ಕುರಿತು ಬರೆದ ಪತ್ರ ನೆನಪಿದೆಯಲ್ಲವೇ? ಆ ಪತ್ರ ಮತ್ತು ಅದರಿಂದ ಕಲಿತ ಅಂಶಗಳು 2012ರಲ್ಲಿ ಇಂಗ್ಲೆಂಡ್ ತಂಡವು ಭಾರತದಲ್ಲಿ ಟೆಸ್ಟ್ ಸರಣಿ ಜಯಿಸಲು ಸಹಾಯಕವಾಗಿದ್ದವಲ್ಲವೇ?

ಬಹುಶಃ ದ್ರಾವಿಡ್ ಅವರು ಈಗ ಮತ್ತೆ ಪತ್ರಗಳನ್ನು ಬರೆಯಲು ಶುರು ಮಾಡಬೇಕಾಗಬಹುದು.



ಟಾಮ್ ಲೇಥಮ್
ರನ್ 86
ಎಸೆತ 133
ಬೌಂಡರಿ 10

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 259 (79.1 ಓವರ್‌ಗಳಲ್ಲಿ).

ಭಾರತ: 156 (45.3 ಓವರ್‌ಗಳಲ್ಲಿ (ಗುರುವಾರ 11 ಓವರ್‌ಗಳಲ್ಲಿ 1ಕ್ಕೆ 16)

ಜೈಸ್ವಾಲ್ ಸಿ ಮಿಚೆಲ್ ಬಿ ಫಿಲಿಪ್ಸ್ 30 (60ಎ, 4x4)
ಶುಭಮನ್ ಎಲ್‌ಬಿಡಬ್ಲ್ಯು ಬಿ ಸ್ಯಾಂಟನರ್ 30 (72ಎ, 4x2, 6x1)
ವಿರಾಟ್ ಬಿ ಸ್ಯಾಂಟನರ್ 1 (9ಎ)
ರಿಷಭ್ ಬಿ ಫಿಲಿಪ್ಸ್ 18 (19ಎ, 4x2)
ಸರ್ಫರಾಜ್ ಸಿ ರೂರ್ಕಿ ಬಿ ಸ್ಯಾಂಟನರ್ 11 (24ಎ, 4x1)
ಜಡೇಜ ಎಲ್‌ಬಿಡಬ್ಲ್ಯು ಬಿ ಸ್ಯಾಂಟನರ್ 38 (46ಎ, 4x3, 6x2)
ಅಶ್ವಿನ್ ಎಲ್‌ಬಿಡಬ್ಲ್ಯು ಬಿ ಸ್ಯಾಂಟನರ್ 4 (5ಎ)
ವಾಷಿಂಗ್ಟನ್ ಸುಂದರ್ ಔಟಾಗದೇ 18 (21ಎ, 4x2, 6x1)
ಆಕಾಶ್ ಬಿ ಸ್ಯಾಂಟನರ್ 6 (5ಎ, 6X1)
ಬೂಮ್ರಾ ಎಲ್‌ಬಿಡಬ್ಲ್ಯು ಬಿ ಸ್ಯಾಂಟನರ್ 0 (3ಎ)
ಇತರೆ: 0
ವಿಕೆಟ್ ಪತನ: 2-50 (ಶುಭಮನ್ ಗಿಲ್, 21.3), 3-56 (ವಿರಾಟ್ ಕೊಹ್ಲಿ, 23.4), 4-70 (ಯಶಸ್ವಿ ಜೈಸ್ವಾಲ್, 26.4), 5-83 (ರಿಷಭ್ ಪಂತ್, 30.2), 6-95 (ಸರ್ಫರಾಜ್ ಖಾನ್, 33.6), 7-103 (ರವಿಚಂದ್ರನ್ ಅಶ್ವಿನ್, 35.5), 8-136 (ರವೀಂದ್ರ ಜಡೇಜ, 43.1), 9-142 (ಆಕಾಶ್ ದೀಪ್, 43.6), 10-156 (ಜಸ್‌ಪ್ರೀತ್ ಬೂಮ್ರಾ, 45.3)
ಬೌಲಿಂಗ್: ಟಿಮ್ ಸೌಥಿ 6-1-18-1, ವಿಲಿಯಂ ಓ ರೂರ್ಕಿ 3-2-5-0, ಎಜಾಜ್ ಪಟೇಲ್ 11-1-54-0, ಮಿಚೆಲ್ ಸ್ಯಾಂಟನರ್ 19.3-1-53-7, ಗ್ಲೆನ್ ಫಿಲಿಪ್ಸ್ 6-0-26-2

ಎರಡನೇ ಇನಿಂಗ್ಸ್: ನ್ಯೂಜಿಲೆಂಡ್: 5ಕ್ಕೆ 198 (53 ಓವರ್‌ಗಳಲ್ಲಿ)

ಲೇಥಮ್ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ 86 (133ಎ, 4X10)
ಕಾನ್ವೆ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ 17 (25ಎ, 4X2)
ಯಂಗ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 23 (28ಎ, 4X2)
ರಚಿನ್ ಬಿ ವಾಷಿಂಗ್ಟನ್ 9 (13ಎ, 4X1)
ಡ್ಯಾರಿಲ್ ಸಿ ಜೈಸ್ವಾಲ್ ಬಿ ವಾಷಿಂಗ್ಟನ್ 18 (23ಎ, 4X2)
ಟಾಮ್ ಬ್ಲಂಡೆಲ್ ಔಟಾಗದೇ 30 (70ಎ, 4X2)
ಗ್ಲೆನ್ ಫಿಲಿಪ್ಸ್ ಔಟಾಗದೇ 9 (29ಎ, 4X1)
ಇತರೆ: 6 (ಲೆಗ್ ಬೈ 3, ನೋಬಾಲ್ 3)
ವಿಕೆಟ್ ಪತನ: 1-36 (ಡೆವೊನ್ ಕಾನ್ವೆ, 9.2), 2-78 (ವಿಲ್ ಯಂಗ್, 18.3), 3-89 (ರಚಿನ್ ರವೀಂದ್ರ, 21.5), 4-123 (ಡ್ಯಾರಿಲ್ ಮಿಚೆಲ್, 29.2), 5-183 (ಟಾಮ್ ಲೇಥಮ್, 44.4)
ಬೌಲಿಂಗ್: ರವಿಚಂದ್ರನ್ ಅಶ್ವಿನ್ 17-1-64-1, ವಾಷಿಂಗ್ಟನ್ ಸುಂದರ್ 19-0-56-4, ರವೀಂದ್ರ ಜಡೇಜ 11-1-50-0, ಜಸ್‌ಪ್ರೀತ್ ಬೂಮ್ರಾ 6-1-25-0

‘ಸ್ಪಿನ್ ಎದುರು ರಚಿನ್ ಉತ್ತಮ ಬ್ಯಾಟರ್’


ಬೆಂಗಳೂರು: ನ್ಯೂಜಿಲೆಂಡ್ ಕ್ರಿಕೆಟ್ ತಂಡದ ಆಟಗಾರ ರಚಿನ್ ರವೀಂದ್ರ ಅವರು ಸ್ಪಿನ್ ಬೌಲಿಂಗ್ ಅನ್ನು ಬಹಳ ಚೆನ್ನಾಗಿ ಆಡುತ್ತಾರೆ. ಪಕ್ಕಾ ಭಾರತದ ಬ್ಯಾಟರ್ ರೀತಿಯಲ್ಲಿ ಅವರು ಆಡುತ್ತಾರೆ ಎಂದು ಜಿಯೊ ಸಿನಿಮಾ ಮತ್ತು ಸ್ಪೋರ್ಟ್ಸ್ 18 ಕ್ರಿಕೆಟ್ ಪರಿಣತ ಆಕಾಶ್ ಚೋಪ್ರಾ ಶ್ಲಾಘಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ರಚಿನ್ ಶತಕ ಗಳಿಸಿದ್ದರು. ಪುಣೆಯಲ್ಲಿ ನಡೆಯುತ್ತಿರುವ ಎರಡನೇ ಟೆಸ್ಟ್ ಮೊದಲ ಇನಿಂಗ್ಸ್ ನಲ್ಲಿ ರಚಿನ್ ಅರ್ಧಶತಕ ಗಳಿಸಿದ್ದರು. ‘ಅವರು ಬಹಳ ಸುಂದರವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಅವರ ಶೈಲಿ ಸೊಗಸಾಗಿದೆ. ಹೊಡೆತ ಗಳು ನವಿರಾಗಿವೆ. ಪಾದಚಲನೆ ಅದ್ಭುತ ವಾಗಿದೆ. ರಕ್ಷಣಾತ್ಮಕ ವಾಗಿ ಆಡುವ ಏಕಾಗ್ರತೆ ಮತ್ತು ನಿಯಂತ್ರಣ ಅಮೋಘವಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅವರಲ್ಲಿ ಅಪಾರ ಆತ್ಮವಿಶ್ವಾಸ ಇದೆ’ ಎಂದರು.

‘ಹಲವು ವಿದೇಶಿ ಆಟಗಾರರು ಭಾರತಕ್ಕೆ ಮೊದಲ ಸಲ ಬಂದಾಗ ಉತ್ತಮ ಆಟವಾಡಲು ಕಷ್ಟಪಡುತ್ತಾರೆ. ಆದರೆ ರಚಿನ್ ಲೀಲಾಜಾಲವಾಗಿ ಆಡುತ್ತಿದ್ದಾರೆ’ ಎಂದು ಆಕಾಶ್ ರೌಂಡ್ ಟೇಬಲ್ ಸಂವಾದದಲ್ಲಿ ಅಭಿಪ್ರಾಯಪಟ್ಟರು.

ವಿರಾಟ್ ಔಟ್; ಬೌಲರ್‌ಗೆ ಅಚ್ಚರಿ: ಕಿವೀಸ್ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಅವರಿಗೆ ಭಾರತ ತಂಡದ ಬ್ಯಾಟಿಂಗ್ ಚಾಂಪಿಯನ್ ವಿರಾಟ್ ಕೊಹ್ಲಿ ಅವರ ವಿಕೆಟ್ ಗಳಿಸಿದ ಖುಷಿಯ ಜೊತೆಗೆ ಅಚ್ಚರಿಯನ್ನೂ ಮೂಡಿಸಿದೆ.

‘ಕೊಹ್ಲಿ ಅವರು ಫುಲ್‌ಟಾಸ್ ಎಸೆತಕ್ಕೆ ಔಟಾಗಿದ್ದು ನನಗ ಬಹಳ ಆಶ್ಚರ್ಯವಾಗಿದೆ. ಅಂತಹ ಎಸೆತಗಳನ್ನು ಅವರು ಎಂದಿಗೂ ತಪ್ಪುವುದಿಲ್ಲ’ ಎಂದು ಸ್ಯಾಂಟನರ್ ಅವರು ದಿನದಾಟದ ನಂತರದ ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಕೆಲವು ಪ್ರಮುಖ ಕ್ರೀಡೆಗಳನ್ನು ಕಾಮನ್‌ವೆಲ್ತ್‌ನಿಂದ ಕೈಬಿಡಲಾಗಿದೆ!

ಆಸ್ಟ್ರೇಲಿಯಾ ಟೆಸ್ಟ್ ಸರಣಿ ಹರ್ಷಿತ್, ಈಶ್ವರನ್‌ಗೆ ಸ್ಥಾನ

ನವದೆಹಲಿ(ಪಿಟಿಐ): ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಬಾರ್ಡರ್– ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಬ್ಯಾಟರ್ ಅಭಿಮನ್ಯು ಈಶ್ವರನ್ ಮತ್ತು ಬೌಲರ್ ಹರ್ಷಿತ್ ರಾಣಾ ಸ್ಥಾನ ಪಡೆದಿದ್ದಾರೆ.

ರೋಹಿತ್ ಶರ್ಮಾ ನಾಯಕತ್ವದಲ್ಲಿ 18 ಆಟಗಾರರ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಕರ್ನಾಟಕದ ಕೆ.ಎಲ್. ರಾಹುಲ್ ಮತ್ತು ಪ್ರಸಿದ್ಧಕೃಷ್ಣ ಅವರನ್ನೂ ಬಳಗದಲ್ಲಿ ಉಳಿಸಿಕೊಳ್ಳಲಾಗಿದೆ. ಕನ್ನಡಿಗ ವೈಶಾಖ ವಿಜಯಕುಮಾರ್ ಅವರಿಗೆ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಆಡಲಿರುವ ಭಾರತ ತಂಡದಲ್ಲಿ ಸ್ಥಾನ ಲಭಿಸಿದೆ. ಸೂರ್ಯಕುಮಾರ್ ಯಾದವ್ ಈ ತಂಡಕ್ಕೆ ನಾಯಕರಾಗಿದ್ದಾರೆ.

ನ್ಯೂಜಿಲೆಂಡ್ ಎದುರಿನ ಎರಡನೇ ಟೆಸ್ಟ್ ಮೊದಲ ಇನಿಂಗ್ಸ್‌ನಲ್ಲಿ 7 ವಿಕೆಟ್ ಪಡೆದಿದ್ದ ವಾಷಿಂಗ್ಟನ್ ಸುಂದರ್ ಕೂಡ ಸ್ಥಾನ ಉಳಿಸಿಕೊಂಡಿದ್ದಾರೆ.

ಐಪಿಎಲ್‌ನಲ್ಲಿ ಮಿಂಚಿರುವ ಹರ್ಷಿತ್, ನಿತೀಶ ಕುಮಾರ್ ರೆಡ್ಡಿ ಅವರಿಗೆ ಟೆಸ್ಟ್ ತಂಡದಲ್ಲಿ ಆಡುವ ಅವಕಾಶ ನೀಡಲಾಗಿದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಉಪನಾಯಕರಾಗಿದ್ದಾರೆ. ಆದರೆ ಗಾಯದ ಕಾರಣದಿಂದ ವೇಗಿ ಮೊಹಮ್ಮದ್ ಶಮಿ, ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ಸ್ಥಾನ ಸಿಕ್ಕಿಲ್ಲ. ವೇಗಿ ಮಯಂಕ್ ಯಾದವ್ ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ ಅವರಿಗೂ ಸ್ಥಾನವಿಲ್ಲ.

ಅಕ್ಷರ್ ಅವರಿಗೆ ಟಿ20 ತಂಡದಲ್ಲಿ ಅವಕಾಶ ನೀಡಲಾಗಿದೆ.



ಹರ್ಷಿತ್ ರಾಣಾ



ವೈಶಾಖ ವಿ.

ಬಿಸಿಸಿಐ ಸೀನಿಯರ್ ತಂಡಗಳ ಆಯ್ಕೆ ಸಮಿತಿಯು ಈ ತಂಡಗಳನ್ನು ಪ್ರಕಟಿಸಿದೆ.

ಟೆಸ್ಟ್ ತಂಡ ಇಂತಿದೆ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಅಭಿಮನ್ಯು ಈಶ್ವರನ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ರಿಷಭ್ ಪಂತ್, ಧ್ರುವ ಜುರೇಲ್ (ಇಬ್ಬರೂ ವಿಕೆಟ್‌ಕೀಪರ್), ಸರ್ಫರಾಜ್ ಖಾನ್, ಆರ್. ಅಶ್ವಿನ್, ರವೀಂದ್ರ ಜಡೇಜ, ಮೊಹಮ್ಮದ್ ಸಿರಾಜ್, ಆಕಾಶದೀಪ್, ಪ್ರಸಿದ್ಧಕೃಷ್ಣ, ಹರ್ಷಿತ್ ರಾಣಾ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್.

ದಕ್ಷಿಣ ಆಫ್ರಿಕಾ ಟಿ20 ಸರಣಿಗೆ ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್‌ಕೀಪರ್), ರಿಂಕು ಸಿಂಗ್, ತಿಲಕ್ ವರ್ಮಾ, ಜಿತೇಶ್ ಶರ್ಮಾ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ರಮಣದೀಪ್ ಸಿಂಗ್, ವರುಣ್ ಚಕ್ರವರ್ತಿ, ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್, ವಿಜಯಕುಮಾರ್ ವೈಶಾಖ, ಆವೇಶ್ ಖಾನ್, ಯಶ್ ದಯಾಳ್.

ಕೊಕ್ಕೊ ವಿಶ್ವಕಪ್: 24 ತಂಡಗಳು

ನವದೆಹಲಿ: ಇಂಗ್ಲೆಂಡ್, ಜರ್ಮನಿ, ಹಾಲೆಂಡ್, ಅಮೆರಿಕ ಸೇರಿದಂತೆ ಒಟ್ಟು 24 ರಾಷ್ಟ್ರಗಳ ತಂಡಗಳು 2025ರಲ್ಲಿ ನಡೆಯುವ ಮೊದಲ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ ಎಂದು ಕೊಕ್ಕೊ ರಾಷ್ಟ್ರೀಯ ಫೆಡರೇಷನ್ ಶುಕ್ರವಾರ ತಿಳಿಸಿದೆ.

ನವದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಜನವರಿ 13ರಿಂದ 19ರವರೆಗೆ ಟೂರ್ನಿ ನಡೆಯಲಿದೆ.

ರಣಜಿ ಕ್ರಿಕೆಟ್: ಕರ್ನಾಟಕ–ಬಿಹಾರ ಪಂದ್ಯ ಇಂದಿನಿಂದ

ಜಯದ ಮೇಲೆ ಮಯಂಕ್ ಪಡೆ ಕಣ್ಣು

ಪ್ರಜಾವಾಣಿ ವಾರ್ತೆ



ಮಯಂಕ್ ಅಗರವಾಲ್

ಪಟ್ನಾ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಈ ಬಾರಿಯ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸ ಬೇಕಾದರೆ ಕಠಿಣ ಸವಾಲಿನ ಹಾದಿಯನ್ನು ಕ್ರಮಿಸಬೇಕಿದೆ. ಸಿ ಗುಂಪಿನಲ್ಲಿ ಮುಂದಿರುವ ಐದು ಪಂದ್ಯಗಳಲ್ಲಿ ಗೆದ್ದರೆ ಹಾದಿ ಸುಗಮವಾಗಬಹುದು. ಶನಿವಾರ ಬಿಹಾರ ವಿರುದ್ಧ ಆರಂಭವಾಗಲಿರುವ ಪಂದ್ಯದಿಂದಲೇ ಈ ಗೆಲುವಿನ ಓಟವನ್ನು ಆರಂಭಿಸುವ ಛಲದಲ್ಲಿದೆ.

ಕರ್ನಾಟಕ ತಂಡದ ಮೊದಲೆರಡೂ ಪಂದ್ಯಗಳೂ ಮಳೆಯಲ್ಲಿ ಮುಳುಗಿದ್ದವು. ಅದರಿಂದಾಗಿ ಎರಡು ಪಂದ್ಯಗಳಿಂದ ಒಟ್ಟು 2 ಅಂಕಗಳು ಮಾತ್ರ ಲಭಿಸಿವೆ. ಅಂಕಿ, ಸಂಖ್ಯೆ ಮತ್ತು ಅನುಭವದ ಹೋಲಿಕೆಯಲ್ಲಿ ಕರ್ನಾಟಕ, ಬಿಹಾರ ತಂಡಕ್ಕಿಂತ ಬಲಾಢ್ಯವಾಗಿದೆ. ಆದ್ದರಿಂದ ಗೆಲುವಿನ ಸಾಧ್ಯತೆಗಳು ಹೆಚ್ಚಿವೆ. ಪೂರ್ಣ ಅಂಕಗಳನ್ನು ಕಲೆಹಾಕಲು ಇದು ಉತ್ತಮ ಅವಕಾಶವಾಗಿದೆ.

ಮೊದಲ ಪಂದ್ಯದಲ್ಲಿ ನಿಕಿನ್ ಜೋಸ್ 1 ರನ್ ಅಂತರದಿಂದ ಶತಕ ತಪ್ಪಿಸಿಕೊಂಡಿದ್ದರು. ಶ್ರೇಯಸ್ ಗೋಪಾಲ್ ಅರ್ಧಶತಕ ಗಳಿಸಿದ್ದರು. ಮಯಂಕ್ ಅಗರವಾಲ್ ಮತ್ತು ಮನೀಷ್ ಪಾಂಡೆ ಅವರು ಉತ್ತಮ ಲಯಕ್ಕೆ ಮರಳಿದರೆ ಬ್ಯಾಟಿಂಗ್‌ಗೆ ಬಲ ಬರಲಿದೆ. ಈ ಪಂದ್ಯದಲ್ಲಿ ದೇವದತ್ತ ಪಡಿಕ್ಕಲ್ ಲಭ್ಯರಿಲ್ಲ. ಅವರು ಭಾರತ ಎ ತಂಡದಲ್ಲಿ ಆಡಲು ತೆರಳಿದ್ದಾರೆ. ವೇಗಿ ವಿದ್ವತ್ ಕಾವೇರಪ್ಪ ಕೂಡ ಅವರೊಂದಿಗೇ ಇದ್ದಾರೆ.

ಹೊಸ ಪ್ರತಿಭೆಗಳಾದ ಆರ್. ಸ್ಮರಣ್, ಸುಜಯ್ ಸತೇರಿ, ಬೌಲರ್ ವಿದ್ಯಾಧರ್ ಪಾಟೀಲ, ಆಲ್‌ರೌಂಡರ್ ಹಾರ್ದಿಕ್ ರಾಜ್ ಅವರಿಗೆ ತಮ್ಮ ಪ್ರತಿಭೆ ಮೆರೆಯಲು ಇದು ಸದವಕಾಶವಾಗಿದೆ.

ಮೂವರು ಮಧ್ಯಮ ವೇಗಿಗಳಿಗೆ ಅವಕಾಶ: ಗೌಡ

ಬಿಹಾರದ ರಾಜಧಾನಿ ಪಟ್ನಾದಲ್ಲಿ ಶನಿವಾರ ಕರ್ನಾಟಕ ತಂಡದವರು ಅಭ್ಯಾಸ ಮಾಡಿದರು. ಪ್ರಸ್ತುತ ಟೂರ್ನಿಯಲ್ಲಿ ಎರಡು ಸುತ್ತುಗಳು ಮುಗಿದಿವೆ. ಆದರೂ ಪೂರ್ಣಪ್ರಮಾಣದಲ್ಲಿ ಆಡಲು ತಂಡಕ್ಕೆ ಸಾಧ್ಯವಾಗಿಲ್ಲ. ಮಳೆಯಿಂದಾಗಿ ಎರಡೂ ಪಂದ್ಯಗಳು ಡ್ರಾ ಆಗಿದ್ದವು.

‘ಪಿಚ್ ಉತ್ತಮವಾಗಿದೆ. ಮೂವರು ಮಧ್ಯಮ ವೇಗಿಗಳು ಮತ್ತು ಇಬ್ಬರು ಸ್ಪಿನ್ನರ್‌ಗಳ ಸಂಯೋಜನೆಯೊಂದಿಗೆ ಕಣಕ್ಕಿಳಿಯುತ್ತೇವೆ. ಇವತ್ತು ಸ್ವಲ್ಪ ಮಂದ ಬೆಳಕು ಮತ್ತು ಮೋಡಗಳು ಇವೆ. ಆದರೆ ಪಂದ್ಯದ ದಿನಗಳಲ್ಲಿ ಮಳೆ ಬರುವ ಲಕ್ಷಣಗಳಿಲ್ಲ’ ಎಂದು ಕರ್ನಾಟಕ ತಂಡದ ಮುಖ್ಯ ಕೋಚ್ ಯರೇ ಗೌಡ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾವು ಮುಂಬರುವ ಎಲ್ಲ ಪಂದ್ಯಗಳಲ್ಲಿ ಜಯಿಸುವತ್ತಲೇ ಚಿತ್ತ ನೆಟ್ಟಿದ್ದೇವೆ. ಕ್ವಾರ್ಟರ್‌ಫೈನಲ್ ಲೆಕ್ಕಾಚಾರದ ಬಗ್ಗೆ ಈಗಲೇ ಯೋಚಿಸುತ್ತಿಲ್ಲ. ಈ ಪಂದ್ಯದ ನಂತರದ ಬೆಳವಣಿಗೆಯನ್ನು ನೋಡಿ ಲೆಕ್ಕಾಚಾರ ಮಾಡುತ್ತೇವೆ’ ಎಂದರು.

ಬೌಲಿಂಗ್ ವಿಭಾಗದ ಸಂಪೂರ್ಣ ಜವಾಬ್ದಾರಿ ವೈಶಾಖ ವಿಜಯಕುಮಾರ್, ವಿ. ಕೌಶಿಕ್ ಅವರ ಮೇಲೆ ಹೆಚ್ಚಿದೆ.

ವಿ. ಪ್ರತಾಪ್ ಸಿಂಗ್ ಅವರ ನಾಯಕತ್ವದ ಬಿಹಾರ ತಂಡವು ತನ್ನ ಮೊದಲ ಪಂದ್ಯದಲ್ಲಿ ಹರಿಯಾಣ ವಿರುದ್ಧ ಸೋತಿತ್ತು. ಬಂಗಾಳ ಎದುರಿನ ಎರಡನೇ ಪಂದ್ಯವು ಮಳೆಯಿಂದಾಗಿ ಒಂದೂ ಎಸೆತ ಕಾಣದೇ ಕೊನೆಯಾಗಿತ್ತು. ಇದರಿಂದ ಉಭಯ ತಂಡಗಳಿಗೆ ತಲಾ ಒಂದು ಅಂಕ ದೊರೆತಿತ್ತು.

ಪಂದ್ಯ ಆರಂಭ: ಬೆಳಿಗ್ಗೆ 9.30



ಪ್ರೊ ಕಬಡ್ಡಿ ಪಂದ್ಯದಲ್ಲಿ ಪಟ್ನಾ ಪೈರೇಟ್ ತಂಡದ ರೈಡರ್ ದೇವಾಂಕ್ ಅವರನ್ನು ಹಿಡಿಯಲು ಯತ್ನಿಸಿದ ತಮಿಳು ತಲೈವಾಸ್ ತಂಡದ ಆಟಗಾರರು –ಎಕ್ಸ್ ಚಿತ್ರ

ದೇವಾಂಕ್ ಮಿಂಚು: ಪಟ್ನಾಗೆ ಜಯ

ಹೈದರಾಬಾದ್ (ಪಿಟಿಐ): ದೇವಾಂಕ್ (25 ಪಾಯಿಂಟ್ಸ್) ಅವರ ಅಮೋಘ ರೇಡಿಂಗ್ ಸಾಹಸದಿಂದ ಪಟ್ನಾ ಪೈರೇಟ್ಸ್ ತಂಡ ಹಿನ್ನಡೆಯಿಂದ ಚೇತರಿಸಿಕೊಂಡು ಪ್ರೊ ಕಬಡ್ಡಿ ಲೀಗ್‌ನ ಕುತೂಹಲಕರ ಪಂದ್ಯದಲ್ಲಿ ಶುಕ್ರವಾರ ತಮಿಳ್ ತಲೈವಾಸ್ ತಂಡವನ್ನು 42–40 ಪಾಯಿಂಟ್‌ಗಳಿಂದ ಸೋಲಿಸಿತು. ಹಾಲಿ ಲೀಗ್‌ನಲ್ಲಿ ಎರಡನೇ ಪಂದ್ಯವಾಡಿದ ಪೈರೇಟ್ಸ್ ಮೊದಲ ಜಯ ದಾಖಲಿಸಿತು.

ರೇಡರ್ ನರೇಂದರ್ ಖಂಡೋಲಾ ಅವರ ನೇತೃತ್ವದಲ್ಲಿ ತಲೈವಾಸ್ ತಂಡ ಉತ್ತಮ ಆರಂಭ ಮಾಡಿತ್ತು. ಅವರಿಗೆ ರೇಡಿಂಗ್‌ನಲ್ಲಿ ಸಚಿನ್ ಮತ್ತು ರಕ್ಷಣಾ ವಿಭಾಗದಲ್ಲಿ ನಿತೇಶ್ ಬೆಂಬಲ ನೀಡಿದ್ದರು. ಗಚ್ಚಿಬೌಲಿಯ ಜಿಎಂಸಿ ಬಾಲಯೋಗಿ ಒಳಾಂಗಣ ಕ್ರೀಡಾಂಗಣದಲ್ಲಿ ಮಧ್ಯಂತರದ ವೇಳೆಗೆ ತಲೈವಾಸ್ ತಂಡ 5 ಪಾಯಿಂಟ್‌ಗಳ ಉತ್ತಮ ಮುನ್ನಡೆ ಪಡೆದಿತ್ತು. ಖಂಡೋಲಾ ವಿರಾಮಕ್ಕೆ ಮೊದಲೇ ಸೂಪರ್ ಟೆನ್ ಪೂರೈಸಿದ್ದರು.

ತಲೈವಾಸ್ ಪರ ನರೇಂದರ್ ಖಂಡೋಲಾ 15 ಪಾಯಿಂಟ್ ಮತ್ತು ಸಚಿನ್ 6 ಪಾಯಿಂಟ್ಸ್ ಕಲೆಹಾಕಿದರು. ನಿತೀಶ್ 4 ಪಾಯಿಂಟ್ ಗಳಿಸಿದರು.

ಬುಲ್ಸ್‌ಗೆ ನಾಲ್ಕನೇ ಸೋಲು: ಹತ್ತನೇ ಆವೃತ್ತಿಯ ವಿಜೇತ ಪುಣೇರಿ ಪಲ್ಟನ್ ತಂಡ ದಿನದ ಎರಡನೇ ಪಂದ್ಯದಲ್ಲಿ 14 ಪಾಯಿಂಟ್‌ಗಳಿಂದ (32–22) ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು.

ಇದು ಪಲ್ಟನ್‌ಗೆ 4 ಪಂದ್ಯಗಳಲ್ಲಿ ಮೂರನೇ ಜಯ. ಬುಲ್ಸ್‌ಗೆ ಸತತ ನಾಲ್ಕನೇ ಸೋಲು.

ಎಡ್ಗರ್ ಗೋಲು ಡಬಲ್ • ಬಿಎಫ್‌ಸಿಗೆ ಮಣಿದ ಕೇರಳ

ಬೆಂಗಳೂರು ಗೆಲುವಿನ ಓಟ ನಿರಂತರ

ಪ್ರಜಾವಾಣಿ ವಾರ್ತೆ

ಕೊಚ್ಚಿ: ಎಡ್ಗರ್ ಮೆನ್ಡೆಜ್ ಗಳಿಸಿದ ಎರಡು ಗೋಲುಗಳ ಬಲದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಶುಕ್ರವಾರ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿ ಪಂದ್ಯದಲ್ಲಿ 3–1ರಿಂದ ಕೇರಳ ಬ್ಲಾಸ್ಟರ್ಸ್ ವಿರುದ್ಧ ಗೆದ್ದಿತು.

ಇದರೊಂದಿಗೆ ಟೂರ್ನಿಯಲ್ಲಿ ಬಿಎಫ್‌ಸಿ ತಂಡವು ಅಜೇಯ ಓಟ ಮುಂದುವರಿಸಿದೆ. ಒಟ್ಟು 6 ಪಂದ್ಯಗಳನ್ನು ಆಡಿರುವ ಬೆಂಗಳೂರು ತಂಡವು 5ರಲ್ಲಿ ಜಯಿಸಿದೆ. 1 ಪಂದ್ಯ ಡ್ರಾ ಆಗಿದೆ. ಒಟ್ಟು 16 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಜೆಮ್ಶೆಡ್‌ಪುರ ಎಫ್‌ಸಿ ತಂಡವು 12 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿಯ ಜಾರ್ಜ್ ಪೆರಿಯರ್ ದಿಯಾಜ್ (8ನೇ ನಿ) ಮೊದಲ ಗೋಲು ಗಳಿಸಿದರು. ಪಂದ್ಯದ ಅರ್ಧಭಾಗದಲ್ಲಿ ಬಿಎಫ್‌ಸಿ 1–0 ಮುನ್ನಡೆ ಕಾಪಾಡಿಕೊಂಡಿತ್ತು.

ಆದರೆ ಕೇರಳ ತಂಡದ ಜೆಸಿಯಸ್ ಜಿಮೆಂಜ್ (45+2ನಿ) ಅವರು ಪೆನಾಲ್ಟಿಯಲ್ಲಿ ಗೋಲು ಗಳಿಸಿ ತಂಡ ಸಮಬಲ ಸಾಧಿಸಲು ಕಾರಣರಾದರು. ನಂತರ ಉಭಯ ತಂಡಗಳು ಮುನ್ನಡೆ ಸಾಧಿಸಲು ಜಿದ್ದಾಜಿದ್ದಿನ ಹೋರಾಟ ನಡೆಸಿದವು.

ಬೆಂಗಳೂರು ತಂಡದ ಎಡ್ಗರ್ 74ನೇ ನಿಮಿಷ ಮತ್ತು 90+4ನೇ ನಿಮಿಷದಲ್ಲಿ ಎರಡು ಗೋಲು ಗಳಿಸುವಲ್ಲಿ ಸಫಲರಾದರು. ಇದರಿಂದ ತಂಡವು ಗೆಲುವಿನತ್ತ ಹೆಜ್ಜೆ ಹಾಕಿತು.



ಗೋಲು ಗಳಿಸಿದ ಬಿಎಫ್‌ಸಿ ತಂಡದ ಎಡ್ಗರ್ ಮೆಂಡೆಜ್ ಅವರೊಂದಿಗೆ ಸಹ ಆಟಗಾರರು ಸಂಭ್ರಮಿಸಿದರು

ಫುಟ್‌ಬಾಲ್: ರಿಯಲ್ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ರಿಯಲ್ ಬೆಂಗಳೂರು ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಶುಕ್ರವಾರ 2–0 ಗೋಲುಗಳಿಂದ ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡವನ್ನು ಸೋಲಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡವು 2–1 ಗೋಲುಗಳಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಮಣಿಸಿತು.

ಏಷ್ಯನ್ ನೆಟ್‌ಬಾಲ್: ಭಾರತಕ್ಕೆ ಜಯ

ಬೆಂಗಳೂರು: ಲಕ್ಷ್ಮಿ ಕನ್ವರ್ ಅವರ ಅಮೋಘ ಆಟದ ನೆರವಿನಿಂದ ಭಾರತ ತಂಡವು ಏಷ್ಯನ್ ನೆಟ್‌ಬಾಲ್ ಮಹಿಳೆಯರ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಶುಕ್ರವಾರ 69–19ರಿಂದ ಸೌದಿ ಅರೇಬಿಯಾ ತಂಡವನ್ನು ಮಣಿಸಿತು.

ಇಲ್ಲಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಲೀಗ್ ಪಂದ್ಯದಲ್ಲಿ ಲಕ್ಷ್ಮಿ 49 ಪಾಯಿಂಟ್ಸ್ ಗಳಿಸಿ ಗೆಲುವಿನ ರೂವಾರಿಯಾದರು.

ದಿನದ ಇತರ ಪಂದ್ಯಗಳಲ್ಲಿ ಮಲೇಷ್ಯಾ 67–46ರಿಂದ ಫಿಲಿಫೀನ್ಸ್ ತಂಡವನ್ನು; ಬೆಹರೇನ್ 63–26ರಿಂದ ಇರಾಕ್ ತಂಡವನ್ನು; ಶ್ರೀಲಂಕಾ 80–32ರಿಂದ ಮಾಲ್ಡೀವ್ಸ್ ತಂಡವನ್ನು; ಹಾಂಗ್‌ಕಾಂಗ್ 62–60ರಿಂದ ಥಾಯ್ಲೆಂಡ್ ತಂಡವನ್ನು; ಸಿಂಗಪುರ 92–17ರಿಂದ ಚೀನಾ ತೈಪೆ ತಂಡವನ್ನು ಸೋಲಿಸಿತು.

ಕುಸ್ತಿ: ಭಾರತ ತಂಡಗಳಿಗೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ಅಲ್ಬೇನಿಯಾದಲ್ಲಿ ಇದೇ 28ರಿಂದ ನಡೆಯಲಿರುವ ವಿಶ್ವ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲು ಭಾರತದ ತಂಡಗಳಿಗೆ ಕೇಂದ್ರ ಸರ್ಕಾರ ಶುಕ್ರವಾರ ಒಪ್ಪಿಗೆ ನೀಡಿದೆ.

ತಂಡ ಕಳುಹಿಸುವ ನಿರ್ಧಾರದಿಂದ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಗುರುವಾರ ಹಿಂದೆಸರಿದ ನಂತರ, ಈ ಕೂಟಕ್ಕೆ ಆಯ್ಕೆಯಾಗಿದ್ದ ಎಲ್ಲ 12 ಮಂದಿ ಪೈಲ್ವಾನರು (ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ವಿಭಾಗ) ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರ ನಿವಾಸದೆದುರು ಸೇರಿದ್ದರು. ಸಚಿವರು ಮಧ್ಯಪ್ರವೇಶಿಸಬೇಕು ಮತ್ತು ಸಮಸ್ಯೆ ಬಗೆಹರಿಸಬೇಕೆಂದು ಒತ್ತಾಯಿಸಿದ್ದರು.

ಸೀನಿಯರ್ ತಂಡಕ್ಕೆ ಮತ್ತು 23 ವರ್ಷದೊಳಗಿನವರ ತಂಡಕ್ಕೆ ಫೆಡರೇಷನ್ ಆಯ್ಕೆ ಟ್ರಯಲ್ಸ್ ನಡೆಸಿರುವುದನ್ನು ಪ್ರಶ್ನಿಸಿ ಮಾಜಿ ಒಲಿಂಪಿಯನ್ ಸಾಕ್ಷಿ ಮಲಿಕ್ ಅವರ ಪತಿ, ಕುಸ್ತಿಪಟು ಸತ್ಯವ್ರಥ ಕಾದಿಯಾನ್ ಅವರು ಕೋರ್ಟ್ ಮೊರೆಹೋಗಿದ್ದಾರೆ. ನ್ಯಾಯಾಲಯವು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ನೇಮಿಸಿದ್ದ ಅಡ್ ಹಾಕ್ ಸಮಿತಿಗೆ ಮರಳಿ ಅಧಿಕಾರ ನೀಡಿದ್ದು, ಅಮಾನತುಗೊಂಡಿರುವ ಫೆಡರೇಷನ್ ಟ್ರಯಲ್ಸ್ ನಡೆಸುವ ಮೂಲಕ ನ್ಯಾಯಾಂಗ ನಿಂದನೆ ಮಾಡಿದೆ ಎಂದು ದೂರಿದ್ದರು.



ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರ ನಿವಾಸದ ಮುಂದೆ ಸೇರಿದ ಕುಸ್ತಿಪಟುಗಳು –ಪಿಟಿಐ ಚಿತ್ರ

ಕೇಂದ್ರ ಸಚಿವಾಲಯವು, ಫೆಡರೇಷನ್ ಸ್ವಾಯತ್ತತೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದು ಚಾಂಪಿಯನ್‌ಷಿಪ್‌ನಿಂದ ಭಾರತ ತಂಡಗಳನ್ನು ಹಿಂಪಡೆಯುವುದಾಗಿ ಫೆಡರೇಷನ್ ಗುರುವಾರ ವಿಶ್ವ ಕುಸ್ತಿ ಸಂಸ್ಥೆಯಾದ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್‌ಗೆ (ಯುಡಬ್ಲ್ಯುಡಬ್ಲ್ಯು) ತಿಳಿಸಿತ್ತು.

ಕಳೆದ ವರ್ಷದ ಕೊನೆಯಲ್ಲಿ, ಫೆಡರೇಷನ್‌ಗೆ ಹೊಸ ಪದಾಧಿಕಾರಿಗಳ ಆಯ್ಕೆಯ ನಂತರ ಸಚಿವಾಲಯವು ಫೆಡರೇಷನ್‌ಅನ್ನು ಅಮಾನತುಗೊಳಿಸಿದೆ. ಈ ವರ್ಷದ ಫೆಬ್ರುವರಿಯಲ್ಲಿ ಫೆಡರೇಷನ್ ಮೇಲಿನ ಅಮಾನತನ್ನು ಯುಡಬ್ಲ್ಯುಡಬ್ಲ್ಯು ತೆಗೆದುಹಾಕಿದೆ.

‘ಕುಸ್ತಿಪಟುಗಳ ಗುಂಪು ನನ್ನನ್ನು ಭೇಟಿಯಾಗಿ ಪ್ರಸ್ತುತ ಎದುರಾಗಿರುವ ಸಮಸ್ಯೆ ಮತ್ತು ತಮ್ಮ ಮುಂದಿರುವ ಕಳವಳವನ್ನು ತಿಳಿಸಿತು. ನ್ಯಾಯಾಲಯದಲ್ಲಿರುವ ಪ್ರಕರಣ ಅದರ ಪಾಡಿಗೆ ಮುಂದುವರಿಯಲಿದೆ. ಆದರೆ ಕುಸ್ತಿಪಟುಗಳು ವಿಶ್ವ ಕೂಟದಲ್ಲಿ ಭಾಗವಹಿಸಬೇಕು ಎಂದು ನಾನು ನಿರ್ದೇಶನ ನೀಡಿದ್ದೇನೆ. ಎಲ್ಲಿ ಮತ್ತು ಯಾರ ಜೊತೆ ಮಾತನಾಡಬೇಕಿತ್ತೊ ಅಲ್ಲಿ ಮಾತನಾಡಿದ್ದೇನೆ’ ಎಂದು ಮಾಂಡವೀಯ ಸುದ್ದಿಗಾರರಿಗೆ ತಿಳಿಸಿದರು.

ಕುಸ್ತಿಪಟುಗಳು, ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಅವರೊಂದಿಗೆ ಸಚಿವರು ಸಂವಾದ ನಡೆಸಿದರು.

‘ನಾವು ಸಚಿವರ ಜೊತೆ ಸಮಾಲೋಚನೆ ಮಾಡಿದ್ದೇವೆ. ನಮ್ಮ ಮೇಲೆ ನ್ಯಾಯಾಂಗ ನಿಂದನೆ ಆರೋಪ ಹೊರಿಸಿದರೆ, ಆ ಬಗ್ಗೆ ತಾವು ಹೊಣೆ ವಹಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ತಂಡದ ಭಾಗವಹಿಸುವಿಕೆಗೆ ಒಪ್ಪಿದ್ದಾರೆ ಎಂದು ಸಿಂಗ್ ಹೇಳಿದರು.

ಫೈನಲ್‌ಗೆ ಅಫ್ಗನ್: ಭಾರತಕ್ಕೆ ಆಘಾತ

ಮಸ್ಕತ್ (ಪಿಟಿಐ): ಅಫ್ಗಾನಿಸ್ತಾನ ಎ ತಂಡವು ಎಸಿಸಿ ಎಮರ್ಜಿಂಗ್ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ನಲ್ಲಿ ಭಾರತ ಎ ತಂಡವನ್ನು 20 ರನ್‌ಗಳಿಂದ ಮಣಿಸಿ ಫೈನಲ್ ಪ್ರವೇಶಿಸಿದೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡವು ಶೇದಿಕುಲ್ಲಾ ಅಟಲ್ (83;52ಎ) ಮತ್ತು ಜುಬೈದ್ ಅಕ್ಬರಿ (64;41ಎ) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗೆ 206 ರನ್ ಗಳಿಸಿದೆ. ಭಾರತ ಪರ ರಾಸಿಖ್ ಸಲಾಂ ಮೂರು ವಿಕೆಟ್ ಪಡೆದರು.

ಗುರಿಯನ್ನು ಬೆನ್ನತ್ತಿದ ಭಾರತವು ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗೆ 186 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ರಮಣದೀಪ್ ಸಿಂಗ್ (64;34ಎ) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ.

ಭಾನುವಾರ ಫೈನಲ್‌ನಲ್ಲಿ ಅಫ್ಗನ್ ತಂಡವು ಶ್ರೀಲಂಕಾ ಎ ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಶ್ರೀಲಂಕಾ ತಂಡವು ಪಾಕಿಸ್ತಾನ ಶಾಹೀನ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿದೆ.

ಸಂಕ್ಷಿಪ್ತ ಸ್ಕೋರ್: ಅಫ್ಗಾನಿಸ್ತಾನ ಎ: 20 ಓವರ್‌ಗಳಲ್ಲಿ 20 ಓವರ್‌ಗಳಲ್ಲಿ 4ಕ್ಕೆ 206 (ಜುಬೈದ್ ಅಕ್ಬರಿ 64, ಶೇದಿಕುಲ್ಲಾ ಅಟಲ್ 83, ಕರೀಂ ಜನತ್ 41; ರಾಸಿಖ್ ಸಲಾಂ 25ಕ್ಕೆ 3). ಭಾರತ ಎ: 20 ಓವರ್‌ಗಳಲ್ಲಿ 7ಕ್ಕೆ 186 (ನೆಹಾಲ್ ವಧೇರಾ 20, ರಮಣದೀಪ್ ಸಿಂಗ್ 64, ನಿಶಾಂತ್ ಸಿಂಧು 23; ಎ.ಎಂ. ಗಜನ್ಫರ್ 14ಕ್ಕೆ 2, ಅಬ್ದುಲ್ ರೆಹಮಾನ್ 32ಕ್ಕೆ 2). **ಫಲಿತಾಂಶ:** ಅಫ್ಗಾನಿಸ್ತಾನಕ್ಕೆ 20 ರನ್‌ಗಳ ಜಯ



THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Executive-Maintenance/Production

Department : Production
Qualification : BE or Diploma (Electrical, Mechanical or Mechatronics)
Experience : 4 years and above
Job Location : Kumbalgodu (Bangalore), Mangalore

Requirement:

- Should have hands on experience in maintenance and service of High-speed web offset press, Mail room, utility equipment
- Should be thorough in breakdown maintenance, predictive maintenance, preventive and autonomous maintenance.
- Should be willing to work in shifts including night shift.
- Should be able to communicate both in English and Kannada.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

Pure Since 1925

ಭೀಮ

ಬೆಳಗಿಸಿ
ನಿಮ್ಮ ಸಂಭ್ರಮಾಚರಣೆಗಳನ್ನು.

- ದಿ ಗ್ರೇಟ್ -
ಭೀಮ ದೀಪಾವಳಿ ಫೆಸ್ಟಿವಲ್

ಕೊಡುಗೆಗಳು, 4 ಅಕ್ಟೋಬರ್ ರಿಂದ 10 ನವೆಂಬರ್, 2024 ರವರೆಗೆ

ಲಕ್ಕಿ ಡ್ರಾ
ಪ್ರತಿ 10 ಗ್ರಾಹಕರಲ್ಲಿ ಒಬ್ಬರಿಗೆ
₹10,000*
ನಗದು ಬಹುಮಾನ.


ಚಿನ್ನ ಮತ್ತು ಬೆಳ್ಳಿ
ಮೇಕಿಂಗ್ ಶುಲ್ಕದ ಮೇಲೆ
70%*
ವರೆಗೆ ರಿಯಾಯಿತಿ

ವಜ್ರ
ಪ್ರತಿ ಕ್ಯಾರೆಟ್‌ಗೆ ಫ್ಲಾಟ್
₹7,000*
ರಿಯಾಯಿತಿ, ಜೊತೆಗೆ ಪ್ರತಿ ಕ್ಯಾರೆಟ್‌ಗೆ ಒಂದು ಗ್ರಾಂ ಚಿನ್ನದ ನಾಣ್ಯ ಉಚಿತ

ಹಳೆಯ ಚಿನ್ನದ ವಿನಿಮಯ
ಪ್ರತಿ ಗ್ರಾಂಗೆ
₹100*
ಹೆಚ್ಚುವರಿ ಪಡೆಯಿರಿ

* ಷರತ್ತುಗಳು ಅನ್ವಯ

BHIMA



FORMERLY BHIMA GOLD • DIAMONDS • SILVER • PLATINUM

ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ

BHIMA Helpline 1800-121-9076 (10:00 a.m. to 7:00 p.m.)

ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ

HONDA

Shine 100



5% ಕ್ಯಾಶ್‌ಬ್ಯಾಕ್ ₹5000# ವರೆಗೆ

ಕಡಿಮೆ ಡೌನ್ ಪೇಮೆಂಟ್ ₹1100*

Special offer
10 Years Warranty^
Valid till 31st Oct. '24

₹66600
ಎಕ್ಸ್-ಶೋರೂಂ ಬೆಲೆ (ಕರ್ನಾಟಕ)

Scan for Instant Booking**

ಹೆಚ್ಚಿನ ಮಾಹಿತಿಗಾಗಿ 7230032200 ಮಿಸ್ ಕಾಲ್ ನೀಡಿ

IDFC FIRST Bank Bank*/Credit Card# | HDFC BANK Credit Card# | TATA CAPITAL Two Wheeler Loans | Chola Enter a better life

#Cashback Offer available on all Honda two-wheeler models for EMI transactions made using HDFC Bank credit cards & IDFC First Bank credit cards through Pine Labs machines only. #Customers can avail 5% Instant cashback, up to a maximum of Rs. 5000. #Valid on one transaction per card/order during the offer period. #Cashback offer valid until 30th November 2024. #The scheme is available in select outlets only. *Approval of the loan is at the sole discretion of the financiers, and additional documentation may be required. *The interest rates, down payment, and tenure options are based on the financier's assessment of the applicant's credit profile. *The offers/features may be modified or withdrawn at any time without prior intimation. *Offer valid until 30th November 2024. ^3 years of standard and 7 years of free extended warranty only on Shine 100. ^This scheme is offered by Authorised Main Dealers and Associate Dealers. ^Offer valid until 31st October 2024. Product shown in the picture may vary from actual product available in the market. Accessories shown in the picture are not part of standard equipment. **Instant online booking facility available at selected Dealership only.

ಡೀಲರ್ ವಿವರಗಳಿಗಾಗಿ QR ಕೋಡ್ ಸ್ಕ್ಯಾನ್ ಮಾಡಿ

ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda.hmsi.in

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **MALLESHWARAM:** 8971887792; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com